ಕರ್ನಾಟಕ ವಿಧಾನಸಭೆ

ಗುರುವಾರ 26ನೇ ಮಾರ್ಚ್ 1998 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ : 10- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು

1) ಸಂತಾಪ ಸೂಚನೆ

ಅಧ್ಯಕ್ಷರು :- ಮಾಜಿ ಶಾಸಕರಾದ ಶ್ರೀ ವಿ. ಎನ್. ಪಾಟೀಲ್ ಅವರು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಮಾಜಿ ಶಾಸಕರಾದ ಶ್ರೀ ವಿ. ಎನ್. ಪಾಟೀಲ್ ಅವರು ದಿನಾಂಕ 13ನೇ ಮಾರ್ಚ್ 1927 ರಂದು ಬೀದರ್ ಜಿಲ್ಲೆ, ಹುಮ್ನಾಬಾದ್ ತಾಲ್ಲೂಕ್, ಮೀನ್‌ಕೇರಿ ಎಂಬಲ್ಲಿ ಜನಿಸಿದರು. ಶ್ರೀಯುತರು ಹುಮ್ನಾಬಾದ್ ವಿಧಾನಸಭಾ ಕ್ಷೇತ್ರವನ್ನು 4ನೇ ಮತ್ತು 5ನೇ ವಿಧಾನ ಸಭೆಯನ್ನು ಪ್ರತಿನಿಧಿಸಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಇವರು ಬೀದರ್ ಜಿಲ್ಲೆಯ ಏಕೈಕ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದವರು. 1946-48 ರಲ್ಲಿ ರಜಾಕರ್ ಮೂವ್‌ಮೆಂಟನ್ನು ವಿರೋದಿಸಿದ್ದ ಇವರು ಹೈದರಾಬಾದ್ ರಾಜ್ಯವನ್ನು ವಿಭಜಿಸಿ ಹೈದರಾಬಾದ್ -ಕರ್ನಾಟಕ ಪ್ರಾಂತ್ಯವನ್ನು ರಚಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಶ್ರೀಯುತರು ತಮ್ಮ 70ನೇ ವಯಸ್ಸಿನಲ್ಲಿ ತಮ್ಮ ಸ್ವಗ್ರಾಮವಾದ ಮೀನ್‌ಕೇರಿಯಲ್ಲಿ ದಿನಾಂಕ 24.3.98 ರಂದು ನಿಧನರಾದರು. ಆದ್ದರಿಂದ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೌನವನ್ನು ಆಚರಿಸಿದ ನಂತರ)

ಅಧ್ಯಕ್ಷರು :- ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

2. ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದುವರೆದುದು)

★ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, 4ನೇ ವರ್ಷದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಈ ರಾಜ್ಯದ ಬಡ್ಜೆಟ್ ಅನ್ನು ಇಟ್ಟಿದ್ದಾರೆ. ಆಯವ್ಯಯವನ್ನು ಮಂಡಿಸುವಾಗ ಸಾಮಾನ್ಯವಾಗಿ ಸರಕಾರ ಒಂದು ನಿರ್ದಿಷ್ಟವಾದಂತಹ ಗುರಿ ಇಟ್ಟು ಆಯವ್ಯಯವನ್ನು ಮಂಡಿಸುತ್ತದೆ. ಆದರೆ, ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿರತಕ್ಕಂತಹ 1998-99ನೇ ಆಯವ್ಯಯದಲ್ಲಿ ಯಾವುದೇ ಒಂದು ಗೊತ್ತು ಗುರಿ ಇದೆ ಎಂದು ನನಗೆ ಅನ್ನಿಸುತ್ತಿಲ್ಲ. ಗೊತ್ತು ಗುರಿ ಇಲ್ಲದೇ ಇರತಕ್ಕಂತಹ ಬಡ್ಜೆಟ್ಟನ್ನು ಮಂಡಿಸಿ ಈ ರಾಜ್ಯವನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕೆಂದು ಹೊರಟಿದ್ದಾರೆಂದು - ಹೇಳತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಿದ್ಧರಾಮಯ್ಯನವರಂತಹ ಹಣಕಾಸು ಮಂತ್ರಿಗಳು ಈ ರಾಜ್ಯದಲ್ಲಿನ ಸಮಸ್ಯೆಗಳ ಬಗ್ಗೆ ರಾಜ್ಯದ ಆರ್ಥಿಕ ಬೆಳವಣಿಗೆ ಮತ್ತು ಈ ರಾಜ್ಯದ ಅಭಿವೃದ್ಧಿ ಬಗ್ಗೆ

ಪ್ರಾಮಾಣಿಕವಾದಂತಹ ಕಾಳಜಿ ಹೊಂದಿರುತ್ತಾರೆಂದು ನಾನು ಭಾವಿಸಿದ್ದೆ. ಇಂತಹ ಕಾಳಜಿ ಇರತಕ್ಕಂತಹ ಮಾನ್ಯ ಸಿದ್ಧರಾಮಯ್ಯನವರು ಏಕೆ ಈ ರೀತಿಯಾಗಿ ಬಜ್ಜೆಟ್ ಇಟ್ಟಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಯಾವುದೇ ಒಂದು ರಾಜಕೀಯ ಪಕ್ಷವು ಸರಕಾರ ನಡೆಸುತ್ತದೆ ಆ ರೀತಿ ನಡೆಸತಕ್ಕಂತಹ ರಾಜಕೀಯ ಪಕ್ಷಕ್ಕೆ ತನ್ನದೇ ಆದಂತಹ ಗೊತ್ತು ಗುರಿಯನ್ನು ಇಟ್ಟು ಬಜ್ಜೆಟ್ಟನ್ನು ಮಂಡಿಸುವಾಗ ರಾಜಕೀಯ ಉದ್ದೇಶ ಇರುತ್ತದೆ. ಇದನ್ನು ಯಾರೂ ಅಲ್ಲಗೆಳೆಯಲಿಕ್ಕೆ ಸಾಧ್ಯವಿಲ್ಲ. It is the right of every political party to have its own interest on the budget but no political party has a right to dismantle growth and the state's economy. ಬಜ್ಜೆಟ್ಟಿನಲ್ಲಿ ಅವರ ರಾಜಕೀಯ ಉದ್ದೇಶ ಇರಬೇಕಾಗುತ್ತದೆ. ಆದರೆ ಈ ರಾಜ್ಯದ ಆರ್ಥಿಕ ಅಭಿವೃದ್ಧಿ ಬೆಳವಣಿಗೆಯನ್ನು ಕುಂಠಿತಗೊಳಿಸತಕ್ಕಂತಹ ಅಥವಾ ಅದನ್ನು ಸಂಪೂರ್ಣವಾಗಿ ಹಾಳು ಗೆಡುವತಕ್ಕಂತಹ ಯಾವುದೇ ಉದ್ದೇಶ ಬಜ್ಜೆಟ್ಟಿನಲ್ಲಿ ಇಡಲಿಕ್ಕೆ ಯಾವುದೇ ಸರಕಾರಕ್ಕೆ ಹಕ್ಕು ಇಲ್ಲ. Every political party will have their own political interest on the budget. That is their right. We agree. But no political party and Government should have a right to dismantle the growth of the State's economy. ಇದನ್ನು ಏಕೆ ಹೇಳುತ್ತಿದ್ದೇನೆಂದರೆ,

Mr. Speaker :- Can there be a political party whose ultimate intention would be to harm the economic growth of the State?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- Yes. Definitely. In this budget I am seeing it. ಏಕೆ ಎಂದು ನಾನು ಹೇಳುತ್ತೇನೆ. 9ನೇ ಪೇಜಿನಲ್ಲಿ ಇದೆ. ನಾನು ಒಂದು ಉದಾಹರಣೆ ಕೊಡುತ್ತೇನೆ. ಡಿಸ್ಮ್ಯಾಂಟಿಲ್ ಮಾಡಲಿಕ್ಕೆ ಹೇಗೆ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ ಎಂದು ಉದಾಹರಣೆ ಕೊಡುತ್ತೇನೆ. 9ನೇ ಪೇಜಿನ 18ನೇ ಪ್ಯಾರದಲ್ಲಿ ಕರ್ನಾಟಕ ರಾಜ್ಯ ಹೊಂದಿರತಕ್ಕಂತಹ ಎಲ್ಲಾ ಕಾರ್ಖಾನೆಗಳಲ್ಲಿ ಹಾಕಿರತಕ್ಕಂತಹ ಬಂಡವಾಳವನ್ನು ಸಂಪೂರ್ಣವಾಗಿ ಅಥವಾ ವಾಪಸ್ ಪಡೆಯಬೇಕೆಂಬ ತೀರ್ಮಾನಕ್ಕೆ ನೀವು ಬಂದಿದ್ದೀರಿ. ಅದಕ್ಕೆ ನೀವು ಏನು ಕಾರಣ ಹೇಳುತ್ತೀರಿ ಎಂದರೆ 7ನೇ ಪುಟದಲ್ಲಿ ಹೀಗೆ ಹೇಳಿದ್ದೀರಿ. ಕಳೆದ ಆಯವ್ಯಯದಲ್ಲಿ ನಾನು ಬಳಕೆದಾರರ ವಸ್ತುವನ್ನು ಉತ್ಪಾದಿಸುವ ಸಾರ್ವಜನಿಕ ಉದ್ಯಮಗಳಲ್ಲಿನ ಸರಕಾರಿ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸಿದ್ದೆ. ಈ ನಿಟ್ಟಿನಲ್ಲಿ ನಾವು ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು 1998-99ನೇ ಸಾಲಿನ ಕೆಲವು ಉದ್ದಿಮೆಗಳಲ್ಲಿನ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಕಾರ್ಯ ಸಂಪೂರ್ಣ ಇಲ್ಲವೇ ಭಾಗಶಃ ಈಡೇರಬಹುದೆಂದು ಭಾವಿಸುತ್ತೇನೆಂದು ಇಲ್ಲಿ ಇದೆ. ಒಂದು ರಾಜ್ಯದ ಆರ್ಥಿಕ ಬೆಳವಣಿಗೆಯಾಗಬೇಕು ಎಂದರೆ ಆರ್ಥಿಕ ಅಭಿವೃದ್ಧಿಯಾಗಬೇಕು. ಕೈಗಾರಿಕಾ ರಂಗದಲ್ಲಿ, ಕೃಷಿರಂಗದಲ್ಲಿ, ಅಭಿವೃದ್ಧಿಯಾಗಬೇಕಾಗುತ್ತದೆ. ಶಿಕ್ಷಣ ರಂಗದಲ್ಲಿ ಕೂಡ ಅಭಿವೃದ್ಧಿಯಾಗಬೇಕಾಗುತ್ತದೆ. ಎರಡು ಪ್ರಮುಖ ಅಂಶಗಳು ಈ ಅಭಿವೃದ್ಧಿಯಲ್ಲಿ ಇರುತ್ತದೆ. ಆರ್ಥಿಕಾಭಿವೃದ್ಧಿ ಇನ್ನೊಂದು ಮಾನವ ಸಂಪನ್ಮೂಲದ ಅಭಿವೃದ್ಧಿ ಆಗಬೇಕು. ಮಾನವ ಸಂಪನ್ಮೂಲದ ಅಭಿವೃದ್ಧಿ ಇಲ್ಲದೇ ಯಾವುದೇ ಒಂದು ರಾಜ್ಯ ಅಥವಾ ದೇಶ ಪ್ರಗತಿ ಹೊಂದಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಆರ್ಥಿಕ ಅಭಿವೃದ್ಧಿ ಹೊಂದಬೇಕಾದರೆ ಕೈಗಾರಿಕೆಗಳು ಬೆಳವಣಿಗೆಗಳು, ಉದ್ಯೋಗಾವಕಾಶಗಳು ಹೆಚ್ಚಾಗಬೇಕಾಗಿದೆ. ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚು ಕ್ರೋಢಿಕರಿಸಬೇಕಾಗುತ್ತದೆ. ಸಂಪನ್ಮೂಲಗಳನ್ನು ಹೆಚ್ಚಿಸುವುದರ ಮುಖಾಂತರ ರಾಜ್ಯದ ಅಭಿವೃದ್ಧಿಯನ್ನು

ಹೆಚ್ಚಿಸಬೇಕು, ಹಣಕಾಸು ಸ್ಥಿತಿಯನ್ನು ಉತ್ತಮಗೊಳಿಸಬೇಕಾಗುತ್ತದೆ. ಆಗ ನಿಜವಾಗಲೂ ಒಂದು ರಾಜ್ಯದ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯ. ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ಇರತಕ್ಕಂತಹ ದಾರಿ ನಿಮ್ಮ ಬಡ್ಜೆಟ್‌ನಲ್ಲಿ ಯಾವುದು ಇದೆ ಎಂದು ನೋಡಬೇಕಾಗುತ್ತದೆ. ನಿಮ್ಮ ಬಡ್ಜೆಟ್ ಉದ್ದಗಲಕ್ಕೂ ನೋಡುವಾಗ ನಾನು ಒಂದು ಕಡೆ ಎಂದು ಹೇಳುವುದಿಲ್ಲ. ವಿದೇಶೀ ಸಾಲಗಳು ವಿದೇಶಿ ನೆರವಿನ ಮೇಲೆ ಆಧಾರವಿಟ್ಟಿರತಕ್ಕಂಥಾದ್ದನ್ನು ಬಡ್ಜೆಟ್ಟಿನ ಉದ್ದಗಲಕ್ಕೂ ಕೂಡ ನೋಡುತ್ತಿದ್ದೇವೆ. ಸಣ್ಣ ವಿಷಯಕ್ಕೂ ಕೂಡ ವಿದೇಶಿ ಸಾಲ ವಿದೇಶೀ ನೆರವು ಎಂದು ಹೇಳತಕ್ಕಂತಹ ಪರಿಸ್ಥಿತಿ ಉಂಟಾದರೆ ಅದು ಈ ರಾಜ್ಯದ ಮೇಲೆ ಎಷ್ಟು ಕೆಟ್ಟ ಪರಿಣಾಮವಾಗುತ್ತದೆನ್ನುವುದನ್ನು ತಾವು ದಯವಿಟ್ಟು ಗಮನಿಸಬೇಕು. ತಾವು ಹೇಳತಕ್ಕಂತಹ ಕಾರಣವೇನು ಎಂದರೆ, ಅನುತ್ಪಾದಕವಾದಂತಹ ಘಟಕಗಳಲ್ಲಿ ಅನುತ್ಪಾದಕವಾದಂತಹ ವಲಯಗಳಲ್ಲಿ ನಾವು ಸರಕಾರ ಹಣ ಖರ್ಚು ಮಾಡುವುದರಲ್ಲಿ ಅರ್ಥ ಇಲ್ಲ ಪ್ರಯೋಜನ ಇಲ್ಲ ಎಂದು ಹೇಳುತ್ತಾರೆ. ಅನುತ್ಪಾದಕ ಎಂದು ಹೇಳತಕ್ಕಂತಹ ಪ್ರಶ್ನೆ ಬಂದಾಗ ಶಿಕ್ಷಣವೂ ಕೂಡ ನಿಮ್ಮ ಲೆಕ್ಕದಲ್ಲಿ ಅನುತ್ಪಾದಕ,ಇವೊತ್ತು ಕೃಷಿ ಮತ್ತು ಕೈಗಾರಿಕಾ ರಂಗದಲ್ಲಿ ರಾಜ್ಯ ತನ್ನದೇ ಆದ ಸ್ಥಾನವನ್ನು ಇಡೀ ದೇಶದಲ್ಲಿ ಮೊದಲ ರಾಜ್ಯವಾಗಿ ಪಡೆದಿತ್ತು. ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪನೆ ಮಾಡತಕ್ಕಂಥಾದ್ದು ಇಡೀ ದೇಶದಲ್ಲಿ ನಮ್ಮ ರಾಜ್ಯ ಮೊಟ್ಟ ಮೊದಲನೆಯದಾಗಿತ್ತು. ವಿಶ್ವೇಶ್ವರಯ್ಯನವರ ಕಾಲದಿಂದ ಸಾರ್ವಜನಿಕ ಉದ್ದಿಮೆಗಳನ್ನು ರಾಜ್ಯ ವಲಯವೇ ಸ್ಥಾಪಿಸಿದೆ. ಮೈಸೂರು ಲ್ಯಾಂಪ್ಸ್, ಸೋಪ್ ಫ್ಯಾಕ್ಟರಿ, ಸ್ಟೀಲ್ ಫ್ಯಾಕ್ಟರಿ ಇವೆಲ್ಲವೂ ಶ್ರೀಮಾನ್ ವಿಶ್ವೇಶ್ವರಯ್ಯನವರು ಸ್ಥಾಪಿಸಿದ್ದರು. ಆದರೆ ಇಂದು ಇವೆಲ್ಲವೂ ಮುಚ್ಚಿ ಹೋಗತಕ್ಕಂತಹ ಸ್ಥಿತಿಗೆ ತಂದು ಇಟ್ಟಿದ್ದೀರಿ. ಅದಕ್ಕೆ ಕಾರಣಗಳನ್ನು ನೀವು ಏನೇನು ಕೊಡುತ್ತಿದ್ದೀರಿ ಅವು ಯಾವುವೂ ಸಕಾರಣಗಳು ಅಲ್ಲ. ನಾನು ಆ ವಿಚಾರಕ್ಕೆ ಮತ್ತೆ ಬರುತ್ತೇನೆ. ಮೂಲಭೂತವಾಗಿ ಒಂದು ರಾಜ್ಯದ ಅಭಿವೃದ್ಧಿಯನ್ನು ನೀವು ಮಾಡಬೇಕು ಎಂದಾದರೆ ಮೊಟ್ಟ ಮೊದಲನೆಯದಾಗಿ ಆ ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕಾಗುತ್ತದೆ. ಅದನ್ನು ಹೆಚ್ಚು ಮಾಡತಕ್ಕಂಥ ಸಂದರ್ಭದಲ್ಲೇ ಯಾವ್ಯಾವ ವಲಯದಲ್ಲಿ ಹೆಚ್ಚು ಮಾಡಬೇಕೆಂಬುದನ್ನು ನೀವು ಹೇಳಬೇಕು. 196 ಕೋಟಿ ರೂಪಾಯಿಗಳ ಕೊರತೆ ಬಡ್ಜೆಟ್ ಅನ್ನು ಕರ್ನಾಟಕದಲ್ಲಿ ಮಂಡಿಸಿದ್ದೀರಿ. ಈ ಡೆಫಿಸಿಟ್ ಬಡ್ಜೆಟ್ ನಿರಂತರವಾಗಿ ಹೋಗುತ್ತಿದೆ. ಸಾಮಾನ್ಯ ಜನರ ಬದುಕಿನ ಮೇಲೆ ನೇರವಾದಂತಹ ಪರಿಣಾಮ ಬೀರುತ್ತದೆ. ಅದರಲ್ಲೂ ಬೆಲೆ ಏರಿಕೆ ಪ್ರಶ್ನೆ ವಿಪರೀತವಾಗಿ ಬೆಳೆಯುತ್ತದೆ. ಅದಕ್ಕಿಂತ ಬಹಳ ಆತಂಕಕಾರಿಯಾದ ವಿಷಯ ಎಂದರೆ ರೆವಿನ್ಯೂ ಡೆಫಿಸಿಟ್ ರಾಜಸ್ವ ವರಮಾನ ಕಡಿಮೆಯಾಗುತ್ತಾ ಹೋಗುತ್ತದೆ. ನೀವು ಕಳೆದ 4 ವರ್ಷಗಳಿಂದ ಈಚೆಗೆ ಏನು ಬಡ್ಜೆಟ್ ಅನ್ನು ಮಂಡಿಸಿದ್ದೀರಿ ಅದರಲ್ಲಿ ಮೊದಲನೇ ವರ್ಷದಲ್ಲಿ 213.66 ಕೋಟಿ ರೆವಿನ್ಯೂ ಡೆಫಿಸಿಟ್ ಇದು 1995-96 ರಲ್ಲಿ ಇತ್ತು. 1996-97ರಲ್ಲಿ 135.91 ಆಯಿತು 1997-98ಕ್ಕೆ 199 ಕೋಟಿ ರೂಪಾಯಿ ಆಯಿತು 1998-99ಕ್ಕೆ 381 ಕೋಟಿ ರೆವಿನ್ಯೂ ಡೆಫಿಸಿಟ್ ಆಗಿದೆ ಇದು ಒಂದು ರೆಕಾರ್ಡ್ ಆಗಿದೆ. ಯಾವುದೇ ಒಂದು ರಾಜ್ಯದಲ್ಲಿ ರಾಜಸ್ವ ವರಮಾನ ಕಡಿಮೆಯಾಗುವುದು ಬಹಳ ಆತಂಕಕಾರಿ ಮತ್ತು ಅಪಾಯಕಾರಿಯಾದ ಸೂಚನೆ. ರೆವಿನ್ಯೂ ಡೆಫಿಸಿಟ್ ಅನ್ನು ಕಡಿಮೆ ಮಾಡುವುದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ. ಸಂಪನ್ಮೂಲವಿಲ್ಲವೆಂದು ಹೇಳುತ್ತೀರಿ. ಸಂಪನ್ಮೂಲಗಳು ಇಲ್ಲದೇ ಇರುವಂತಹ ಸಂದರ್ಭದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ಎರಡು ವಿಧಾನಗಳು ಇವೆ. ಸೋರಿ ಹೋಗತಕ್ಕಂತಹ ಸಂಪನ್ಮೂಲಗಳನ್ನು ತಡೆಗಟ್ಟುವುದು ಹೇಗೆ, ಮತ್ತೊಂದು ಸಂಪನ್ಮೂಲಗಳನ್ನು ಹಲವಾರು ವಿಭಾಗಗಳಲ್ಲಿ ಹೆಚ್ಚಿಸಿಕೊಳ್ಳತಕ್ಕಂಥಹ ವಿಧಾನ ಹೇಗೆ ಎಂದು ವಿಚಾರ

ಮಾಡಬೇಕಾಗಿದೆ. ನಾನು 4 ಬಡ್ಜೆಟ್ ನೋಡಿದೆ. ಯಾವ ವಸ್ತುಗಳ ಮೇಲೆ ತೆರಿಗೆ ಹಾಕುತ್ತಿದ್ದೀರಿ ಮತ್ತೆ ಅದರ ಮೇಲೆ ತೆರಿಗೆ ಹಾಕುತ್ತಿದ್ದೀರಿ you have not applied your mind to expand tax base. ಅದನ್ನು ಸ್ವಲ್ಪ ವೈಡನ್ ಮಾಡಿ. ವೈಡನ್ ಮಾಡದೇ ಹೋದರೆ ಸಾಮಾನ್ಯ ಜನರ ಮೇಲೆ ಹಾಕತಕ್ಕ ಹೊರೆ ಒಬ್ಬರ ಮೇಲೆಯೇ ಆಗುತ್ತಿರುತ್ತದೆ. ಯಾವ ಸ್ಥಿತಿಗೆ ನೀವು ಬಂದು ತಲುಪಿದ್ದೀರಿ ಎಂದರೆ ಮೈದಾ ವೀಟ್, ಇದರ ಮೇಲೆ ಕೂಡ 2 ಪರ್ಸೆಂಟ್ ತೆರಿಗೆ ಹಾಕಿದ್ದೀರಿ.

ಅಧ್ಯಕ್ಷರು:- ಡೈರೆಕ್ಟ್ ಅಂಡ್ ಇಂಡೈರೆಕ್ಟ್ ಟ್ಯಾಕ್ಸ್ ಕ್ಲಾಸಿಫಿಕೇಷನ್ ಮಾಡುತ್ತಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ....widening scope of tax.

ಶ್ರೀ ಸಿದ್ಧರಾಮಯ್ಯ:- ಒಂದು ಕಡೆ ಟ್ಯಾಕ್ಸ್ ಬೇಸ್ ಅನ್ನು ವಿಸ್ತಾರ ಮಾಡಬೇಕು ಎಂದರೆ ಯಾವುದು ಈಗ ತೆರಿಗೆಗೆ ಒಳಪಟ್ಟಿಲ್ಲವೋ ಅದನ್ನು ಒಳಪಡಿಸತಕ್ಕಂಥಾದ್ದು ವಿಸ್ತಾರ ಮಾಡತಕ್ಕಂಥಾದ್ದು. ಅದನ್ನು ಸೇರಿಸಿದರೆ ಇದನ್ನು ಹಾಕಿದಿರಿ ಎಂದು ಹೇಳುತ್ತಾರೆ. ಎಷ್ಟು ವಿರೋಧಾಭಾಸವಾದ ಆರ್ಗ್ಯುಮೆಂಟ್ ಮಾಡುತ್ತಾರೆ.

ಅಧ್ಯಕ್ಷರು:- ಅವರ ಅಭಿಪ್ರಾಯ ಭರಿಸಲಿಕ್ಕೆ ಶಕ್ತಿ ಇರತಕ್ಕಂತಹವರಿಗೆ ತೆರಿಗೆ ಹಾಕಿ ಎಂದು. ಯಾರಿಗೆ ಭರಿಸಲಿಕ್ಕೆ ಶಕ್ತಿ ಇಲ್ಲ ಅವರಿಗೆ ಅರಿವೇ ಇಲ್ಲದಂತೆ ಪರೋಕ್ಷವಾಗಿ ತೆರಿಗೆ ಬೀಳುತ್ತಿದೆ ಎಂದು ಅವರು ಹೇಳುತ್ತಿರುವುದು. ಅಲ್ಲವೇ?

ಶ್ರೀ ಸಿದ್ಧರಾಮಯ್ಯ:- ಹೌದು ಭರಿಸಲಿಕ್ಕೆ ಶಕ್ತಿ ಇರುವವರಿಗೇನೇ, ಅವರು ಟ್ಯಾಕ್ಸ್ ಬೇಸ್ ಎಕ್ಸ್‌ಟೆಂಡ್ ಆಗಬೇಕೆಂದು ಹೇಳುತ್ತಿದ್ದಾರೆ. ನಾವು ಎಕ್ಸೆಂಪ್‌ಕ್ಷನ್ ಕೊಡುತ್ತಾ ಹೋದರೆ ಟ್ಯಾಕ್ಸ್ ಬೇಸ್ ಕಡಿಮೆಯಾಗುತ್ತದೆ. ತೆರಿಗೆಗಳನ್ನು ಇರತಕ್ಕಂತಹ ಪದಾರ್ಥಗಳ ಮೇಲೆಯೇ ಹೆಚ್ಚು ಮಾಡುವುದಕ್ಕಾಗುವುದಿಲ್ಲ. ಟ್ಯಾಕ್ಸ್ ಬೇಸನ್ನು ಹೆಚ್ಚು ಮಾಡಬೇಕು ಎಂದರೆ ಎಲ್ಲೆಲ್ಲಿ ಎಕ್ಸೆಂಪ್‌ಷನ್ ಕೊಟ್ಟಿದ್ದೇವೆ ಅದನ್ನು ಮತ್ತೆ ಟ್ಯಾಕ್ಸ್ ಡಿವಿಜನ್ ಒಳಗೆ ತರಬೇಕಾಗುತ್ತದೆ. ಆ ರೀತಿ ತರುವಾಗ ಬಡವರ ಮೇಲೆ ಇದರಿಂದ ಹೊರೆಯಾಗುತ್ತದೆಯೇ ಎಂದು ನೋಡಿಕೊಂಡು ಮಾಡಬೇಕಾಗುತ್ತದೆ. ಆ ಕೆಲಸ ನಾವು ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡುವುದು ಹೇಗೆ ಎಂಬುದಕ್ಕೆ ನಾನೊಂದು ಉದಾಹರಣೆ ಕೊಡುತ್ತೇನೆ. ನರ್ಸಿಂಗ್ ಹೋಮ್‌ಗಳ ದಾಂಧಲೆ ಕರ್ನಾಟಕದಲ್ಲಿ ವಿಪರೀತವಾಗಿ ಆಗಿದೆ. ಅವರ ಮೇಲೆ ನೀವು ಏಕೆ ತೆರಿಗೆ ಹಾಕಬಾರದು? ಸಾಮಾನ್ಯ ಜನರು ಇಂದು ಇಂತಹ ನರ್ಸಿಂಗ್ ಹೋಮುಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಆ ನರ್ಸಿಂಗ್ ಹೋಮ್‌ಗಳು ಹೇಗೆ ಲೂಟಿ ಮಾಡುತ್ತಿದೆ ಎಂಬುದು ನಿಮಗೂ ತಿಳಿದಿದೆ ನಾನು ಏನೂ ಇದಕ್ಕೆ ವಿವರಣೆ ಕೊಡಬೇಕಾಗಿಲ್ಲ. Why you are not including them in the tax net? ಇದನ್ನು ಏಕೆ ಮಾಡಬಾರದು? ಅವರು ಕೋಟಿ ಗಟ್ಟಲೆ ಹಣ ಹೊಡೆಯುತ್ತಾರೆ. ಅದು ಮಲ್ಯ ಇರಬಹುದು ಅಪೋಲೋ ಇರಬಹುದು ಖಾಸಗಿ ನರ್ಸಿಂಗ್ ಹೋಮ್ ಇರಬಹುದು. Private hospitals are looting money like anything. ಸಾಮಾನ್ಯ ಜನರು ಅಲ್ಲಿಗೆ ಹೋಗಲಿಕ್ಕೆ ಸಾಧ್ಯವಿಲ್ಲ. ಅವರನ್ನು ನೀವು ಏಕೆ ತೆರಿಗೆಗೆ ಒಳಪಡಿಸಬಾರದು. ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡತಕ್ಕಂಥಾ ಕೆಲಸ ಮಾಡಬೇಕು. ಹಲವಾರು

ಅಂಶಗಳು ಕರ್ನಾಟಕದಲ್ಲಿ ಇದೆ. ಖಾಸಗಿ ಮೆಡಿಕಲ್ ಕಾಲೇಜುಗಳು, ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು You have opened your doors to them ಅದು ನಿಮಗೆ, ನಮಗೆ ಗೊತ್ತಿದೆ. ಎಷ್ಟು ಕೋಟಿ ರೂಪಾಯಿಗಳನ್ನು ಅವರು ಮಾಡುತ್ತಿದ್ದಾರೆಂದು ತಿಳಿದಿದೆ. Why you have not included them? ಏಕೆ ಇದನ್ನು ಮಾಡಬಾರದು? ಅವರಿಗೆ ತೆರಿಗೆ ಹಾಕಿ. ಹೇಗೋ, ಅವರಿಗೆ ಕೊಟ್ಟಿದ್ದೀರಿ ಅದನ್ನು ನಿಲ್ಲಿಸಲಿಕ್ಕೆ ಆಗುವುದಿಲ್ಲ. Try to get income from out of them to lessen the burden on the common man. ಅಗ್ರಿಕಲ್ಚರ್ ತೆರಿಗೆ ಬಗ್ಗೆ ಬಹಳಷ್ಟು ಮಾತನಾಡುತ್ತೇವೆ. why some percentage should not be included? ಈಗಾಗಲೇ ಕೃಷಿ ತೆರಿಗೆಯನ್ನು ಹಾಕಿದ್ದೀರಿ ಅದನ್ನೇ ವೈಡನ್ ಮಾಡಿ ಗೋಧಿ, ಸೋಪು, ವೀಟ್ ಆಟ ಮೇಲೆ 2 ಪರ್ಸೆಂಟ್ ತೆರಿಗೆ ಹಾಕುವುದರ ಬದಲು ಸಾಮಾನ್ಯ ಜನರಿಗೆ ಹೊರೆ ಮಾಡುವುದರ ಬದಲು ನೀವು ಆ ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡಿದರೆ ದೊಡ್ಡ ದೊಡ್ಡ ತಿಮಿಂಗಿಲಗಳು ಸಿಗುತ್ತವೆ. ಏಕೆ ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡಬಾರದು. By that you will get revenue to the State. ಎಲ್ಲೆಲ್ಲಿ ಟ್ಯಾಕ್ಸ್ ಕಲೆಕ್ಷನ್‌ನಲ್ಲಿ ಲೂಪ್ ಹೋಲ್‌ಗಳು ಇದೆ ಅದನ್ನು ಕಂಡುಹಿಡಿಯಬೇಕು. ಮಾನ್ಯ ಸಿದ್ಧರಾಮಯ್ಯನವರೇ ನನಗೆ ತಮ್ಮ ಮೇಲೆ ಬಹಳ ನಂಬಿಕೆ ಇದೆ. ನಿಮಗೆ ಎಲ್ಲೆಲ್ಲಿ ತೆರಿಗೆ ಸೋರಿ ಹೋಗುತ್ತಿದೆ ಅದು ಸ್ಪಷ್ಟವಾಗಿ ಗೊತ್ತು. ರಾಜ್ಯಕ್ಕೆ ಬರಬೇಕಾಗಿರುವ ಹಣವನ್ನು ಖದೀಮರು ಕದಿಯುತ್ತಿದ್ದಾರೆ ಅದು ತಮಗೆ ಗೊತ್ತು. ನಿನ್ನೆ ಅರ್ರ್ಯಾಕ್ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ನಡೆದಿದೆ. ಅಂತಹವು ನೂರಾರು ಇದೆ. ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳಿ. ವ್ಯಾಪಾರಸ್ಥರಿಂದ ವಸೂಲಿ ಮಾಡತಕ್ಕಂತಹದ್ದಾಗಿದೆ. ವ್ಯಾಪಾರಸ್ಥರಿಂದ ನಿಮ್ಮ ಅಧಿಕಾರಿಗಳು ಕನಿಷ್ಠ 20 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಅನ್ನು ವಸೂಲಿ ಮಾಡಿ ಕೊಟ್ಟರೆ ಖಂಡಿತವಾಗಿ ನನಗೆ ಗೊತ್ತಿರುವ ಅಂದಾಜಿನ ಪ್ರಕಾರ ಕನಿಷ್ಠ 270 ಕೋಟಿ ರೂಪಾಯಿಗಳು ಬರುತ್ತದೆ.

Even that they are not doing. ಬರುತ್ತಿರುವುದು ಎಕ್ಸ್‌ಟ್ರಾ. ನಾನೊಂದು ಉದಾಹರಣೆಯನ್ನು ಮೊನ್ನೆ ಹೇಳಿದೆ. ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್ ತಿಂಗಳಿಗೊಮ್ಮೆ ಕಲೆಕ್ಷನ್‌ಗೆ ಹೋಗುತ್ತಾರೆ. ಅಥವಾ ಆರು ತಿಂಗಳಿಗೊಮ್ಮೆ ವರ್ಷಕೊಮ್ಮೆ ಹೋಗುತ್ತಾರೆ. ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್ ಏನು ಮಾಡುವುದು ಗೊತ್ತೇನು? ಯಾವ ವ್ಯಾಪರಸ್ಥರ ಹತ್ತಿರ ಹೋಗಿ ಪುಸ್ತಕಗಳನ್ನು ಚೆಕ್ ಮಾಡುವುದಿಲ್ಲ. ರಸೀದಿಯನ್ನು ಚೆಕ್ ಮಾಡುವುದಿಲ್ಲ. ಎಷ್ಟು ಮಾರಟವಾಗಿದೆ ಎಂದು ನೋಡುವುದಿಲ್ಲ. ಅವರ ಲೆಡ್ಜೆರ್ ಪುಸ್ತಕವನ್ನು ನೋಡುವುದಿಲ್ಲ. ಟಿ.ಬಿ.ಯಲ್ಲಿ ಹೋಗಿ ಕುಳಿತುಕೊಳ್ಳುವುದು. ಒಂದೊಂದು ಅಂಗಡಿಗೆ ಇಷ್ಟು ಎಂದು ಹೇಳಿ ಮಾಮೂಲಿ ಫಿಕ್ಸ್ ಮಾಡಿಬಿಟ್ಟಿರುತ್ತಾರೆ. ಅದನ್ನು ತೆಗೆದುಕೊಂಡು ಬರುವುದು. ಯಾವ ಲೆಡ್ಜರ್ ಪುಸ್ತಕ, ರಸೀದಿ, ಏನನ್ನು ಕೂಡ ಚೆಕ್ ಮಾಡುವ ಸ್ಥಿತಿಯಲ್ಲಿಲ್ಲ. ಇಂಥದ್ದು ನೂರಾರು ಸಂದರ್ಭಗಳು ಈ ರಾಜ್ಯದಲ್ಲಿದೆ. ಅದನ್ನು ತಡೆಯಲಿಕ್ಕೆ ನೀವು ಏಕೆ ಪ್ರಯತ್ನಮಾಡಬಾರದು? ಏಕೆ ಆ ಸೋರುವಿಕೆಯನ್ನು ತಡೆಯಲಿಕ್ಕೆ ಸಾಧ್ಯವಿಲ್ಲ. ಎಕ್ಸೈಜ್‌ನಲ್ಲಿ ಈಗ ಸಿಕ್ಕಾಪಟ್ಟೆ ಚರ್ಚೆಯಾಗುತ್ತಿದೆ. ನಿನ್ನೆಯೂ ಆಗಿದೆ. ಬಹುಶ: ಇನ್ನು ಮುಂದೆಯೂ ಆಗುತ್ತದೆ. ನೀವೇ ಹೇಳಿರುವ ಪ್ರಕಾರ 300 ಕೋಟಿ ರೂಪಾಯಿ ಅವರಿಂದ ಬಾಕಿ ಇದೆ. ಅದನ್ನು ವಸೂಲಿ ಮಾಡಲಿಕ್ಕಾಗುವುದಿಲ್ಲ ಏಕೆ ಆಗುತ್ತಿಲ್ಲ? ನಿಮ್ಮ ಉದ್ದೇಶವೇನು? ಏಕೆ ನೀವು ವಸೂಲಿ ಮಾಡಲಿಕ್ಕೆ ಸಾಧ್ಯವಾಗದೇ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ? ಯಾವ ಶಕ್ತಿ ನಿಮ್ಮನ್ನು ತಡೆಗಟ್ಟಿದೆ?

ಕನಿಷ್ಟ ನೀವು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಏನು ಇದೆ, ಅದನ್ನು ವಸೂಲಿ ಮಾಡಲಿಕ್ಕೆ ನಿಮ್ಮನ್ನು ಯಾವ ಶಕ್ತಿ ಹಿಡಿದು ಇಟ್ಟಿದೆ ಎಂದು ಕರ್ನಾಟಕ ರಾಜ್ಯದ ಜನರಿಗೆ ನೀವು ಹೇಳಬೇಕಾಗುತ್ತದೆ. ನೀವೇ ಕೊಟ್ಟಿರುವ ಲೆಕ್ಕದ ಪ್ರಕಾರ 290 ಕೋಟಿ ರೂಪಾಯಿಗಳು ಅವರಿಂದ ಬಾಕಿ ಇದೆ. ಏಕೆ ನೀವು ಅದನ್ನು ವಸೂಲು ಮಾಡಲಿಲ್ಲ? ಅದನ್ನು ಯಾರು ಕದ್ದಿದ್ದಾರೆ? ಅದನ್ನು ಸರ್ಕಾರ ಇವತ್ತು ಹೇಳಬೇಕಾಗಿದೆ ಇದ್ಯಾವುದನ್ನು ಮಾಡದೆ 170 ಸರಕುಗಳ ಮೇಲೆ ನೀವು ತೆರಿಗೆಯನ್ನು ಹಾಕಿದ್ದೀರಿ. ಇದು ಎಂಥ ಟ್ಯಾಕ್ಸ್. ನಾವೆಲ್ಲಾ ತಲೆತಗ್ಗಿಸಬೇಕು. ಟಾಯ್ಲಟ್ ಸೋಪ್ ಮೇಲೆ ತೆರಿಗೆ ಇಲ್ಲ. ಬಟ್ಟೆ ಒಗೆಯುವ ಸೋಪ್ ಮೇಲೆ ಟ್ಯಾಕ್ಸ್ ಏನು ಸ್ವಾಮಿ ಇದರ ಅರ್ಥ. ಟಾಯ್ಲಟ್ ಸೋಪನ್ನು ಉಪಯೋಗಿಸುವವರು ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನರು ಇದ್ದಾರೆ? ಬಟ್ಟೆ ಒಗೆಯುವ ಸೋಪನ್ನು ಉಪಯೋಗಿಸುವ ಸಂಖ್ಯೆ ಎಷ್ಟು ಜನರು ಇದ್ದಾರೆ? ಬಟ್ಟೆ ಒಗೆಯುವ ಸೋಪನ್ನು ಉಪಯೋಗಿಸುವವರು ನಿಮ್ಮ ಲೆಕ್ಕದಲ್ಲಿ ಶ್ರೀಮಂತರು. ಟಾಯ್ಲಟ್ ಸೋಪನ್ನು ಉಪಯೋಗಿಸುವವರು ಕಡುಬಡವರು. ಎಂಥ ಶ್ರೀಮಂತರು ನಿಮ್ಮ ಕೈಗೆ ಸಿಕ್ಕಿಬಿಟ್ಟಿದ್ದಾರೆ ತೆರಿಗೆ ಹಾಕುವುದಕ್ಕೆ. ನಮಗೇನೂ ಅದರ ಬಗ್ಗೆ ಕನಿಷ್ಠ are we not ashamed of it? ಟಾಯ್ಲಟ್ ಸೋಪಿಗೆ ಟ್ಯಾಕ್ಸ್ ಕಡಿಮೆ ಮಾಡುವುದು, ಬಟ್ಟೆ ಒಗೆಯುವ ಸೋಪಿಗೆ ತೆರಿಗೆಯನ್ನು ಹಾಕುವುದು ಯಾವ ನ್ಯಾಯ.

ಶ್ರೀ ಸಿದ್ಧರಾಮಯ್ಯ (ಅರ್ಥ ಸಚಿವರು) :- ಬಟ್ಟೆ ಒಗೆಯುವ ಸೋಪಿಗೆ 4 ಪರ್‌ಸೆಂಟ್. ನೋಟಿಫಿಕೇಷನ್ ಮೂಲಕ ಹ್ಯಾಂಡ್ ಮೇಡ್ ಸೋಪು ಮತ್ತು ಬಟ್ಟೆ ಒಗೆಯುವ ಸೋಪುಗಳಿಗೆ 4 ಪರ್‌ಸೆಂಟ್. ಹತ್ತು ಪರ್‌ಸೆಂಟಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾಲ್ಕು ಪರ್‌ಸೆಂಟ್ ಎಂದರೆ ಎಷ್ಟಾಯಿತು. ನೀವು ವೀಟ್ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿರುವುದು 2 ಪರ್‌ಸೆಂಟ್. ನೀವು 2 ಪರ್‌ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕಿದರೂ ಜಾಸ್ತಿ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ :- ವೆಸ್ಟ್‌ಬೆಂಗಾಲ್‌ನಲ್ಲೂ ಹಾಕಿದ್ದಾರೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ವೆಸ್ಟ್‌ಬೆಂಗಾಲ್ ಬಗ್ಗೆ ಹೇಳುತ್ತಿಲ್ಲ. ನಾನು ಕರ್ನಾಟಕದ ಬಜೆಟ್ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ವೆಸ್ಟ್ ಬೆಂಗಾಲ್‌ಗೆ ಆಮೇಲೆ ಮಾತನಾಡೋಣ. ರಾಜಸ್ಥಾನ್, ಮಹಾರಾಷ್ಟ್ರ ಅದೆಲ್ಲಾ ಆಮೇಲೆ ಮಾತನಾಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ವೀಟ್ ಮೇಲೆ 2 ಪರ್‌ಸೆಂಟ್ ಟ್ಯಾಕ್ಸ್‌ನ್ನು ಹಾಕಿದ್ದೀರಿ. ಅದು 2 ಪರ್‌ಸೆಂಟ್ ಟ್ಯಾಕ್ಸ್ ಫೈನಲಿ ಒಂದು ಕ್ವಿಂಟಾಲ್‌ಗೆ ನನ್ನ ಹತ್ತಿರ ಇರುವ ಲೆಕ್ಕದ ಪ್ರಕಾರ 1 ಕ್ವಿಂಟಾಲ್‌ಗೆ ಅಲ್ಟಿಮೇಟ್‌ಲಿ 2 ಪರ್‌ಸೆಂಟ್ ಟ್ಯಾಕ್ಸ್ ಎಂದರೂ 56 ರೂಪಾಯಿಗಳು ಆಗುತ್ತದೆ ಒಂದು ಕ್ವಿಂಟಾಲ್‌ಗೆ ಜಾಸ್ತಿ. ಆದರಲ್ಲಿ ಸೇಲ್ಸ್ ಟ್ಯಾಕ್ಸ್ 2 ಪರ್‌ಸೆಂಟ್. ಟರ್ನ್ ಓವರ್ ಟ್ಯಾಕ್ಸ್ 3 ಪರ್‌ಸೆಂಟ್. ಟಿ.ಓ.ಟಿ ಅಂಡ್ ಆದರೆ ಎಕ್ಸ್‌ಪೆಂಡಿಚರ್ ಹೋಲ್‌ಸೇಲ್ ಪಾಯಿಂಟ್‌ಗೆ 10 ಪರ್‌ಸೆಂಟ್. ಸೆಸ್ 5 ಪರ್‌ಸೆಂಟ್ ಆನ್ ಸೇಲ್ಸ್ ಟ್ಯಾಕ್ಸ್. ಇದೆಲ್ಲಾ ಸೇರಿಸಿದರೆ ಒಂದು ಕ್ವಿಂಟಾಲ್‌ಗೆ 56 ರೂಪಾಯಿಗಳು ಹೆಚ್ಚಾಗುತ್ತದೆ. ನೀವು 2 ಪರ್‌ಸೆಂಟ್ ಎಂದು ಹೇಳಿದಿರಿ. ಹಾಗೆ ಸೋಪಿಗೂ ಕೂಡ 4 ಪರ್‌ಸೆಂಟ್ ಎಂದರೂ ಕೂಡ

ಎಷ್ಟಾಗುತ್ತದೆ ಎಂದು ನೀವು ದಯವಿಟ್ಟು ಲೆಕ್ಕ ಹೇಳಿಬಿಡಿ. ಹೇಳುವುದಕ್ಕೆ 4 ಪರ್‌ಸೆಂಟ್. 4 ಪರ್‌ಸೆಂಟ್ ಹಾಕಿದ್ದೇವೆ ಎಂದು ನೀವು ಹೇಳಿರುವುದು. ನಾವು ಹೇಳಲಿಲ್ಲ. 8 ರಿಂದ 4 ಮಾಡಿದರೂ ತೆರಿಗೆಯನ್ನು ತೆಗೆಯಲಿಲ್ಲ ನೀವು. 4 ಪರ್‌ಸೆಂಟ್ ಅಷ್ಟೇ ತೆಗೆದಿರುವುದು. ನಾನು ಹೇಳುತ್ತಿರುವುದು ಟಾಯ್ಲೆಟ್ ಸೋಪಿನ ಮೇಲೆ ಎಷ್ಟು ತೆರಿಗೆಯನ್ನು ಹಾಕಿದ್ದೀರಿ? ಟ್ಯಾಕ್ಸ್ ಹೆಚ್ಚು ಮಾಡಿದಿರಾ?

ಶ್ರೀ ಸಿದ್ಧರಾಮಯ್ಯ :- ಅದರಲ್ಲಿ ಡಿಟರ್ಜೆಂಟ್ ಇರುತ್ತವೆ. ಅದಕ್ಕೆ 8 ಪರ್‌ಸೆಂಟ್ ಇತ್ತು. 10 ಪರ್‌ಸೆಂಟ್ ಆಗಿದೆ. ಇದನ್ನು ಮಾಡುವಾಗ 8 ಪರ್‌ಸೆಂಟ್ ಇದ್ದದ್ದನ್ನು ಬಟ್ಟೆ ಒಗೆಯುವ ಸೋಪಿಗೆ ಮತ್ತು ಹ್ಯಾಂಡ್‌ಮೇಡ್ ಸೋಪಿಗೆ 4 ಪರ್‌ಸೆಂಟ್ ಮಾಡಿದ್ದೇವೆ. 8 ಪರ್‌ಸೆಂಟ್‌ನಿಂದ 4 ಪರ್‌ಸೆಂಟ್‌ಗೆ ಕಡಿಮೆ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅವರ ಮೇಲೆ ಟ್ಯಾಕ್ಸ್ ಹಾಕುವುದರ ಬದಲು ಇವರ ಮೇಲೆಲ್ಲಾ ಟ್ಯಾಕ್ಸ್‌ನ್ನು ಹಾಕಬಹುದಾಗಿತ್ತು. ಬಿಸ್ಕತ್ ಮೇಲೆ ಟ್ಯಾಕ್ಸನ್ನು ಹಾಕಿದ್ದೀರಿ. ಅಡಿಗೆ ಅನಿಲ, ಸಾಮಾನ್ಯ ಜನರಿಗೆ ಅಡಿಗೆ ಅನಿಲ ಶ್ರೀಮಂತರ ಸ್ವತ್ತಾಗಿ ಏನೂ ಉಳಿದಿಲ್ಲ. ಮಧ್ಯಮ ವರ್ಗದ ಜನರು, ಬಡಜನರು ಕೂಡ ಪಟ್ಟಣ ಪ್ರದೇಶದಲ್ಲಿ ಉಪಯೋಗಿಸುತ್ತಿದ್ದಾರೆ. ಅದಕ್ಕೂ ಕೂಡ ತೆರಿಗೆಯನ್ನು ಹಾಕಿದ್ದೀರಿ. ನೀವು ಟ್ಯಾಕ್ಸ್ ಹಾಕಲಿಕ್ಕೆ ಹೋಗುವ ಸಂದರ್ಭದಲ್ಲಿ ಯಾರಿಗೆ ಟ್ಯಾಕ್ಸ್‌ನ್ನು ಹಾಕಬೇಕು, ಯಾರಿಗೆ ಟ್ಯಾಕ್ಸ್‌ನ್ನು ಹಾಕಬಾರದು ಎನ್ನುವುದಾದರೂ ಕನಿಷ್ಟ ಆಲೋಚನೆ ಮಾಡಬೇಕಾಗಿತ್ತು.

ಶ್ರೀ ಡಿ. ಆರ್. ಪಾಟೀಲ್ :- ನೀವು ಕೊಟ್ಟಿರುವುದರಲ್ಲಿ ಬಟ್ಟೆ ಸೋಪು, ಸೋಪು ಪೌಡರ್ 8 ರಿಂದ 10 ಪರ್‌ಸೆಂಟಾಗಿದೆ. ಟಾಯ್ಲೆಟ್ ಸೋಪು 12 ರಿಂದ 10 ಪರ್‌ಸೆಂಟ್ ಆಗಿದೆ. ಟಾಯ್ಲೆಟ್ ಸೋಪಿಗೆ ಇಳಿಸಿದ್ದೀರಿ. ಬಟ್ಟೆ ಸೋಪಿಗೆ ಹೆಚ್ಚು ಮಾಡಿದ್ದೀರಿ. ನಿಮಗೆ ಏಕೊ 8 ರಿಂದ 4 ಮಾಡಿದ್ದೀನಿ ಎಂದು ನಿಮಗೆ ಕಲ್ಪನೆ ಇದೆ. 4 ಮಾಡಿದ್ದರೆ ನಾವು ಸ್ವಾಗತಿಸುತ್ತೇವೆ.

ಶ್ರೀ ಸಿದ್ಧರಾಮಯ್ಯ :- ಅದು ಎಕ್ಸ್‌ಕ್ಲೂಡಿಂಗ್ ವಾಷಿಂಗ್ ಸೋಪು. ಡಿಟರ್ಜೆಂಟ್ ಸೋಪಿಗೆ ಮಾತ್ರ 8 ರಿಂದ 10 ಆಗಿದೆ. ಬಟ್ಟೆ ಒಗೆಯುವ ಸೋಪಿಗೆ 8 ರಿಂದ 4 ಪರ್‌ಸೆಂಟ್ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಪ್ರಿಂಟ್ ಮಾಡಿ ಕೊಟ್ಟಿರುವುದನ್ನೇ ನಾವು ಹೇಳುತ್ತಿರುವುದು. ಬಟ್ಟೆ ಸೋಪು ಎಂದು ಇದೆ. ನೀವು ಕಡಿಮೆ ಮಾಡುವ ಹಾಗೆ ಇದ್ದರೆ ಮಾಡಿ. ವೀಟ್‌ಗೆ ಮಾಡಿರುವುದು ನಿಜ. ಆಟಗೆ ಮಾಡಿರುವುದು ನಿಜ.

ಶ್ರೀ ಸಿದ್ಧರಾಮಯ್ಯ :- ವೀಟ್‌ಗೆ ಮಾಡಿಲ್ಲ. ವೀಟ್ ಪ್ರಾಡಕ್ಟ್ಸ್ ಮೇಲೆ ಮಾಡಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೌದು. ವೀಟ್ ಪ್ರಾಡಕ್ಟ್ಸ್. ಅದನ್ನು ಮಾಡಿರುವುದು ನಿಜ. ಬಿಸ್ಕತ್‌ಗೆ ಹಾಕಿರುವುದು ನಿಜ. ವೀಟ್ ಪ್ರಾಡಕ್ಟ್ಸ್‌ಗೆ ಹಾಕಿದರೆ ವೀಟ್ ರೇಟ್ ಜಾಸ್ತಿಯಾಗುತ್ತದೆ. ಅದರಲ್ಲೇನು ವ್ಯತ್ಯಾಸ ಇದೆ. ಹಾಗೆಯೇ ರಾಜ್ಯದ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಮೂಲಭೂತವಾಗಿ ಕೈಗಾರಿಕೆಗಳು. ಕೈಗಾರಿಕೆಗಳ ಅಭಿವೃದ್ಧಿಗೆ ನೀವು ಇವತ್ತು 5,600 ಕೋಟಿ ರೂಪಾಯಿಗಳು ವಿದೇಶಿ ಬಂಡವಾಳ ಬರುತ್ತದೆ. ಅದನ್ನು ನಾವು ನಿರೀಕ್ಷೆ ಮಾಡಿದ್ದೆವು. ಅದು ಈಗಾಗಲೇ ಬಂದಿದೆ ಎಂದು ಒಂದು ಕಡೆ ಹೇಳುತ್ತಿದ್ದೀರಿ. ಆ ವಿದೇಶಿ ಬಂಡವಾಳವನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುವುದಿಲ್ಲ. ವಿದೇಶಿ ಬಂಡವಾಳವಿಲ್ಲದೆ ಯಾವುದೇ ಒಂದು ದೇಶ,

ರಾಜ್ಯ ಇವತ್ತಿನ ಪರಿಸ್ಥಿತಿಯಲ್ಲಿ ಅದು ಬದುಕಲಿಕ್ಕೆ ಸಾಧ್ಯವಿಲ್ಲ. ಆದರೆ, ವಿದೇಶಿ ಬಂಡವಾಳವನ್ನು ನಾವು ಪಡೆಯುವ ಸಂದರ್ಭದಲ್ಲಿ ಯಾವ ಷರತ್ತುಗಳಿಗೆ ಒಳಪಟ್ಟು ಹಣವನ್ನು ತರುತ್ತೇವೆ ಎನ್ನುವುದು ಬಹಳ ಮುಖ್ಯ. ಯಾವ ರಂಗಕ್ಕೆ ಅದನ್ನು ತರುತ್ತೇವೆ ಎನ್ನುವುದು ಬಹಳ ಮುಖ್ಯ. ಈ ಎರಡೂ ಬಹಳ ಪ್ರಮುಖವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾದ ಅಂಶ. ಆದರೆ, ನಾವು ಇವತ್ತು ವಿದೇಶಿ ಬಂಡವಾಳವನ್ನು ಯಾವುದೇ ಅವರು ಹಾಕಿದಂಥ ಷರತ್ತುಗಳಿಗೆ ನಾವು ಒಪ್ಪಿದ್ದೇವಾ? ಅಥವಾ ನಾವು ಹಾಕಿದಂಥ ಷರತ್ತುಗಳಿಗೆ ಅವರು ಒಪ್ಪಿದ್ದಾರೆಯೇ ಎನ್ನುವುದು ಪ್ರಶ್ನೆ ಇರುವುದು.

ಅಧ್ಯಕ್ಷರು :- ಸಾಲ ಕೇಳುವಾಗ ನೀವು ಹಾಕಿದ ಕಂಡೀಷನ್ ಕೇಳಿ ಸಾಲವನ್ನು ಕೊಡುತ್ತಾರೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೌದು. ಜಗತ್ತಿನಲ್ಲಿ ಬೇರೆ ಬೇರೆ ರಾಜ್ಯಗಳು ಕೂಡ ಸಾಲವನ್ನು ತೆಗೆದುಕೊಂಡಿವೆ. ಆದರೆ ಅವರು ಹಾಕಿರುವ ಷರತ್ತುಗಳು, ಇವರು ಹಾಕಿರುವ ಷರತ್ತುಗಳನ್ನು ನಾವು ನೋಡಬಹುದಾಗಿದೆ. ನಮ್ಮ ಸುರೇಶ್‌ಕುಮಾರ್‌ರವರು ಮಾತನಾಡುವಾಗ ನಿಮ್ಮ ಷರತ್ತುಗಳಲ್ಲಿ ಒಂದು ಭಾಗವನ್ನು ಓದಿ ಹೇಳಿದ್ದಾರೆ. ಯಾವ ಯಾವ ಷರುತ್ತಗಳಿಗೆ ನಾವು ಒಪ್ಪಿದ್ದೇವೆ ಎನ್ನುವುದನ್ನು. ಅದನ್ನು ನಾವು ಪರಿಶೀಲನೆ ಮಾಡಿದಾಗ ಈಗ ಕೊಜೆಂಟ್ರಿಕ್ಸ್‌ಗೆ ನಾವು ತೆಗೆದುಕೊಂಡು ವಿದೇಶಿ ಕಂಪನಿಗೆ ಕೊಟ್ಟಿದ್ದೇವೆ. ಕೊಟ್ಟಿರುವ ಆ ಕಂಪನಿ ಜೊತೆ ನಾವು ಮಾಡಿಕೊಂಡಿರುವ ಒಪ್ಪಂದಗಳು, ಆ ಒಪ್ಪಂದದಲ್ಲಿ ಕೆಲವು ಅಂಶ, ಬಹುಶಃ ನೀವು ಹೇಳಬಹುದು, ನಾವು ಒಪ್ಪಂದ ಮಾಡಿಕೊಂಡಿಲ್ಲ, ನಮ್ಮ ಹಿಂದಿನ ಸರ್ಕಾರ ಅದನ್ನು ಒಪ್ಪಂದ ಮಾಡಿಕೊಂಡಿದೆ ಎಂದು ಹೇಳಬಹುದು. ಹಿಂದಿನ ಸರ್ಕಾರ ಒಪ್ಪಂದ ಮಾಡಿಕೊಂಡಿದೆ, ನಿಜ. ಆದರೆ ಆ ಒಪ್ಪಂದದಲ್ಲಿರುವ ಪ್ರಶ್ನೆಗಳೇನು? ಆ ಟರ್ಮ್ಸ್ ಅಂಡ್ ಕಂಡಿಷನ್ಸ್ ಏನು? ಬಿಲ್ಡ್ ಆಪರೇಟ್ ಅಂಡ್ ಓನ್ ಅಂಡ್ ಬಿಲ್ಡ್ ಆಪರೇಟ್ ಅಂಡ್ ಟ್ರಾನ್ಸ್‌ಫೋರ್ಟ್ ಇದು ಮುಖ್ಯವಾದ ಪ್ರಶ್ನೆ. ನಾವು ಯಾವ ಷರತ್ತಿಗೆ ಒಪ್ಪಿದ್ದೇವೆ? ಬಿ.ಓ.ಟಿ.ಗೆ ಒಪ್ಪಿದ್ದೇವಾ? ಬಿ.ಓ.ಡಬ್ಲ್ಯೂ.ಗೆ ಒಪ್ಪಿದ್ದೇವಾ? ಅಂದರೆ Build, Operate and Transfer, and Build, Operate and own. ಇದು ಮುಖ್ಯವಾಗಿರುವುದು.

ಶ್ರೀ ಜೆ. ಹೆಚ್. ಪಟೇಲ್ :- ಕೊಜೆಂಟ್ರಿಕ್ಸ್ ಪ್ರಾಜೆಕ್ಟ್, ಕೇಂದ್ರ ಸರ್ಕಾರದ ಅನುಮತಿ ಮತ್ತು ರಾಜ್ಯ ಸರ್ಕಾರದ ಅನುಮತಿಯೇ ಹೊರತು ಅದರ ಓನರ್‌ಷಿಪ್ ಪ್ರಶ್ನೆಯೇ ಬರುವುದಿಲ್ಲ. ಅವರು ನಮಗೆ ಇಷ್ಟು ಪೈಸೆಗೆ ಪರ್ ಯೂನಿಟ್ ರೀತಿ ಕೊಡುತ್ತಾರೆ. ನಾವು ಖರೀದಿ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅದರಲ್ಲಿ ಒಂದು ಷರತ್ತು ಉಂಟಲ್ಲ. ಅಂದರೆ ನೀವು ಉತ್ಪಾದನೆ ಮಾಡಿ ಇಷ್ಟು ರೇಟು ಕೆ.ಇ.ಬಿ.ಗೆ ಮಾರಬೇಕು. ಅದರ ಪ್ರಕಾರವೇ ನಾವು ಅವರು ಹೇಳಿರುವ ದರವನ್ನೇ ಒಪ್ಪಿರುವುದು. ನಾವು ಇಷ್ಟು ರೇಟಿಗೆ ಮಾರಾಟ ಮಾಡುತ್ತೇವೆ, ಅದಕ್ಕಿಂತ ಕಡಿಮೆ ಮಾಡುವುದಿಲ್ಲ ಎಂದರೆ ನಾವು ಆದಕ್ಕೆ ಒಪ್ಪಿದ್ದೇವೆ. ಅದರ ಪ್ರಕಾರ ನೀವು ಯಾವುದೇ ರೀತಿ ಲೆಕ್ಕಾಚಾರ ಹಾಕಿದರೂ ಪರ್ ಯೂನಿಟ್ ಮಹಾರಾಷ್ಟ್ರದ ಎನ್‌ರಾನ್ ಒಪ್ಪಂದಕ್ಕೂ ನಮ್ಮ ಕೊಜೆಂಟ್ರಿಕ್ಸ್‌ನ ಒಪ್ಪಂದಕ್ಕೂ ಒಂದೂವರೆ ಪೈಸೆ ಜಾಸ್ತಿ ಇದೆ. ನಾವು 4.5 ಕ್ಕೆ ಒಂದು ಯೂನಿಟ್ ಎಂದು ಹೇಳಿ ಒಪ್ಪಂದ ಮಾಡಿಕೊಂಡಿದ್ದೇವೆ. ಇದು ಎನ್‌ರಾನ್‌ಗೆ ಹೋಲಿಕೆ ಮಾಡಿದರೆ ರೇಟು ಜಾಸ್ತಿ ಇದೆ.

ಶ್ರೀ ಜಿ. ಹೆಚ್. ಪಟೇಲ್ :- ನಮ್ಮದು ಫೈನಲ್ clearance from the Finance Ministry, Counter-guarantee ಗೆ ವೇಟ್ ಮಾಡುತ್ತಿದ್ದೇವೆ. ಅದು ಆದತಕ್ಷಣ ಕೆಲಸ ಶುರುವಾಗುತ್ತದೆ. ಪಿಪಿಎ ಎಂದು ಏನು ಇತ್ತು, ನಮ್ಮದೇ ಎನ್. ಟಿ. ಪಿ. ಸಿ. ಇತ್ತು. ನಾವು ಎನ್. ಟಿ. ಪಿ. ಸಿ. ಯಿಂದಲೂ ಪವರನ್ನು ಕೊಂಡುಕೊಳ್ಳುತ್ತೇವೆ. ಇಲ್ಲಿ ಟಾಟಾದವರಿಂದಲೂ ಪವರ್‌ನ್ನು ಕೊಂಡುಕೊಳ್ಳುತ್ತೇವೆ. ತಮಿಳುನಾಡಿನಿಂದಲೂ ಪವರ್‌ನ್ನು ಕೊಂಡುಕೊಳ್ಳುತ್ತೇವೆ. ಅದು ಕೆಲವು ಸಾರಿ ಒಂದು ಅಥವಾ ಅರ್ಧ ಪೈಸೆ, ಒಂದು ಪೈಸೆ ಎರಡು ಪೈಸೆ ವ್ಯತ್ಯಾಸ ಇರುತ್ತದಷ್ಟೇ ಹೊರತು ಕೊಜೆಂಟ್ರಿಕ್ಸ್‌ಗೆ ಬೇರೆ ಒಂದು ರೇಟು ಕೊಟ್ಟು, ಇವರಿಗೆ ಬೇರೆ ಒಂದು ರೇಟು ಅಲ್ಲ ಕೆಲವು ಸಾರಿ ಎನ್. ಟಿ. ಪಿ. ಸಿ. ಜಾಸ್ತಿಯಾಗಿ ದುಡ್ಡು ಕೊಟ್ಟು ಕೊಂಡುಕೊಂಡು ಸೋಡಿಯಾಗಿ ಮಾರುತ್ತಿದ್ದೇವೆ. ಅದಕ್ಕೆ ಲುಕ್ಸಾನು ಆಗಿರುವುದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಅದು ಒಂದು. ಅದರ ಜೊತೆಯಲ್ಲಿ ಇನ್ನೊಂದು ಇದೆ. ಇನ್‌ಫಾರ್ಮಲ್ dispute ರೆಸಲ್ಯೂಷನ್ ನಾವು ಒಪ್ಪಿರತಕ್ಕದ್ದು, arbitration ಆರ್ಬಿಟ್ರೇಟರ್ ಏನು ಹೇಳಿದ್ದಾರೆ, ಆ ಒಂದು ಕ್ಲಾಸ್ ಈ ಒಪ್ಪಂದದಲ್ಲಿದೆ.

"Each arbitration shall be conducted in accordance with the arbitration rules. ... except such rules conflicting with the provisions of this section 17.3 in which provisions of this section 17.3 shall prevail. Indian Arbitration Act 1940 shall not be applicable to this agreement, to any arbitration proceedings or awards hereunder or to any dispute arising out of or in connection with this agreement. Any award rendered subsequent to the arbitration hereunder shall be a foreign award." No Indian Arbitration Act is applicable.

ವಿದೇಶಿ ಕಂಪನಿಗಳು ವಿದೇಶಿ ಕಾನೂನಿನ ಅವಾರ್ಡ್ ಏನು ಕೊಡುತ್ತದೆಯೋ ಅದನ್ನು ನಾವು ಒಪ್ಪಬೇಕೇ ಹೊರತು no Indian Arbitration Act. 1948ನೇ ಆಬ್ರಿಟ್ರೇಷನ್ ಆಕ್ಟ್ ಅಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ನಾವು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಮಾಡಲಿಕ್ಕೆ ಕೊಜೆಂಟ್ರಿಕ್ಸ್‌ಗೆ ಹೋಗತಕ್ಕಂಥ ಅವಶ್ಯಕತೆ ಇದ್ದಿರಲಿಲ್ಲ. ನಮ್ಮ ಕೆಪಿಸಿ ನವರು ಹೇಳಿದರು. ನೀವು ನಮಗೆ ಏನೂ ಸಹಾಯ ಮಾಡಬೇಡಿ. ನಮಗೆ ನೀವು ಏನು ಬಾಕಿ ಇದ್ದೀರಿ, ಆ ಹಣವನ್ನು ನಮಗೆ ಕೊಟ್ಟು ಬಿಡಿ. ಕಡಿಮೆ ದರದಲ್ಲಿ ಅತಿ ಕಡಿಮೆ ಕಾಲದಲ್ಲಿ ನಾವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿಕೊಡುತ್ತೇವೆಂದು ಹೇಳಿದರು. ಅವರಿಗೆ, ನೀವು ಬಾಕಿ ಇರತಕ್ಕದ್ದು ಕೊಡಲಿಲ್ಲ. ಕೆಇಬಿ ಮತ್ತು ಸರ್ಕಾರದಿಂದ ಒಟ್ಟು ಬಾಕಿ ಇರತಕ್ಕದ್ದು ನಿಮ್ಮ ಪ್ರಕಾರ 911.67 ಕೋಟಿ ರೂಪಾಯಿಗಳು. ಇದನ್ನು ನೀವು ಕೆಪಿಸಿಗೆ ಕೊಟ್ಟಿದ್ದೀರಿ ಕೊಜೆಂಟ್ರಿಕ್ಸ್‌ಗೆ ಹೋಗತಕ್ಕ ಅವಶ್ಯಕತೆ ಇರಲಿಲ್ಲ. ಅದಕ್ಕಿಂತ ತುಂಬಾ ಅಪಾಯಕಾರಿ ಏನು ಗೊತ್ತಾ? ಪವರ್ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಫಾರೀನ್ ಕಂಪನಿಯವರನ್ನು ನೀವು ಕೇಳುತ್ತಿದ್ದೀರಿ it is even more dangerous than giving Cogentrix to produce power. ಏಕೆಂದು ಹೇಳಿದರೆ ನಾವು ವಿತರಣಾ ವ್ಯವಸ್ಥೆಯಲ್ಲಿ ವಿದೇಶಿ ಕಂಪನಿಗಳನ್ನು ಆಹ್ವಾನ ಮಾಡಿದರೆ ನಮ್ಮ ದೇಶದ ಆಂತರಿಕ ಪರಿಸ್ಥಿತಿಯನ್ನು ನಮ್ಮ ಜುಟ್ಟನ್ನು ಅವರಿಗೆ ಕೊಟ್ಟ ಹಾಗೆ ಆಗುತ್ತದೆ. ಯಾವುದೇ ಸಂದರ್ಭದಲ್ಲಿ

ಅವರು ನಮ್ಮ ಮೂಗು ಹಿಡಿಯುತ್ತಾರೆ. ಡಿಸ್ಟ್ರಿಬ್ಯೂಷನ್ ಸಿಸ್ಟಂ ಅವರಿಗೆ ಕೊಟ್ಟರೆ. ಡಿಸ್ಟ್ರಿಬ್ಯೂಷೆನ್ ಸಿಸ್ಟಂ ಅವರಿಗೆ ಕೊಡತಕ್ಕದ್ದು ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ಮೂಗು ಮತ್ತು ನಮ್ಮ ಜುಟ್ಟನ್ನು ವಿದೇಶಿ ಕಂಪನಿಗಳಿಗೆ ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಈ ತರಹದ ಪರಿಸ್ಥಿತಿ ನಿರ್ಮಾಣ ಆಗಲಿಕ್ಕೆ ನಾವು ಸತತವಾಗಿ ನಿರಂತರವಾಗಿ, ನಮ್ಮ ರಾಜ್ಯದ ಅಭಿವೃದ್ಧಿ ಬಗ್ಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೊಳ್ಳಬೇಕಾಗಿದ್ದರೆ ನಾವು ಅನುಸರಿಸಬೇಕಾಗಿರತಕ್ಕ ಮಾರ್ಗಗಳು ಏನು ಎನ್ನತಕ್ಕಂಥದನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿರತಕ್ಕದ್ದು ಮತ್ತು ಅದರ ಬಗ್ಗೆ ಯಾವುದೇ ಗಮನವನ್ನು ಕೊಡದೇ ಇರುವ ಕಾರಣಕ್ಕೋಸ್ಕರ ಇವತ್ತು ಈ ಸ್ಥಿತಿ ಬಂದಿದೆ. ಬಹುಶ: ಕೆಲವು ದಿವಸಗಳು ಆದಮೇಲೆ ಈ ರಾಜ್ಯದಲ್ಲಿ ಸರ್ಕಾರದ ಏನೂ ಕೆಲಸ ಉಳಿಯುವುದಿಲ್ಲ ಎಂದು ಕಾಣುತ್ತದೆ. ಮುಂದೆ ಬರತಕ್ಕ ಸರ್ಕಾರಗಳಿಗೆ ಏನೂ ಕೆಲಸ ಇರುವುದಿಲ್ಲ. ನಮ್ಮ ಕೆಲಸ ಏನು ಅಂದರೆ ಅವರು ಕೊಡತಕ್ಕಂಥ ಸ್ವಲ್ಪ ಟ್ಯಾಕ್ಸ್‌ಗಳನ್ನು ವಸೂಲಿ ಮಾಡಿಕೊಂಡು ಸರ್ಕಾರಗಳನ್ನು ನಡೆಸುವುದು. ನಮಗೆ ಯಾವುದೇ ಅಭಿವೃದ್ಧಿ ಮಾಡತಕ್ಕಂಥ, ಮೂಲಭೂತವಾದಂತಹ ಸೌಲಭ್ಯಗಳನ್ನು ಬೆಳೆಸತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮಾಡತಕ್ಕಂಥ ಒಂದು ಆರ್ಥಿಕ ಧೋರಣೆ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಏಕೆಂದರೆ ಇವತ್ತು ರೋಡ್‌ಗಳಿಗೂ ವಿದೇಶಿ ಸಾಲವನ್ನು ತರುತ್ತಿದ್ದೇವೆ. ರೋಡುಗಳಿಂದ ಪ್ರಾರಂಭವಾಗಿ ಪ್ರತಿ ಒಂದಕ್ಕೂ ವಿದೇಶಿ ಸಾಲ. ಪ್ರತಿ ಒಂದಕ್ಕೂ ನಾವು ವಿದೇಶಿ ಸಾಲವನ್ನು ಅವಲಂಬಿಸತಕ್ಕ ಪರಿಸ್ಥಿತಿ ಇದೆ. ಎಲ್ಲವನ್ನೂ ಖಾಸಗೀಕರಣ ಮಾಡತಕ್ಕದ್ದು ಆರೋಗ್ಯ ಖಾಸಗೀಕರಣ, ನೀರು ಖಾಸಗೀಕರಣ, ರೋಡ್ ಖಾಸಗೀಕರಣ, ವಿದ್ಯುಚ್ಛಕ್ತಿ ಖಾಸಗೀಕರಣ. ಎಲ್ಲವನ್ನೂ ಖಾಸಗೀಕರಣ ಮಾಡಿ ಸರ್ಕಾರದ ಕೆಲಸ ಏನು ಎಂದು ಇವತ್ತು ನಾವು ಆಲೋಚನೆ ಮಾಡಬೇಕಾಗಿದೆ. ಹಾಗೆಯೇ ಇವತ್ತು ಆರೋಗ್ಯದ ಪ್ರಶ್ನೆ. ಮೂಲಭೂತವಾದಂತಹ ಸೌಕರ್ಯಗಳನ್ನು ಒದಗಿಸತಕ್ಕ ರೀತಿಯಲ್ಲಿ ಆರೋಗ್ಯದ ಒಂದು ಪ್ರಶ್ನೆ. ಇವೊತ್ತು ಹೇಗೆ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸತಕ್ಕಂಥ ಮತ್ತು ಡಿಸ್‌ಮ್ಯಾಂಟಲ್ ಮಾಡತಕ್ಕಂಥ ವ್ಯವಸ್ಥಿತವಾದಂತಹ ರೀತಿಯ ಯೋಜನೆ ಆಗುತ್ತಿದೆ ಎಂದರೆ ಸಾರ್ವಜನಿಕ ಉದ್ಯಮಗಳನ್ನು ಕಡೆಗಣಿಸತಕ್ಕದ್ದು. ವಿದೇಶಿ ಬಂಡವಾಳದ ಮೇಲೆ ಆಧಾರ ಬೀಳತಕ್ಕದ್ದು. ಸಾರ್ವಜನಿಕ ಉದ್ದಿಮೆಗಳಲ್ಲಿ ನಾವು ಹಾಕಿರತಕ್ಕಂಥ ಬಂಡವಾಳವನ್ನು ವಾಪಸ್ ಪಡೆಯತಕ್ಕದ್ದು ಮತ್ತು ವಿದೇಶಿ ಸಾಲಗಳಿಗೆ ಹೋಗತಕ್ಕದ್ದು. This is how the State Government is going to dismantle the growth of the state economy which they have no right at all. ಹಾಗೆಯೇ ಇವತ್ತು ಇನ್ನೊಂದು ಬಹಳ ಮುಖ್ಯವಾದಂತಹ ಸಮಸ್ಯೆ ಇದೆ. ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಿರುದ್ಯೋಗಗಳಿಗೆ ಪರಿಹಾರವನ್ನು ಕೊಡುವುದು. ಏನಾದರೂ ಒಂದು ನಿರ್ದಿಷ್ಟ ಕಾರ್ಯಕ್ರಮ ನಿಮ್ಮಲ್ಲಿ ಇದೆಯೇ ಎಂದರೆ, ಬಜೆಟ್‌ನಲ್ಲಿ ಹೇಳಿದ್ದಾರೆ. ಎಜುಕೇಶನ್ ಮತ್ತು ಹೆಲ್ತ್ ಇಲಾಖೆಗಳನ್ನು ಬಿಟ್ಟರೆ ಬೇರೆ ಯಾವುದೇ ಇಲಾಖೆಗಳಲ್ಲಿ ನಾವು ಕೆಲಸಗಳನ್ನು ನಿರ್ಮಾಣ ಮಾಡುವುದಿಲ್ಲ, ಖಾಲಿ ಇರತಕ್ಕದ್ದನ್ನು ತೆಗೆದು ಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂದರೆ ಇದರ ಅರ್ಥ ಏನು? ನಿರುದ್ಯೋಗಿ ಸಮಸ್ಯೆಯನ್ನು ಪರಿಹಾರ ಮಾಡುವುದರ ಬದಲು ನಿರುದ್ಯೋಗಿ ಸಮಸ್ಯೆಯನ್ನು ಹೆಚ್ಚು ಮಾಡತಕ್ಕಂಥ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ. 5,600 ಕೋಟಿ ರೂಪಾಯಿ ವಿದೇಶಿ ಬಂಡವಾಳವನ್ನು ತೆಗೆದುಕೊಂಡು ನೀವು ಎಷ್ಟು ಜನಕ್ಕೆ ಕೆಲಸ ಕೊಡುತ್ತೀರಿ ಎಂದರೆ 5 ಸಾವಿರ ಜನಕ್ಕೆ ಉದ್ಯೋಗ ಸಿಗಬಹುದು ಎಂದು ನಿರೀಕ್ಷೆ ಮಾಡುತ್ತಿದ್ದೀರಿ. 5,600 ಕೋಟಿ ರೂಪಾಯಿ ನಾವು ವಿದೇಶಿ ಬಂಡವಾಳವನ್ನು ಈ ರಾಜ್ಯಕ್ಕೆ ತಂದು ಕಾರ್ಖಾನೆಗಳನ್ನು ಸ್ಥಾಪಿಸಿದರೆ ಕರ್ನಾಟಕ ರಾಜ್ಯದಲ್ಲಿ

5 ಸಾವಿರ ಜನಕ್ಕೆ ಉದ್ಯೋಗವನ್ನು ಕಲ್ಪಿಸತಕ್ಕ ಅವಕಾಶ ಇದೆ ಎಂದು ಹೇಳುತ್ತೀರಿ. ಎಷ್ಟು ಲಕ್ಷ ಜನ ಇವತ್ತು ಕರ್ನಾಟಕ ರಾಜ್ಯದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ? ಅಷ್ಟು ಜನ ವಿದ್ಯಾವಂತ ನಿರುದ್ಯೋಗಿಗಳಿಗೆ ನೀವು ಕೆಲಸ ಕೊಡಲಿಕ್ಕೆ ಸಾಧ್ಯ ಇಲ್ಲ ಎಂದ ಮೇಲೆ ಆ ವಿದ್ಯಾವಂತ ನಿರುದ್ಯೋಗಿಗಳು ಏನು ಆಗುತ್ತಾರೆ? ನಾವು ಈ ರಾಷ್ಟ್ರದಲ್ಲಿ ನೋಡಿದ್ದೇವೆ. ಸಮಾಜಘಾತುಕ ಶಕ್ತಿಗಳು ಆಗಿ, ಬೇಜವಾಬ್ದಾರಿ ನಾಗರೀಕರಾಗಿ ಪ್ರತ್ಯೇಕತಾವಾದಿ ಶಕ್ತಿಗಳಾಗಿ, ಕೋಮು ಗಲಭೆಗಳಲ್ಲಿ ಭಾಗವಹಿಸತಕ್ಕವರು ನಾನು ಹಿಂದೆಯೇ ಪ್ರಸ್ತಾಪ ಮಾಡಿದೆ. ದಾರಿಗಳನ್ನು ಅಡ್ಡಗಟ್ಟಿ ಲೂಟಿ ಮಾಡುತ್ತಿದ್ದಾರೆ. ಏಕೆ ಈ ಸಮಸ್ಯೆ ಉದ್ಭವ ಆಗಿದೆ ಎಂದರೆ ಸೀರಿಯಸ್ಸಾದಂತಹ ಸೋಷಿಯೋ ಎಕನಾಮಿಕ್ ಅಫೆನ್ಸಸ್‌ಗೆ ದಾರಿ ಮಾಡಿಕೊಡುತ್ತದೆ ಇವತ್ತು ಅನ್‌ಎಂಪ್ಲಾಯ್‌ಮೆಂಟ್ ಜಾಸ್ತಿ ಆದರೆ. ಆ ಅನ್‌ಎಂಪ್ಲಾಯ್‌ಮೆಂಟನ್ನು ಕಡಿಮೆ ಮಾಡಲಿಕ್ಕೆ ಯಾವುದೇ ರೀತಿಯಾದಂತಹ ಯೋಜನೆಗಳನ್ನು ಹಾಕಿಕೊಂಡಿಲ್ಲ. ಇನ್ನೊಂದು ನಿರುದ್ಯೋಗವನ್ನು ಕಡಿಮೆ ಮಾಡಲಿಕ್ಕೆ ಇಲ್ಲ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಕಾರ್ಯಕ್ರಮ ಇಲ್ಲ. ಇನ್ನೊಂದು ಕಡೆ ಬಹಳ ಪ್ರಮುಖವಾದುದು. ಕೃಷಿ ಕ್ಷೇತ್ರ. ಕೃಷಿ ಕ್ಷೇತ್ರದಲ್ಲಿ ನಮಗೆ ಇವತ್ತು ಸ್ಪಷ್ಟವಾದಂತಹ ಗುರಿ ಇರಬೇಕಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಮೊದಲನೆಯದು ಉತ್ಪಾದನೆ. ಆ ಉತ್ಪಾದನೆಯಲ್ಲಿ ಕೂಡ ಆಹಾರ ಸಾಮಾಗ್ರಿಗಳ ಉತ್ಪಾದನೆ ಬಹಳ ಮುಖ್ಯ. ಆಹಾರ ಸಾಮಾಗ್ರಿಗಳ ಉತ್ಪಾದನೆಯನ್ನು ನಾವು ಹೆಚ್ಚು ಮಾಡದೇ ಹೋದರೆ ಇಡೀ ಕರ್ನಾಟಕ ರಾಜ್ಯ ಭಿಕ್ಷಾ ಪಾತ್ರೆಗಳನ್ನು ಹಿಡಿದು ಬೇರೆ ರಾಜ್ಯಗಳನ್ನು ಅವಲಂಬಿಸತಕ್ಕ ಪರಿಸ್ಥಿತಿ ಉಂಟಾಗುತ್ತದೆ. ನಿಮ್ಮ ಬಜೆಟ್‌ನಲ್ಲಿ ನೀವು ಹಾಕಿರತಕ್ಕ ಗುರಿಯನ್ನು, ಆಹಾರ ಸಾಮಾಗ್ರಿಗಳ ಉತ್ಪನಕ್ಕೆ ನೀವು ಹಾಕಿದಂತಹ ಗುರಿ ಮೂರು ವರ್ಷಗಳಲ್ಲಿ ನಿಮ್ಮ ಗುರಿಯನ್ನು ಮುಟ್ಟಲೇ ಇಲ್ಲ. ಇವತ್ತಿಗೂ ನಿಮ್ಮ ಗುರಿ ಇರತಕ್ಕದ್ದು 85 ಲಕ್ಷ ಟನ್ ಆಹಾರ ಸಾಮಾಗ್ರಿಗಳ ಗುರಿ ಇದೆ. ಆದರೆ ಈ ಗುರಿಯನ್ನು ಮುಟ್ಟಲಿಕ್ಕೆ ಆಗಲಿಲ್ಲ. ಇವತ್ತು ಸರ್ಕಾರವೇ ಹೇಳಿರತಕ್ಕ ಅಂಕಿ ಅಂಶಗಳ ಪ್ರಕಾರ ಎರಡು ಸಾವಿರ ಇಸವಿಗೆ ಕರ್ನಾಟಕ ರಾಜ್ಯದಲ್ಲಿರತಕ್ಕ ಒಟ್ಟು ಜನಸಂಖ್ಯೆಗೆ ಎರಡು ಹೊತ್ತು ಅನ್ನವನ್ನು ಕೊಡಬೇಕಾದರೆ 142 ಲಕ್ಷ ಟನ್ ಆಹಾರ ಬೇಕಾಗಿದೆ. ಇನ್ನು ಕೇವಲ ವರ್ಷ ಇದೆ. ಇವತ್ತು ನಮ್ಮ ಆಹಾರ ಸಾಮಾಗ್ರಿಗಳ ಉತ್ಪಾದನೆ 85 ಲಕ್ಷ ಟನ್ ಮಾತ್ರ, ಇನ್ನೂ ಎರಡು ವರ್ಷದಲ್ಲಿ 142 ಲಕ್ಷ ಟನ್ ಆಹಾರ ಸಾಮಾಗ್ರಿಗಳನ್ನು ಉತ್ಪಾದನೆ ಮಾಡದೇ ಹೋದರೆ ಕರ್ನಾಟಕ ರಾಜ್ಯದಲ್ಲಿರತಕ್ಕ ಜನತೆಗೆ ನಾವು ಆಹಾರವನ್ನು ಒದಗಿಸಲಿಕ್ಕೆ ಸಾಧ್ಯ ಇಲ್ಲ. ಆ ನಿಟ್ಟಿನಲ್ಲಿ ನೀವು ಹಾಕಿರತಕ್ಕಂಥ ಕಾರ್ಯಕ್ರಮ ಏನು? ಇವತ್ತು ಹೊಸ ಕೃಷಿಯ ಧೋರಣೆಗಳಿಂದ ಮತ್ತು ವಿದೇಶಿ ಕಂಪನಿಗಳನ್ನು ಕೃಷಿಯೊಳಗೆ ನೀವು ಭಾಗವಹಿಸಲಿಕ್ಕೆ ಅವಕಾಶ ಮಾಡಿ ಇಡೀ ಕೃಷಿ ರಂಗ ದಿವಾಳಿ ಆಗುತ್ತಿದೆ. ರೈತರ ಆತ್ಮಹತ್ಯೆಗೆ ಕಾರಣವೇನು? ಕಳಪೆ ಮಟ್ಟದ ಬೀಜಗಳನ್ನು ಕಳಪೆ ಮಟ್ಟದ ಪೆಸ್ಟಿಸೈಡ್ಸ್, ಇದನ್ನು ಯಾರು ಉತ್ಪಾದನೆ ಮಾಡುತ್ತಿರುವುದು? ಬಹು ರಾಷ್ಟ್ರೀಯ ಕಂಪನಿಗಳು ಇವತ್ತು ಪೆಸ್ಟಿಸೈಡ್ಸ್‌ನ್ನು ಉತ್ಪಾದನೆ ಮಾಡುತ್ತವೆ. ಬೀಜಗಳನ್ನು ಉತ್ಪಾದನೆ ಮಾಡಿ ರೈತರಿಗೆ ಕೊಡುತ್ತವೆ. ಅವೆಲ್ಲವೂ ಕೂಡ ಡಿಫೆಕ್ಟೀವ್. ಇವತ್ತು ರೈತನಿಗೆ ಹೊಡೆತ ಬೀಳುತ್ತಿದೆ. ಇನ್ನೊಂದು ಕಡೆ all along ನೀವು ಎನ್‌ಕರೇಜ್ ಮಾಡುತ್ತಿರುವುದು ಯಾವುದಕ್ಕೆ, ಕಮರ್ಷಿಯಲ್ ಕ್ರಾಪ್‌ಗೆ. ಕಮರ್ಷಿಯಲ್ ಕ್ರಾಪ್ಸ್‌ಗೆ ಎನ್‌ಕರೇಜ್ ಮಾಡುತ್ತೇವೆಂದು ಹೇಳಿ ಒಂದು ಕಡೆ ಆಹಾರ ಸಾಮಾಗ್ರಿಗಳ ಉತ್ಪಾದನೆಯನ್ನು ಕಡಿಮೆ ಮಾಡಿ ಇನ್ನೊಂದು ಕಡೆ ಕಮರ್ಷಿಯಲ್ ಕ್ರಾಪ್‌ಗೆ ಇವತ್ತು ಬೆಲೆ ಇಲ್ಲದೆ, ಟೊಮ್ಯಾಟೊ, ಆಲೂಗೆಡ್ಡೆ ಬೆಳೆದಂತಹ ರೈತರು ಬೀದಿಗೆ ಇಳಿದಿದ್ದಾರೆ. ಆ ಕಡೆ ಕಮರ್ಷಿಯಲ್ ಕ್ರಾಪ್ಸ್‌ಗೂ ರಕ್ಷಣೆ ಇಲ್ಲ ಈ ಕಡೆ ಆಹಾರ ಸಾಮಾಗ್ರಿಗಳಿಗೂ ರಕ್ಷಣೆ ಇಲ್ಲ. ಆಹಾರ ಸಾಮಾಗ್ರಿಗಳ ಉತ್ಪಾದನೆ, ಆಹಾರ ಪದಾರ್ಥಗಳ ಉತ್ಪಾದನೆ ಇಲ್ಲದೇ ನೀವು ಹೇಗೆ ಈ ರಾಜ್ಯವನ್ನು ಅಭಿವೃದ್ಧಿ

ಪಡಿಸುತ್ತೀರಿ? ಅದಕ್ಕೆ ಏನು ನಿಮ್ಮ ಹತ್ತಿರ ಕಾರ್ಯಕ್ರಮ ಇದೆ? ಅದೇ ರೀತಿಯಲ್ಲಿ ನೀವು ಇವತ್ತಿನ ದಿವಸ ಕೃಷಿ ರಂಗದಲ್ಲಿ ಬಹಳ ಪ್ರಮುಖವಾಗಿರುವಂತಹ ಕೃಷಿ ಕಾರ್ಮಿಕರ, ಭೂಹೀನರ, ಇವರನ್ನು ರಕ್ಷಣೆ ಮಾಡುವುದಕ್ಕೆ ಬಜೆಟ್‌ನಲ್ಲಿ ಯಾವುದೇ ರೀತಿಯಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಕೃಷಿ ಬೆಳವಣಿಗೆ ವಾಸ್ತವವಾಗಿ ಕುಂಠಿತವಾಗುತ್ತಿದೆ. ಕೃಷಿ ಬೆಳವಣಿಗೆ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ನಿಮ್ಮ ಬಜೆಟ್‌ನಲ್ಲಿ ಯಾವ ರೀತಿಯಾದಂತಹ ಅನುಕೂಲವನ್ನು ಮಾಡಿಕೊಟ್ಟಿರುವಿರಿ? ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು, ಹೆಚ್ಚು ಮಾಡುವಂತಹದ್ದು, ಇದರಲ್ಲಿ ಶಿಕ್ಷಣ ರಂಗ, ಶಿಕ್ಷಣ ರಂಗದಲ್ಲಿ ಇವತ್ತು ಬಹಳ ಪ್ರಮುಖವಾದಂತಹ ಎರಡು ಅಂಶಗಳು ಇವೆ. ಅದರಲ್ಲಿ ಪ್ರಾಥಮಿಕ ಶಿಕ್ಷಣ ಇನ್ನೊಂದು ಉನ್ನತ ಶಿಕ್ಷಣ. ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿ ಕೊಂಡಿರುವಂತಹವರು ಸನ್ಮಾನ್ಯ ಶ್ರೀ ಹೆಚ್. ಜಿ. ಗೋವಿಂದೇಗೌಡರ ಬಗ್ಗೆ ನಮಗೆಲ್ಲರಿಗೂ ಬಹಳ ಗೌರವ ಇದೆ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಅದರಲ್ಲಿ ಯಾವುದೇ ಎರಡು ಮಾತಿಲ್ಲ, ಇರತಕ್ಕಂತಹ ಲಿಮಿಟೇಶನ್ಸ್‌ನಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆ. ಅದನ್ನೆಲ್ಲಾ ಮಾಡಿದ್ದಾರೆ, ಆದರೆ ಇವತ್ತು ಡಿಪಿ ಇಪಿ ಪ್ರೋಗ್ರಾಂಗೆ ಹಣ ಎಲ್ಲಿಂದ ಬಂತು? Is it not your own money? It is the World Bank's aid. ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ನೀವು ಎಷ್ಟು ಹಣ ಖರ್ಚು ಮಾಡುತ್ತಿರುವಿರಿ ಎಂದು ಬಜೆಟ್‌ನಲ್ಲಿ ಏನು ಹೇಳಿರುವಿರಿ, ಅದರಲ್ಲಿ ಡಿಪಿಇಪಿ ಕಾರ್ಯಕ್ರಮಕ್ಕೆ ಬಂದಿರತಕ್ಕಂತಹದ್ದು ವರ್ಲ್ಡ್ ಬ್ಯಾಂಕ್ ನಿಂದ. ಅದು ನಿಮ್ಮ ರಾಜ್ಯದ ಹಣ ಅಲ್ಲ. ನಾವು ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವ ಹಕ್ಕು ನಿಮಗೆ ಇಲ್ಲ. ನೀವು ಒಂದೊಂದು ಜಿಲ್ಲೆಯನ್ನು ಪ್ರಾಥಮಿಕ ಶಿಕ್ಷಣಕ್ಕೆ ಆಯ್ಕೆ ಮಾಡಿಕೊಂಡಿರುವಿರಿ. ಒಂದೊಂದು ಜಿಲ್ಲೆಗೆ, ವಿಶ್ವಬ್ಯಾಂಕಿನಿಂದ ಡಿಪಿಇಪಿ ಪ್ರೊಗ್ರಾಂಗೆ ಎಷ್ಟು ಕೋಟಿ ರೂಪಾಯಿ ಬಂದಿದೆ, ನೀವು ಎಷ್ಟು ಖರ್ಚು ಮಾಡಿರುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಶೇ. 85 ರಷ್ಟು ವಿಶ್ವಬ್ಯಾಂಕಿನಿಂದ ಬರುತ್ತದೆ, ಉಳಿದ ಭಾಗ ಅಂದರೆ, ಶೇ 15 ರಷ್ಟು ನಮ್ಮ ಸ್ಟೇಟ್‌ಫಂಡ್‌ನಿಂದ ಪ್ರೊವೈಡ್ ಮಾಡುತ್ತೇವೆ. ಇದೂವರೆವಿಗೂ 11 ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ಇದರಿಂದ ಪ್ರೈಮರಿ ಶಾಲೆಗಳಿಗೆ ಅನುಕೂಲವಾಗುತ್ತದೆ. ಅದನ್ನು ನಾವು ಸಾಲ ತೆಗೆದುಕೊಂಡೆ ಮಾಡಿಸುತ್ತಿರುವುದು. ಇದರಲ್ಲಿ ನಮ್ಮ ಜವಾಬ್ದಾರಿಯೂ ಸಹ ಇದೆ. ಅಂದರೆ ಕಟ್ಟಡ ಕಟ್ಟಿಸುವುದರಲ್ಲಿ ನಮ್ಮ ಮೇಲ್ವಿಚಾರಣೆಯೂ ಸಹ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅಂದರೆ ಸಾಲನೇ ತಾನೆ? ವಾಪಸ್ಸು ಕೊಡಬೇಕು ತಾನೆ? ಲೋನ್ ಕಾಂಪೋನೆಂಟ್ಸ್ ಇದೆ, ಏಡ್ ಕಾಂಪೋನೆಟ್ ಇದೆ. ಅದರಲ್ಲಿ ಲೋನ್ ಕಾಂಪೋಸೆಂಟ್ ಎಷ್ಟಿದೆ, ಏಡ್ ಕಾಂಪೋನೆಂಟ್ ಎಷ್ಟಿದೆ ಎಂದು ಹೇಳಬೇಕಾಗುತ್ತದೆ. ಅಂದರೆ 85 ಪರ್ಸೆಂಟ್ ಅವರು ಕೊಡುತ್ತಾರೆ, 15 ಪರ್ಸೆಂಟ್ ನೀವು ಕೊಡುತ್ತೀರಿ. ಅಂದರೆ ಮೇಜರ್ ಅಮೌಂಟ್ ಯಾರದು? ಮೇಜರ್ ಅಮೌಂಟ್ ಅವರದೆ. Whether it is a loan or whether it is an aid? ಇವತ್ತಿನ ದಿವಸ ಪ್ರಾಥಮಿಕ ಶಿಕ್ಷಣ ಯಾವ ಸ್ಥಿತಿಗೆ ಬರಬೇಕಾಗಿದೆ ಎಂದರೆ, ಪ್ರಾಥಮಿಕ ಶಿಕ್ಷಣ ಎನ್ನುವಂತಹ ಕಾನ್‌ಸೆಪ್ಟ್ ಬದಲಾವಣೆಯಾಗಬೇಕಾಗಿದೆ. ಇವತ್ತು ನಾವು ಹೇಗೆ ವಿದ್ಯಾರ್ಥಿಗಳನ್ನು ಶಿಕ್ಷಣದ ವ್ಯಾಪ್ತಿಯೊಳಗೆ ತಂದು, ಅವರನ್ನು ಎಂತಹ ಪ್ರಜೆಗಳನ್ನಾಗಿ ತಯಾರು ಮಾಡಬೇಕೆನ್ನುವುದು ಬಹಳ ಮುಖ್ಯ. ನೀವು

ಎಷ್ಟು ಶಾಲಾ ಕಟ್ಟಡಗಳನ್ನು ಕಟ್ಟಿಸಿರುವಿರಿ, ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡಿರುವಿರಿ, ಎಷ್ಟು ಜನ ಉಪಾಧ್ಯಾಯರನ್ನು ನೇಮಕ ಮಾಡುತ್ತೀರಾ ಎಂಬುದರ ಜೊತೆಗೆ ನಾವು ಅವರಿಗೆ ಏನು ಹೇಳಿಕೊಡುತ್ತೇವೆ ಎಂಬುದು ಬಹಳ ಮುಖ್ಯ. ಆದರೆ ಇದು ಈ ವಿಷಯದ ವ್ಯಾಪ್ತಿಗೆ ಬರುವುದಿಲ್ಲ, ಆದಕಾರಣ ಈ ವಿಷಯದ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಜೊತೆಗೆ ನೀವು ಉನ್ನತ ಶಿಕ್ಷಣಕ್ಕೆ ಕೊಡುತ್ತಿರುವಂತಹ ಹಣ ಎಷ್ಟು? ಉನ್ನತ ಶಿಕ್ಷಣ ಸುಮಾರು 4-5 ವರ್ಷದಿಂದ ಬಜೆಟ್‌ನಲ್ಲಿ ಖೋತಾ ಮಾಡಿರುವಿರಿ. ವಿಶ್ವವಿದ್ಯಾಲಯದವರಿಗೆ ನೀವು ಏನು ಹೇಳುತ್ತಿರುವಿರಿ, ನೀವೇ ಹಣವನ್ನು ಉತ್ಪಾದನೆ ಮಾಡಿಕೊಳ್ಳಿ ಎಂದು ಹೇಳುತ್ತಿರುವಿರಿ. ಅದಕ್ಕಾಗಿ ಇವತ್ತಿನ ದಿವಸ ಅವರು ಏನು ಮಾಡುತ್ತಿದ್ದಾರೆ ಎಂದರೆ, ಬಂಡವಾಳಶಾಯಿಗಳು, ಕ್ಯಾಪಿಟಲಿಸ್ಟ್ ಮಲ್ಟಿನ್ಯಾಷನಲ್ ಕಾರ್ಪೋರೇಶನ್ ಅವರ ಹತ್ತಿರ ಹೋಗಿ ಸಲಾಂ ಹೊಡೆದು, ನಿಮಗೆ ಯಾವ ರೀತಿಯಾದಂತಹ ಸಿಲಬಸ್ ಅವಶ್ಯಕತೆ ಇದೆಯೋ ಅದನ್ನೇ ನಮ್ಮ ವಿಶ್ವವಿದ್ಯಾಲಯದವರು ತಯಾರು ಮಾಡುತ್ತೇವೆ, ನಮಗೆ ಹಣಕಾಸಿನ ವ್ಯವಸ್ಥೆ ಮಾಡಿಕೊಡಿ ಎನ್ನುವಂತಹ ಪರಿಸ್ಥಿತಿಗೆ ಅವರನ್ನು ತಂದಿದ್ದಾರೆ.

ಅಧ್ಯಕ್ಷರು :- ತಾವು ಯಾವುದಕ್ಕೆ ಆಧ್ಯತೆ ನೀಡುವಿರಿ? ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ಆಧ್ಯತೆ ನೀಡುವಿರಾ, ಅಥವಾ ಪ್ರೌಢ ಶಿಕ್ಷಣಕ್ಕೆ ಆಧ್ಯತೆ ನೀಡುವಿರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನನ್ನ ಆಧ್ಯತೆ ಪ್ರಾಥಮಿಕ ಶಿಕ್ಷಣಕ್ಕೆ Primary Education is most important ಪ್ರೌಢ ಶಿಕ್ಷಣದಲ್ಲಿ ಇವತ್ತು wrong trend ಬಂದಿದೆ. Giving importance to technical education. ನಾನ್ ಟೆಕ್ನಿಕಲ್ ಎಜುಕೇಶನ್‌ಗೆ ನೋ ಪ್ರಿಯಾರಿಟಿ ಆಟ್ ಆಲ್. ನಾನ್ ಟೆಕ್ನಿಕಲ್ ಎಜುಕೇಶನ್‌ಗೆ ಪ್ರಿಯಾರಿಟಿ ಇಲ್ಲ ಎನ್ನುವುದರ ಅರ್ಥ, ಈ ದೇಶದಲ್ಲಿ ಸಂಶೋಧನೆ ಬೇಡ ಹೊಸ ವಿಷಯಗಳನ್ನು ಸಂಶೋಧನೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ, ಈ ದೇಶದ ಇತಿಹಾಸವನ್ನು ತಿಳಿಯತಕ್ಕಂತಹ ಅವಶ್ಯಕತೆ ಇಲ್ಲ, ಅರ್ಥ ಶಾಸ್ತ್ರವನ್ನು ತಿಳಿಯತಕ್ಕಂತಹ ಅವಶ್ಯಕತೆ ಇಲ್ಲ, ರಾಜಕೀಯ ಶಾಸ್ತ್ರವನ್ನು ತಿಳಿಯತಕ್ಕಂತಹ ಅವಶ್ಯಕತೆ ಇಲ್ಲ ಮತ್ತು ಯಾವುದೇ ರೀತಿಯಾದಂತಹ ಸಮಾಜ ವಿಜ್ಞಾನದಲ್ಲಿ ಸಂಶೋಧನೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ Because it all comes under non-technical higher education. ಅಂದರೆ ಒಂದು ದೇಶವನ್ನು ನೀವು ಇಮ್ಯಾಜಿನ್ ಮಾಡುವುದಕ್ಕೆ ಆಗುತ್ತದೆಯೇ, ಇತಿಹಾಸ ತಿಳಿಯುವುದು ಬೇಡ, ಅರ್ಥಶಾಸ್ತ್ರ ತಿಳಿಯುವುದು ಬೇಡ, ರಾಜಕೀಯ ಶಾಸ್ತ್ರ ತಿಳಿಯುವುದು ಬೇಡ, ಭೌಗೋಳ ಶಾಸ್ತ್ರ ತಿಳಿಯುವುದು ಬೇಡ ಇವೆಲ್ಲವನ್ನೂ ಬಿಟ್ಟು ಈ ದೇಶವನ್ನು You are thinking you are under the impression that only technocrats can build this country. It is most dangerous. This world and country are not built by only Technocrats. ನಿಮ್ಮ ಗೆಲಿಲಿಯೋ ಇಲ್ಲದೆ ಇದಿದ್ದರೆ ನಿಮ್ಮ ಟೆಕ್ನೋಕ್ರಾಟ್ಸ್ ಎಲ್ಲಾ ಬೆಳೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಸಾಕ್ರಟೀಸ್ ಇಲ್ಲದೆ ಇದ್ದಿದ್ದರೆ ನಿಮ್ಮ ಟೆಕ್ನಾಲಜಿ ಎಲ್ಲಾ ಬೆಳೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. because fundamental research is most important both in social sciences and natural sciences. ಅವು ಯಾವುದೂ ಇಲ್ಲದೆ ಈ ದೇಶವನ್ನು ಜಗತ್ತನ್ನು ಬರೀ ಟೆಕ್ನೋಕ್ರಾಟ್ಸ್‌ನಿಂದ ಬೆಳೆಸುತ್ತೇವೆ ಎಂದು ಹೇಳುವುದು ತಪ್ಪು. ಆ ರೀತಿಯಲ್ಲಿ ಇವತ್ತು ಶಿಕ್ಷಣ ತಪ್ಪು ದಾರಿಯಲ್ಲಿ ಹೋಗುತ್ತಿದೆ.

ಅಧ್ಯಕ್ಷರು :- ನಿಮ್ಮ ಕಲ್ಪನೆಯಲ್ಲಿ ಶಿಕ್ಷಣದ ವ್ಯವಸ್ಥೆ ಯಾವ ರೀತಿ ಇರಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಶಿಕ್ಷಣದ ವ್ಯವಸ್ಥೆ ಯಾವ ರೀತಿ ಇರಬೇಕು ಎಂದು ಹೇಳುವುದಕ್ಕೆ ಬಹುಶಃ ಇದು ಸಬ್ಜೆಕ್ಟ್ ಅಲ್ಲ, ಜನರ ಅವಶ್ಯಕತೆಗೆ ಅನುಗುಣವಾಗಿ ದೇಶದ ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ಇರಬೇಕಾಗುತ್ತದೆಯೇ ವಿನಃ ಯಾರೋ ಕೆಲವು ಜನರಿಗೋಸ್ಕರ ಶಿಕ್ಷಣ ಇರಬೇಕಾದಂತಹ ಅವಶ್ಯಕತೆ ಇಲ್ಲ; ಈ ದೇಶದಲ್ಲಿ ಇಡಿ ದೇಶ, ಇಡೀ ಜನತೆಯ ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ಇರಬೇಕಾಗುತ್ತದೆ. ಯಾರೋ ಕೆಲವರಿಗೋಸ್ಕರ ಶಿಕ್ಷಣ ಇರತಕ್ಕಂತಹ ಅವಶ್ಯಕತೆ ಇಲ್ಲ. ಆದಕಾರಣ ಇವತ್ತು ಶಿಕ್ಷಣದ ವ್ಯವಸ್ಥೆ ಯಾವ ರೀತಿಯಾಗಿದೆ ಎಂದರೆ, ಅವತ್ತು ಮನು ಹೇಳಿದ್ದ, "ನಾಸೂತ್ರಾಯ ಮತಿತತಾತಿ ಎಂದು ಹೇಳಿದ್ದ" ಆ ಕಾರಣದಿಂದ ವಿದ್ಯೆಯನ್ನು ನಿರಾಕರಿಸಿದಿರಿ, ಆದರೆ ಇವತ್ತು ಹಣ ಇದ್ದವರಿಗೆ ಮಾತ್ರ ಶಿಕ್ಷಣ ಎಂದು ಹೇಳಿ, ಬಡವರಿಗೆ ಶಿಕ್ಷಣವನ್ನು ನಿರಾಕರಿಸುತ್ತಿದ್ದೀರಿ. ಅದಕ್ಕೂ ಇದಕ್ಕೂ ವ್ಯತ್ಯಾಸವೇನಿಲ್ಲ. ಮನು ಹೇಳಿದ್ದು "ನಾಸೂತ್ರಾಯ ಮತಿತತಾತಿ" ಅವನು ಯಾವುದೋ ಒಂದು ಜಾತಿ ಆಧಾರದ ಮೇಲೆ ಹೇಳಿದ್ದ, ಆತ ಐದಾರು ಸಾವಿರ ವರ್ಷಗಳಿಂದ ವಿದ್ಯೆಯನ್ನು ನಿರಾಕರಿಸಿದ. ಈಗ ತಾವು ಏನು ಮಾಡುತ್ತಿರುವಿರಿ ಅಂದರೆ, ಹಣ ಇದ್ದವರಿಗೆ ಮಾತ್ರ ಶಿಕ್ಷಣ ಎಂದು ಹೇಳಿ, ಬಡವರಿಗೆ ಶಿಕ್ಷಣವನ್ನು ನಿರಾಕರಿಸುತ್ತಿರುವಿರಿ. ಇದೇ ವ್ಯತ್ಯಾಸ, ಬೇರೆ ವ್ಯತ್ಯಾಸವಿಲ್ಲ. That's how education has to grow, that's how it has grown, that's how we are allowing it to grow, not according to the needs of this country.

ಒಬ್ಬ ಸದಸ್ಯರು :- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕಮ್ಯುನಿಸ್ಟ್ ಮಿತ್ರರು ಉದ್ದಕ್ಕೂ ಮನಸ್ಮೃತಿಯನ್ನು ಆಕ್ಷೇಪ ಮಾಡುತ್ತಿದಂತವರು, ಇವತ್ತು ಮನಸ್ಮೃತಿಯ ಒಂದು ಶ್ಲೋಕವನ್ನು ಹೇಳಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸಂಸ್ಕೃತವನ್ನು ತಾವು ಮಾತ್ರ ಓದಿರುವಿರಿ, ಎಂದು ತಿಳಿದುಕೊಂಡರೆ ತಪ್ಪು ನಿಮ್ಮದು, ಅದು ನನ್ನ ತಪ್ಪಲ್ಲ, ಅದನ್ನು ಯಾರು ಬೇಕಾದರೂ ಓದಬಹುದು. ಇವತ್ತು ನಾನೇನು ಹೊಗಳಲಿಲ್ಲ. ಇವತ್ತು ಸಹ ನಾನು ಅದನ್ನು ಆಕ್ಷೇಪ ಮಾಡಿದೆ.

ಶ್ರೀ ಸಿ. ಬೈರೇಗೌಡ :- ಮನು ಮತ್ತು ಮತ್ತೊಬ್ಬರನ್ನು ಶೂದ್ರರು ಮುಟ್ಟಬಾರದು ಎಂದು ಏನು ಹೇಳುತ್ತಿದ್ದರೋ, ಅದೇ ಮಾತು ಇವತ್ತಿನ ದಿವಸ ಅವರ ಬಾಯಿಯಲ್ಲೂ ಬರುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ತಾವು ಶಿಕ್ಷಣದ ಬಗ್ಗೆ ಪ್ರಸ್ತಾಪ ಮಾಡುತ್ತಿರುವಿರಿ. ಯಾರೋ ಒಬ್ಬರು ಬ್ರಿಟೀಷರು ಹಾಕಿಕೊಟ್ಟಂತಹ ಮಾರ್ಗದಲ್ಲಿಯೇ ನಾವು ಹೋಗುತ್ತಿದ್ದೇವೆ. ಹಳ್ಳಿ ಬಿಟ್ಟು ಇಲ್ಲಿ ಯಾವುದೋ ಒಂದು ಹೋಟೆಲ್‌ನಲ್ಲಿ ಸಪ್ಲೈಗಿರಿ ಸಿಕ್ಕಿದರೂ ಪರವಾಗಿಲ್ಲ, ಆದರೆ ಉಳುಮೆ ಮಾಡುವುದಕ್ಕೆ ಆಗದೆ, ತನ್ನ ಕಾಲ ಮೇಲೆ ತಾನು ನಿಲ್ಲುವಂತಹ ಯೋಗ್ಯತೆಯನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ಆಗದೆ, ಈ ಗ್ರಾಜ್ಯುಯೇಶನ್ ಕೊಡಿಸಿ, ಅವನ ಈಗ ನಗರ ಪ್ರದೇಶಕ್ಕೆ ಬಂದು, ಸರ್ಕಾರಿ ನೌಕರಿ ಅಥವಾ ಇನ್ನೊಂದು ನೌಕರಿಯನ್ನು ಅವಲಂಬಿಸಿಕೊಂಡು ಹಳ್ಳಿಯನ್ನು ಬಿಡುವಂತಹ ಒಂದು ಪ್ರವೃತ್ತಿಯಾಗಿದೆ. ಶಿಕ್ಷಣ ಹೇಗೆ ಇರಬೇಕು ಎಂದರೆ, ಅವನ ಕಾಲಮೇಲೆ ಅವನು ಗೌರವದಿಂದ, ಸರ್ಕಾರಿ ಉದ್ಯೋಗದ ಮೇಲೆ ಅವಲಂಬಿತನಾಗದೆ

ಹಳ್ಳಿ, ಅವನ ಊರನ್ನು ಉದ್ಧಾರ ಮಾಡುವಂತಹ ಅವನಲ್ಲಿ ಜ್ಞಾನೋದಯವಾಗುವ ರೀತಿ ಮಾರ್ಪಾಡು ತರುವ ಒಂದು ಹೊಸ ಪ್ರಯತ್ನ ಆದರೆ, ಆ ಶಿಕ್ಷಣಕ್ಕೆ ಒಂದು ಅರ್ಥ ಬರುತ್ತದೆ. ತಾವೇ ಹೇಳಿದ್ದೀರಿ ಶೇ 70 ಭಾಗ ಈ ಸರ್ಕಾರಿ ನೌಕರರಿಗೆ ಸಂಬಳ ಕೊಡುತ್ತಿದ್ದೇವೆ ಎಂದು. ನೂರಕ್ಕೆ 90 ಜನ ತಮ್ಮ ಫೈಲನ್ನು ನೋಡಿ ಬಡ ಬೋರೆಗೌಡನ ಕೆಲಸ ಮಾಡಿಕೊಡಬೇಕೆಂಬ ಪ್ರಜ್ಞೆ ಅವನಲ್ಲಿ ಇದೆಯೇ? ನೌಕರಿ ಸಿಕ್ಕದವರ ಸ್ಥಿತಿ ಈ ರೀತಿಯಾದರೆ, ನೌಕರಿ ಸಿಗದೆ ಇರುವಂತಹವರು ಸರ್ಕಾರಿ ನೌಕರಿ ಬೇಕು ಎಂದು ಹೇಳಿ ಎಲ್ಲಾ ಮರೆತು ನಗರಕ್ಕೆ ಬಂದು ಅವರಿವರ ಕಾಲನ್ನು ಹಿಡಿದುಕೊಳ್ಳುವ ದುಸ್ಥಿತಿ ಬಂದಿದೆ. ಇದು ತಪ್ಪಬೇಕು ಎಂದರೆ, ಅವನಿಗೆ ಇವತ್ತಿನ ದಿವಸ ಹೊಸ ರೀತಿಯ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈ ವಿಷಯದ ಬಗ್ಗೆ ಸುಮ್ಮನೆ ಏತಕ್ಕೆ ಟೈಂ ವೇಸ್ಟ್ ಮಾಡಬೇಕು? ಅವರ ದೃಷ್ಟಿಯಲ್ಲಿ ಶಿಕ್ಷಣ ಹೇಗೆ ಇರಬೇಕು ಎಂಬುದು, ಸ್ವಾಭಾವಿಕವಾಗಿ, ಅವರ ಒಂದು ಪಕ್ಷದ ಐಡಾಲಾಜಿ ಪ್ರಕಾರ ವೆಸ್ಟ್ ಬೆಂಗಾಲ್ ಆಗಲಿ, ಕೇರಳವಾಗಲಿ, ಆ ಕಡೆ ಮಾಡಿರುತ್ತಾರೆ. ಆ ಕಡೆ ನಾವು ಹೋಗಿ ಸಿಲಬಸ್ ಯಾವ ರೀತಿ ಇದೆ ಎಂದು ನೋಡಿಕೊಂಡು ಬರೋಣ. ಈಗ ರಾಜಸ್ಥಾನ್, ಮಹಾರಾಷ್ಟ್ರ ಈ ಭಾಗದಲ್ಲಿಯೂ ಮತ್ತು ಉತ್ತರ ಪ್ರದೇಶದಲ್ಲಿಯೂ ಸಹ ಇವರ ಸರ್ಕಾರವೆ ಇದೆ. ಅಲ್ಲಿಯ ಸಿಲಬಸ್ ಪ್ರಾಥಮಿಕ ಶಿಕ್ಷಣದಲ್ಲಿ ಯಾವ ರೀತಿ ಇದೆ, ಅಂದರೆ ತಮ್ಮ ಕಾಲ ಮೇಲೆ ತಾವು ನಿಲ್ಲುವಂತಹ, ಪ್ರವೃತ್ತಿಯನ್ನು ಬೆಳೆಸುವಂತಹ ಸಿಲಬಸ್‌ಗಳು ಏನಿವೆ ಅವೆಲ್ಲವನ್ನೂ ನೋಡಿಕೊಂಡು ಬಂದು, ಕ್ರೋಢೀಕರಿಸಿ ನಾವು ಹೊಸ ಸಿಲಬಸ್ ತಯಾರು ಮಾಡಬಹುದು. ಏಕೆಂದರೆ, ಎಲ್ಲೆಲ್ಲಿ ಅವರು ಅಧಿಕಾರದಲ್ಲಿ ಇದ್ದಾರೆ, ಅಲ್ಲಿ ಅವರು ಶಿಕ್ಷಣ ಕ್ಷೇತ್ರದಲ್ಲಿ ಅಥವಾ ನಿರುದ್ಯೋಗಿಗಳಿಗೆ ಕೆಲಸವನ್ನು ಕೊಡಿಸುವಂತಹ ಒಂದು ಏರ್ಪಾಡು ಏನು ಮಾಡಿದ್ದಾರೆ ಅದನ್ನು ನಾವು ನೋಡಿಕೊಂಡು ಬಂದು ಇಲ್ಲಿ ಇಂಪ್ಲಿಮೆಂಟ್ ಮಾಡುವುದಕ್ಕೆ ಏನೂ ತೊಂದರೆ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ನಾವು ಆ ದಿಕ್ಕಿನಲ್ಲೇ ಕೆಲಸ ಮಾಡುತ್ತಿದ್ದೇವೆ. ಇವತ್ತು ಸನ್ಮಾನ್ಯ ಖರ್ಗೆ ಅವರು ಹೇಳಿದಂತೆ, ಅವರು ಕೊಟ್ಟಂತಹ ಶಿಕ್ಷಣದ ರೀತಿಯಿಂದ ಇವತ್ತಿನ ದಿವಸ ನಿರುದ್ಯೋಗ ಜಾಸ್ತಿಯಾಗಿ, ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಆದಕಾರಣ ಶೇ 60 ಭಾಗ ಹಣವನ್ನು ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಖರ್ಚು ಮಾಡಿ, ಯಾರೇ ಆಗಲಿ, ಆತ ವಿದ್ಯಾವಂತನಿರಬಹುದು, ವಿದ್ಯಾವಂತನಲ್ಲದೆ ಇರಬಹುದು, ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವ ಬದಲು ತನ್ನ ಕಾಲ ಮೇಲೆ ತಾನು ನಿಲ್ಲುವ ಒಂದು ಹೊಸ ಚಿಂತನೆ ಪ್ರಾರಂಭವಾಗಿದೆ. ಸನ್ಮಾನ್ಯ ಖರ್ಗೆಯವರು ಹೇಳಿದಂತೆ ಅದರ ಅನುಭವದ ಆಧಾರದ ಮೇಲೆ ಮುಂದೆ ಬದಲಾವಣೆಯಾಗುತ್ತದೆ. ಅವಶ್ಯವಿದ್ದರೆ ಇದನ್ನು ನಾವು, ನೀವು ಎಲ್ಲರೂ ಸೇರಿ ಮಾಡೋಣ.

ಅಧ್ಯಕ್ಷರು :- ಸನ್ಮಾನ್ಯ ಶ್ರೀರಾಮರೆಡ್ಡಿಯವರೆ, ತಮ್ಮ ಸಹಕಾರ ಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಇನ್ನು ಈ ರಾಜ್ಯದ ಆದಾಯದ ಪ್ರಶ್ನೆ. ಈ ರಾಜ್ಯದ ಒಟ್ಟು ಆದಾಯವೆಷ್ಟು? ಈ ಆದಾಯದಲ್ಲಿ ಎಷ್ಟೆಷ್ಟು ಭಾಗ ಯಾವುದ್ಯಾವುದಕ್ಕೆ ಖರ್ಚಾಗುತ್ತದೆ? ಎಷ್ಟು ಕೊರತೆ ಬೀಳುತ್ತದೆ? ಆದರೆ ನಾನು ನೋಡಿದಂತೆ, ನನ್ನ ತಿಳುವಳಿಕೆಗೆ ಒಳಪಟ್ಟಂತೆ ಈ ಆದಾಯದಲ್ಲಿ ಅತೀ ಹೆಚ್ಚಿನ ಭಾಗ ಯಾರಿಗೆ ಹೋಗುತ್ತಿದೆ, ನೌಕರರ ಸಂಬಳಕ್ಕೆ ಸರ್ವೀಸ್ ಲೆಕ್ಕದಲ್ಲಿ ಇವತ್ತು

ಹೋಗುತ್ತಿದೆ. ನೌಕರರ ಸಾರಿಗೆ ಸಂಬಳ, ಸಾರಿಗೆ ಪೆನ್ಶನ್ ಇದಕ್ಕೆಲ್ಲಾ ಹೋಗುತ್ತಿದೆ. ನೌಕರರ ಸಾರಿಗೆ ಸಂಬಳ, ಸಾರಿಗೆ ಪೆನ್ಸನ್ ಇದಕ್ಕೆಲ್ಲಾ ಹೋಗುತ್ತಿದೆ ಇದರಲ್ಲಿ ಹೆಚ್ಚಿನ ಹಣ. ಇವತ್ತು ನಮ್ಮ ರಾಜ್ಯದಲ್ಲಿ ಆಡಳಿತ ಯಂತ್ರ ನಡೆಯಬೇಕಾದರೆ ಎಲ್ಲಾ ರೀತಿಯಾದ ವ್ಯವಸ್ಥೆ ಇರಬೇಕು. ಅಧಿಕಾರಿಗಳು ಇರಬೇಕು. ನಿಜ. ಆದರೆ ನಮ್ಮ ಒಟ್ಟು ಆದಾಯದಲ್ಲಿ ಶೇಕಡ ಎಷ್ಟು ಭಾಗ ಅವರಿಗೆ ಹೋಗುತ್ತಿದೆ ಎಂದು ಹೇಳುವುದನ್ನು ನಾವು ಲೆಕ್ಕಹಾಕಿದರೆ ಮತ್ತೆ ಶೇಕಡ ಎಷ್ಟು ಭಾಗ ಇವತ್ತು ರಾಜ್ಯದ ಅಭಿವೃದ್ಧಿ ಮತ್ತು ಜನಸಾಮಾನ್ಯರ ಅಭಿವೃದ್ಧಿಗೆ ಹೋಗುತ್ತಿದೆ ಎನ್ನುವುದನ್ನು ಲೆಕ್ಕ ಹಾಕಿದರೆ ಬಹಳ ಆತಂಕಕಾರಿ ಪರಿಸ್ಥಿತಿಯಲ್ಲಿದ್ದೇವೆ. ಈ ಆತಂಕಕಾರಿ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಈ ಹೆಚ್ಚಿನ ಹೊರೆಯನ್ನು ಕಡಿಮೆ ಮಾಡಲಿಕ್ಕೆ ಆ ಹೊರೆಯನ್ನು ಕಡಿಮೆ ಮಾಡಿ ಎಂದರೆ ಯಾರೋ ಗುಮಾಸ್ತನ ಕೆಲಸ ಕಡಿಮೆ ಮಾಡಿ ಎಂದಲ್ಲ ನಾನು ಹೇಳುತ್ತಿರುವುದು. ಯಾರೋ ಪ್ಯೂನ್‌ನ ಕೆಲಸವನ್ನು ಕಡಿಮೆ ಮಾಡಿ ಎಂದಲ್ಲ ಹೇಳುತ್ತಿರುವುದು. ಇವತ್ತು ಹಲವಾರು ಹುದ್ದೆಗಳು ಐ ಎ ಎಸ್ ಮತ್ತು ಐ ಪಿ ಎಸ್ ಈ ರೀತಿ ಇವೆ. ಅದಕ್ಕೆ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂದು ನೀವು ಕೊಟ್ಟಿದ್ದೀರಿ. ಇವತ್ತು ಕೆಲವು ಹುದ್ದೆಗಳ ಅವಶ್ಯಕತೆಯೇ ಇಲ್ಲ. ಡಿವಿಜನಲ್ ಕಮೀಷನರ್ ಪೋಸ್ಟ್ ಏತಕ್ಕೆ ನಮ್ಮ ರಾಜ್ಯದಲ್ಲಿ ಬೇಕು ಏನು ಅವಶ್ಯಕತೆ ಇದೆ. ಬರೀ ಪೋಸ್ಟ್‌ಮ್ಯಾನ್ ಕೆಲಸ ಮಾಡುವುದು. ಡಿ.ಸಿ.ಯಿಂದ ತಂದದ್ದನ್ನು ಸರ್ಕಾರಕ್ಕೆ ಕಳುಹಿಸುವುದು. ಎ.ಸಿ. ಪೋಸ್ಟ್‌ನಿಂದ ಏನು ಪ್ರಯೋಜನ ಇದೆ. ಇದೇ ಸೆಕ್ರೆಟೇರಿಯೇಟ್ ತೆಗೆದುಕೊಳ್ಳಿ. ಹೆಚ್ಚು ಪೋಸ್ಟ್‌ಗಳು ಅಧಿಕಾರಿಗಳು ಇದ್ದಷ್ಟು ಹೆಚ್ಚು ಕೊಕ್ಕೆಗಳನ್ನು ಹಾಕುವಂಥದ್ದು. ಒಂದೊಂದು ಬೆಂಚ್‌ಗೆ ಹೋದರೆ ಇವರು ಒಂದೊಂದು ಕೊಕ್ಕೆ ಹಾಕಿ ಕಳುಹಿಸುವಂಥದ್ದು. ಅಂದರೆ ಅಧಿಕಾರವನ್ನು ಸುಗಮವಾಗಿ ಜನತೆಯ ಪರವಾಗಿ ನಡೆಸುವುದರ ಬದಲು ಇವರನ್ನೆಲ್ಲಾ ಹೆಚ್ಚು ಮಾಡಿ ಅಭಿವೃದ್ಧಿ ಕಾರ್ಯಗಳು ಮತ್ತು ಜನಪರವಾಗಿ ಕಾರ್ಯಗಳಿಗೆ ಒಂದೊಂದು ಕೊಕ್ಕೆಯನ್ನು ಹಾಕಲಿಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಒಬ್ಬೊಬ್ಬರನ್ನು ಇಟ್ಟಿದ್ದೇವೆ. ಐ. ಎ. ಎಸ್., ಕೆ. ಎ. ಎಸ್. ಅಧಿಕಾರಿಗಳನ್ನೆಲ್ಲಾ ಇಟ್ಟಿದ್ದೇವೆ. ನಾನು ಯಾರ ಮೇಲೂ ವೈಯಕ್ತಿಕವಾದ, ದ್ವೇಷದಿಂದ ಹೇಳುತ್ತಿಲ್ಲ. ಇವತ್ತು ನಮ್ಮ ರಾಜ್ಯ ದಲ್ಲಿ ಉತ್ಪಾದನೆಯಾಗುತ್ತಿರುವ ಆದಾಯ, ಇರುವ ಆದಾಯದಲ್ಲಿ ಶೇಕಡ 90 ಭಾಗ ಯಾರಿಗೆ ಹೋಗುತ್ತಿದೆ, ಸ್ವಾಮಿ. ಅವರು ಇರುವುದು 3 ಪರ್‌ಸೆಂಟ್ ಜನಾಂಗ ಈ ರಾಜ್ಯದಲ್ಲಿ. 3 ಪರ್‌ಸೆಂಟ್‌ಗೆ 90 ಭಾಗ. ಇನ್ನು ಉಳಿದದ್ದು 97 ಪರ್‌ಸೆಂಟ್ ಜನರಿಗೆ. ಹೇಗೆ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗುತ್ತದೆ? ಇದರ ಬಗ್ಗೆ ನಮಗೆ ಯಾವುದೇ ರೀತಿಯಾದ ನಿರ್ದಿಷ್ಟವಾದ ಒಂದು ಯೋಜನೆ ಇಲ್ಲ. ಮಾರ್ಗದರ್ಶನಗಳು ಇಲ್ಲ. ಹೇಗೆ ಆಗಬೇಕು ಎಂದು ಹೇಳಿ.

ಅಧ್ಯಕ್ಷರು :- ಈಗ ಸುರೇಶ್‌ಕುಮಾರ್‌ರವರು ಒಂದು ಚೀಟಿಯನ್ನು ಕಳುಹಿಸಿದ್ದಾರೆ. ಬರೀ ಜಸ್ಟ್ ಫ್ರೆಂಡ್ಸ್ ಆಗಿರುವವರು they adhere to your advice and the trusted friends defy your advice.... ಎಂದು ಬರೆದುಕಳುಹಿಸಿದ್ದಾರೆ.

Sri. G.V. Sriramareddy:- I felt Mr. Suresh Kumar's skill. No problem in it. ಹಾಗಾಗಿ ಇವತ್ತು ಈ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಒಂದು ನಿರ್ದಿಷ್ಟವಾದ ಪ್ರಗತಿಪರವಾದಂಥ ಯೋಜನೆಯನ್ನು ಮತ್ತು ಆಯವ್ಯಯವನ್ನು ನಾವು ಸಿದ್ಧರಾಮಯ್ಯನವರಿಂದ ನಿರೀಕ್ಷೆ ಮಾಡಿದ್ದೆವು. ಏಕೆಂದರೆ ಸಿದ್ಧರಾಮಯ್ಯನವರ ಬಗ್ಗೆ ಪ್ರತ್ಯೇಕವಾದ ಅಭಿಪ್ರಾಯ ಇದೆ. ಪ್ರಾಮಾಣಿಕವಾದ ಕಾಳಜಿ ಇರುವ ಒಬ್ಬರು, ಜನರ ಬಗ್ಗೆ ಕಾಳಜಿ ಇರುವವರು, ಅವರು ಏಕೆ ಇಂಥ

ಗೊತ್ತು ಗುರಿ ಇಲ್ಲದೇ ಇರುವ ಬಜೆಟ್‌ನ್ನು ಮಂಡಿಸಿದರು? ಇದು ಒಂದು. ಇದು ಗೊತ್ತು ಗುರಿಯಿಲ್ಲದೇ ಇರುವ ಬಜೆಟ್ ಈ ರಾಜ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೆ. ಎರಡನೇ, ಅಂಶ ನಾನು ಆಗಲೇ ಹೇಳಿದ್ದೇನೆ, ಮತ್ತೊಮ್ಮೆ ರಿಪೀಟ್ ಮಾಡುತ್ತೇನೆ, 'every Political Party have its right to have a Political Budget.' ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ, ಆದರೆ No Political Party and Government have a right to dismantle the growth of the State's economy. ಅದು ಇವತ್ತು ಇಲ್ಲ ಆಗಿದೆ. ಅದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಹಾಗಾಗಿ ಈ ಬಜೆಟ್‌ನಲ್ಲಿ ಅಭಿವೃದ್ಧಿಗೆ ಬೇಕಾಗಿರುವ ಅಂಶವಾಗಲಿ, ನಿರುದ್ಯೋಗಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಬೇಕಾಗಿರುವ ಅಂಶವಾಗಲಿ, ಆರೋಗ್ಯದ ಸೌಲಭ್ಯಗಳನ್ನು ಸಾಮಾನ್ಯ ಜನರಿಗೆ ವಿಸ್ತರಿಸುವ ಪ್ರಶ್ನೆಯಾಗಲಿ, ಯಾವುದೂ ಇದರಲ್ಲಿ ಇಲ್ಲ. ಕೃಷಿ ಉತ್ಪಾದನೆಗಳನ್ನು ಹೆಚ್ಚು ಮಾಡಲಿಕ್ಕೆ ಪ್ರತ್ಯೇಕವಾಗಿ ಆಹಾರ ಸಾಮಾಗ್ರಿಗಳನ್ನು ಉತ್ಪಾದನೆ ಮಾಡಲಿಕ್ಕೆ ಯಾವುದೇ ರೀತಿಯಾದಂಥ ಬಜೆಟ್‌ನಲ್ಲಿ ಕಾರ್ಯಕ್ರಮವಿಲ್ಲ. ಹಾಗಾಗಿ ಈ ಬಜೆಟ್‌ನ್ನು ನಾನು ವಿರೋಧಿಸಿ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :- ಮಾನ್ಯ ಅಧ್ಯಕ್ಷರೇ, ನನ್ನ ಹೆಸರನ್ನು ಕರೆದದ್ದಕ್ಕಾಗಿ ತಮಗೆ ವಂದಿಸಿ ನಾನು ಶ್ರೀರಾಮರೆಡ್ಡಿ ಯವರಲ್ಲಿ ಅರ್ಧ ಭಾಗ ಮಾತ್ರ ಮಾತನಾಡಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ಎಲ್ಲರಿಗಿಂತ ಹೆಚ್ಚು ಅಭಿಮಾನ ಇಟ್ಟುಕೊಂಡಿದ್ದವರಲ್ಲಿ ನಾನೂ ಒಬ್ಬ, ಏಕೆಂದರೆ ಗ್ರಾಮೀಣ ಪ್ರದೇಶದಿಂದ ಬಂದು ಅಲ್ಲಿಯ ಜನಗಳ ಕಷ್ಟಸುಖ ಅರಿತುಕೊಂಡು ಆ ಜನಕ್ಕೇನಾದರೂ ಅಧಿಕಾರ ಬಂದಾಗ ಮಾಡುತ್ತಾರೆ ಎಂದು ಹೇಳಿ. ಅವರೇ ತಯಾರು ಮಾಡಿರುವ ವರದಿಗಳನ್ನು ಓದುತ್ತಾ ಹೋದರೆ ಅವರು ಕೂಡ ಈ ವಿಷವರ್ತುಲದಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟರೇನೊ ಅಧಿಕಾರಿಗಳ ಮಧ್ಯೆ ಮತ್ತೆ ಪುಢಾರಿಗಳ ಮಧ್ಯೆ ಸಿಕ್ಕಿಹಾಕಿಕೊಂಡರೇನೊ ಎನ್ನುವ ಭಾವನೆ ಬರುತ್ತದೆ. ಏಕೆಂದರೆ ಈ ರಾಜ್ಯದ ಅಂಕಿಅಂಶಗಳನ್ನು ಓದಿ ಬಜೆಟ್ ಮಾಡಿದ್ದರೆ ಕಳೆದ ವರ್ಷ ಏನೂ ಉತ್ಪಾದನೆಯಾಗಬೇಕಾಗಿತ್ತು ಹತ್ತು ಲಕ್ಷ ಟನ್ ದವಸಧಾನ್ಯಗಳು ಕೊರತೆಯಾಗಿದೆ. ಕಡಿಮೆ ಪ್ರೊಡ್ಯೂಸ್ ಆಗಿದೆ. ಆ ಹತ್ತು ಲಕ್ಷ ಟನ್ ದವಸ ಕಡಿಮೆಯಾಗುವುದರ ಜೊತೆಗೆ ಅಗ್ರಿಕಲ್ಚರ್ ಪ್ರೊಡ್ಯೂಸಸ್ ಬೆಲೆ ಕೂಡ ಕಡಿಮೆಯಾಗಿದೆ ಈ ರಾಜ್ಯದಲ್ಲಿ. ಒಂದು ಕಡೆ ಉತ್ಪಾದನೆಯೇ ಕಡಿಮೆಯಾಗಿದೆ. ಇನ್ನೊಂದು ಕಡೆ ಅದರ ಧಾರಣೆ ಕೊರತೆಯಾಗಿದೆ. ಆ ಉತ್ಪಾದನೆಯನ್ನು ನಂಬಿಕೊಂಡಿದ್ದವನ ಬಗ್ಗೆ ತಾವೇನಾದರೂ ಕಾರ್ಯಕ್ರಮ ಹಾಕಿದ್ದೀರಾ? ಆ ಭಾಗದ ಜನರು ಏನು ಅದನ್ನು ನಂಬಿಕೊಂಡು ಒಂದು ವರ್ಷ ಜೀವನ ಮಾಡುತ್ತೇನೆಂದು ಭಾವಿಸಿದ್ದರು, ಏನಾದರೂ ಅವರ ಬಗ್ಗೆ ಪರಿಹಾರ ಯೋಚನೆ ಮಾಡಿದ್ದೀರಾ ಎಂದರೆ ತಮ್ಮ ಇಡೀ ಭಾಷಣದಲ್ಲಿ ಮತ್ತೆ ತಮ್ಮ ಇಡೀ ಪುಸ್ತಕದಲ್ಲಿ ಆ ಬಗ್ಗೆ ಯಾವುದೇ ಪ್ರಸ್ತಾಪವೂ ಇಲ್ಲ. ಮಾನ್ಯ ಸಿದ್ಧರಾಮಯ್ಯನವರು 3-4ನೇ ಸಲ ಆಯವ್ಯಯವನ್ನು ಮಂಡಿಸುತ್ತಿದ್ದಾರೆ. ನಾನು ಎರಡು-ಮೂರು ವಿಷಯದ ಬಗ್ಗೆ ಪ್ರಸ್ತಾಪಮಾಡಲಿಕ್ಕೆ ಬಯಸುತ್ತೇನೆ. ಒಂದು, ತಾವೇನು ಮೌಲ್ಯವರ್ಧಿತ ಟ್ಯಾಕ್ಸ್ ಮಾಡಬೇಕು ಎಂದು ಹೇಳಿ ಸ್ಲ್ಯಾಬ್‌ನ್ನು ಕಡಿಮೆ ಮಾಡುತ್ತೇವೆ ಎಂದು ಹೊರಟಿದ್ದೀರಿ. ಆ ಕ್ಷಣ ಸ್ವಲ್ಪ ನೋಡಬೇಕಾಗಿತ್ತು. 8 ಪರ್‌ಸೆಂಟ್ ಟ್ಯಾಕ್ಸ್‌ನ್ನು ಯಾವ ಐಟಂ ಮೇಲೆ ಹಾಕಿದಿರಿ, 12 ಪರ್ಸೆಂಟ್ ಟ್ಯಾಕ್ಸ್‌ನು ಯಾವ ಐಟಂ ಮೇಲೆ ಹಾಕಿದ್ದಿರಿ ಎಂದು. 8 ಇರುವುದನ್ನು 2 ಸೇರಿಸಿ 10 ಮಾಡುತ್ತೇನೆ, 12 ಇರುವುದನ್ನು 2 ಕಳೆದು 10 ಮಾಡುತ್ತೇನೆ ಎಂದು ಬಿಟ್ಟರೆ ಅದು ಆಯವ್ಯಯವಾಗುವುದಿಲ್ಲ. ಈ ರಾಜ್ಯದಲ್ಲಿ

ಜನರು ನಿಮ್ಮನ್ನು ನಂಬಿಕೊಂಡು ಬದುಕುವುದು ಕಷ್ಟವಾಗಿಬಿಡುತ್ತದೆ. ಯಾವ ಯಾವ ಐಟಂನಲ್ಲಿ 8 ಪರ್‌ಸೆಂಟ್ ಎಂದು ಇಟ್ಟಿದ್ದಿರಿ, ನಿಮಗೆ ಅದು ಪಾಪ್ಯುಲರ್ ಪ್ರೋಗ್ರಾಮ್ ಆಗಿತ್ತು. ಅದು ಒಬ್ಬ ಸಾಧಾರಣ ಮನುಷ್ಯನಿಗೆ ಅನುಕೂಲವಾಗುವ ಐಟಂ ಆಗಿತ್ತು. ಅದು ಈ ದೇಶದಲ್ಲಿ ಕೊಳ್ಳುವುದಕ್ಕೆ ಶಕ್ತಿ ಇಲ್ಲದವನಿಗೆ ಸಹಾಯಕಾರಿಯಾಗಬೇಕಾದ ವಸ್ತುವಾಗಿತ್ತು. ಎಲ್ಲದನ್ನೂ ಸಾರಾಸಗಟು 10 ಪರ್‌ಸೆಂಟ್ ಎಂದು ಮಾಡಿಬಿಟ್ಟಿರಿ . ಯಾವ ಯಾವ ಐಟಂಗೆ 12 ಪರ್‌ಸೆಂಟ್ ಎಂದು ಇಟ್ಟಿದ್ದಿರಿ, ಅದನ್ನು ಕೊಡಬಹುದಾಗಿತ್ತು. ಯಾರೊ ಹೆಲಿಕಾಪ್ಟರ್‌ಗೆ ಕೊಡಬಹುದಾಗಿತ್ತು. ಯಾರೋ ಲಿಫ್ಟ್‌ಗೆ ಕೊಡಬಹುದಾಗಿತ್ತು. ಯಾರೋ ಸಿಗರೇಟ್ ಮೇಲೆ ಫಿಲ್ಟರ್‌ಗೆ ಕೊಡಬಹುದಾಗಿತ್ತು. ಯಾರೊ ಗ್ಯಾಂಬ್ಲಿಂಗ್ ಅಕ್ಟಿವಿಟೀಸ್ ಮಾಡುವ ಕಡೆ ಕೊಡಬಹುದಾಗಿತ್ತು. ಯಾರೋ ಇನ್ನೊಂದನ್ನು ಮಾಡುವ ಕಡೆ ಕೊಡಬಹುದಾಗಿತ್ತು. ಜೂಜಾಡುವ ಕಡೆ ಕೊಡಬಹುದಾಗಿತ್ತು. ತಾವು ಏನು ಮಾಡಿದ್ದೀರಿ, 12 ರಿಂದ 10 ಮಾಡುವ ಕಡೆ ಜೂಜಾಡುವವರಿಗೆ ಕಡಿಮೆ ಮಾಡಿದ್ದೀರಿ. ಫಿಲ್ಟರ್ ಸಿಗರೇಟ್ ಸೇದುವವರಿಗೆ ಕಡಿಮೆ ಮಾಡಿದ್ದೀರಿ 8 ರಿಂದ 10 ಮಾಡಬೇಕಾದರೆ ಏನು ಮಾಡಿದ್ದೀರಿ, ಮಾನ್ಯ ರೆಡ್ಡಿಯವರು ಹೇಳಿದ ಹಾಗೆ ಬಟ್ಟೆ, ಸೋಪು ಉಪಯೋಗಿಸುವವರಿಗೆ ಜಾಸ್ತಿ ಮಾಡಿದಿರಿ. ತಾವು ಇಲ್ಲ, 4 ಮಾಡಿದ್ದೇನೆ ಎಂದಿರಿ. ಡಿಟರ್ಜೆಂಟ್, ಶ್ಯಾಂಪುಗೆ ಕಡಿಮೆಯಾಗುತ್ತದೆ ಈ ರಾಜ್ಯದಲ್ಲಿ ಬಟ್ಟೆ ಸೋಪಿನ ರೇಟು ಜಾಸ್ತಿಯಾಗುತ್ತದೆ. ಚಪ್ಪಲಿ ಟ್ಯಾಕ್ಸ್ ಜಾಸ್ತಿಯಾಗುತ್ತದೆ. ಇನ್ನೊಂದು ಕಡೆ ಏರ್ ಕಂಡೀಷನಿಂಗ್ ರೇಟನ್ನು ತಾವು ಕಡಿಮೆ ಮಾಡುತ್ತೀರಿ. 12 - 10ಕ್ಕೆ ತರಬೇಕು ಎಂದು ಹೇಳಿ ನೀವು ಸ್ಲ್ಯಾಬ್‌ನ್ನು ಕಡಿಮೆ ಮಾಡಬೇಕು ಎಂದು ಯೋಚನೆ ಮಾಡುವುದರಲ್ಲಿ ನಮ್ಮದೇನೂ ಅಭ್ಯಂತರವಿರಲಿಲ್ಲ. 15 ಮಾಡಿ. ಕೊಡಲಿ 3 ಪರ್‌ಸೆಂಟನ್ನು ಜಾಸ್ತಿ ಈ ದೇಶದ ಬಂಡವಾಳಕ್ಕೆ ಅವರು ಕೊಡಲಿ. ಇವತ್ತು ಏರ್‌ಕಂಡೀಷನ್ ಹಾಕಿಕೊಂಡು ಓಡಾಡುವವರು. ಲಿಫ್ಟ್‌ನಲ್ಲಿ ಓಡಾಡುವವರು ಅವರೇನು ಮನೆಯಿಂದ ತಂದುಕೊಡುತ್ತಿರಲಿಲ್ಲ. ಅವರೇನು ಮನೆಯಿಂದ ತಂದು ಕೊಡುತ್ತಿರಲಿಲ್ಲ. ಇವತ್ತು ಮೊಸ್ಯಾಕ್‌ನ್ನು ಹಾಕಿಕೊಂಡು ಮನೆಯಲ್ಲಿ ಬದುಕಿರುವವರು, ಅವರೇನು ಕಷ್ಟಪಟ್ಟು ಕೊಡುತ್ತಿರಲಿಲ್ಲ. ಪಿಂಗಾಣಿ ಪಾತ್ರೆಯನ್ನು ಬಳಸುವವರು. ಯಾರ ಮೇಲೆ ಟ್ಯಾಕ್ಸ್ ತೆಗೆದಿದ್ದೀರಿ. ಪಿಂಗಾಣಿ ಪೋರ್ಸಲೀನ್‌ನ್ನು ಇಳಿಸಿದ್ದೀರಿ, ಮೊಸ್ಯಾಕ್ ಬಗ್ಗೆ ಇಳಿಸಿದ್ದೀರಿ. ಅಮೃತಶಿಲೆಯನ್ನು ಇಳಿಸಿದ್ದೀರಿ, ಫಿಲ್ಟರ್ ಸಿಗರೇಟ್ ಇಳಿಸಿದ್ದೀರಿ, ತಾವು ಏರ್‌ಕಂಡೀಷನಿಂಗ್ ರೇಟನ್ನು ಇಳಿಸಿದ್ದೀರಿ. ಲಿಫ್ಟ್ ಬಗ್ಗೆ ಇಳಿಸಿದ್ದೀರಿ. ಇದು ಪ್ರಾಮಾಣಿಕವಾದ ಬಜೆಟ್ ಎಂದು ಹೇಳಿ ನಾವು ಕೇಳಬೇಕಾಗುತ್ತದೆ. ಯಾರ ಮೇಲೆ ಜಾಸ್ತಿ ಮಾಡುತ್ತೀರಿ, ಸ್ವಲ್ಪ ತೆಗೆದುನೋಡಿ. 8 ರಿಂದ 10 ನ್ನು ತಾವು ಮಾಡುವ ಕಡೆ ಎಲ್ಲಾ ಸಾಮಾನ್ಯ ನಾಗರೀಕನಿಗೆ ಹೊರೆಯಾಗುವ ರೀತಿಯಲ್ಲಿ ಇವತ್ತು ಬಜೆಟ್‌ನ್ನು ಈ ರಾಜ್ಯಕ್ಕೆ ತಾವು ಇಟ್ಟಿದ್ದೀರಿ. ಇದನ್ನು ತಾವು ಕಡ್ಡಾಯವಾಗಿ ಪುನರ್‌ಪರಿಶೀಲನೆ ಮಾಡಲೇಬೇಕು. ಏಕೆಂದರೆ ಬಹುಶ: ಇದು ಯಾರಿಗೂ ಶೋಭೆ ತರುವ ಬಜೆಟ್ ಆಗುವುದಿಲ್ಲ. ನಾನು ಸರಳೀಕರಣೆಸುತ್ತೇನೆ. ಎನ್ನುವ ಒಂದೇ ಕಾರಣಕ್ಕೆ ಮ್ಯಾಥಮೆಟಿಕ್ಸ್‌ಗೆ ಅಥವಾ ಅರ್ಥಿಮೆಟಿಕ್ಸ್‌ಗೆ ಸ್ಟಿಕ್ ಆನ್ ಆಗಬಾರದು. ಯಾರೋ ಆಕ್ಸ್‌ಫರ್ಡ್‌ನಲ್ಲಿ ಓದಿದವರು, ಕೇಂಬ್ರಿಡ್ಜ್‌ನಲ್ಲಿ ಓದಿದವರು, ಹಾರ್ವರ್ಡ್ ಯೂನಿವರ್ಸಿಟಿಯಲ್ಲಿ ಓದಿದವರ ಬಜೆಟ್‌ನ್ನೆಲ್ಲಾ ನಾವು ಕೇಳಿದ್ದೇವೆ. ಈ ದೇಶ ಆ ಸ್ಥಿತಿಗೆ ಬರುವುದಕ್ಕೆ ಅವರೇ ಸ್ವಾಮಿ ಕಾರಣ. ರಿಸರ್ವ್ ಬ್ಯಾಂಕ್ ಹೇಳಿದಂತೆ ಯಾರೊ ನಾನು ಎಕಾನಾಮಿಸ್ಟ್ ಎಂದು ಅಡ್ವೈಸ್ ಮಾಡಿದಂತೆ ಬಜೆಟ್ ಇಟ್ಟುಕೊಂಡು ಬಂದ ಪುಣ್ಯಾತ್ಮರು ನಮ್ಮನ್ನು ಇವತ್ತು ಹಳ್ಳಿಗಾಡಿನ ಜನರನ್ನು ಭಿಕ್ಷುಕರನ್ನು ಮಾಡಿದರು. ನಮಗೇನೂ ಗತಿ

ಇಲ್ಲದಂಗೆ ಮಾಡಿದರು. ಏನು ಹತ್ತು ಜನ, ಹನ್ನೆರಡು ಜನಕ್ಕೋಸ್ಕರ ತೃಪ್ತಿ ಮಾಡಬೇಕಾಗಿತ್ತು, ಈ ಲೆಕ್ಕಾಚಾರಗಳನ್ನು ನಮಗೆಲ್ಲಾ ರೈತಪ್ರತಿನಿಧಿಗಳಿಗೆ, ದನಕಾಯುವ ಪ್ರತಿನಿಧಿಗಳಿಗೆ ಹೇಳಿಕೊಟ್ಟರು. ನಾವು ಇದೇ ಸತ್ಯ ಎಂದು ತಿಳಿದುಕೊಂಡು ಅವರಿಗೆ ಪರ ಮಾಡುತ್ತಾ, ಹೋಗುತ್ತಿದ್ದೇವೆ. ತಾವು ತೆಗೆದು ನೋಡಿ. ರಾಗಿ ಬೆಳೆ ಕುಸಿದಿದೆ. ತಾವು ಒಪ್ಪುತ್ತೀರಾ? ಈ ರಾಜ್ಯದಲ್ಲಿ ಜೋಳದ ಬೆಲೆ ಕುಸಿದಿದೆ, ತಾವು ಒಪ್ಪುತ್ತೀರಾ? ಪ್ರೊಡಕ್ಷನ್ 10 ಲಕ್ಷ ಟನ್ಸ್ ರೆಡ್ಯೂಸ್ ಆಗಿದೆ. ಏನು ನಿಮ್ಮ ಸರ್ಕಾರದ ಕಾರ್ಯಕ್ರಮ? ನಿಮ್ಮ ಸರ್ಕಾರದ್ದು ಪ್ರೋಗ್ರಾಮ್ ಏನು? ಕಳೆದ ವರ್ಷ ಕರ್ನಾಟಕದಲ್ಲಿ ನಿರೀಕ್ಷೆ ಮಾಡಿದ್ದ 10 ಲಕ್ಷ ಟನ್ ಗಿಂತ ಕಡಿಮೆ ಬೆಳೆ ಬೆಳೆದಿದ್ದಾರೆಂದರೆ how are you going to meet the target? ಇದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇದರಿಂದ ಎಷ್ಟು ಉದ್ಯೋಗ ನಷ್ಟವಾಯಿತು, ಜಾನುವಾರುಗಳ ಗತಿಯೇನು? ಜನರ ಗತಿಯೇನು? ಎಂಬ ಬಗ್ಗೆ ತಾವು ಈ ಸಭೆಯಲ್ಲಿ ಹೇಳಬೇಕು. ಎರಡನೆಯದಾಗಿ, ಪರ್ಚೇಸ್ ಪವರ್, ತಮ್ಮ ಬಜೆಟ್ ಭಾಷಣವನ್ನು ನೋಡಿದರೆ ಇವತ್ತು ನಮ್ಮ ದೇಶದ ಜನರಿಗೆ ಪರ್ಚೇಸ್ ಪವರ್ ಇಲ್ಲದಂಥ ಸ್ಥಿತಿ ಇದೆ. ತಾವು ಬಜೆಟ್‌ನ್ನು ಎರಡು ಭಾಗವಾಗಿ ಮಾಡಿಕೊಳ್ಳಬೇಕು. ಒಂದು ರಾಜ್ಯಸ್ವದಿಂದ ನಿಮಗೆ ಬರಬೇಕಾದ ವರಮಾನ ಮತ್ತೊಂದು ಈ ದೇಶದ ಪ್ರಜೆಯೂ ಸಹ ಸುಭೀಕ್ಷವಾಗಿ ಬದುಕಬೇಕಾದಂಥ ಸ್ಥಿತಿಯದ್ದು. ಅವನ ವರಮಾನವನ್ನು ಜಾಸ್ತಿ ಮಾಡುವುದಕ್ಕೆ, ಸುಖವಾಗಿ ಬಾಳುವುದಕ್ಕೆ, ಸದೃಢ ಆರ್ಥಿಕವಾಗಿ ಆಗುವುದಕ್ಕೆ ತಾವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? what is the assistance you are going to give to the poor farmers. ಆತನಿಗೆ ಯಾವುದರಲ್ಲಿ ರಿಯಾಯಿತಿಯನ್ನು ತೋರಿಸಿದ್ದೀರಿ? ಅವನ ಆರ್ಥಿಕ ಸ್ಥಿತಿ ಉತ್ತಮವಾಗಲು ಯಾವುದರಲ್ಲಿ ಉತ್ತೇಜನ ನೀಡುತ್ತಿದ್ದೀರಿ? ನಿಮಗೆ ಆ ಜವಾಬ್ದಾರಿ ಇಲ್ಲವೆ? ಈ ರಾಜ್ಯದಲ್ಲಿರುವ ಬಡವರಿಗೆ, ಮಧ್ಯಮ ವರ್ಗದವರಿಗೆ ಸಹಾಯ ಮಾಡತಕ್ಕ ಜವಾಬ್ದಾರಿ ತಮಗೆ ಇಲ್ಲವೆಂದು ತಾವು ಒಪ್ಪುವುದಾಗಿದ್ದರೆ ಇದು ಸಿದ್ಧರಾಮಯ್ಯನವರು ಇಟ್ಟ ಬಜೆಟ್ ಅಲ್ಲವೆಂದು ನಾನೂ ಒಪ್ಪುತ್ತೇನೆ. ನಾನು ಅನೇಕ ವರ್ಷಗಳಿಂದ ತಮ್ಮ ಒಡನಾಟದಲ್ಲಿದ್ದವನು. ತಾವು ಖಂಡಿತವಾಗಿ ಗ್ರಾಮೀಣ ಜನರ ಪರವಾಗಿದ್ದಿರಿ. ಆದರೆ ತಾವು ಈ ಬಜೆಟ್‌ನಲ್ಲಿ ಆ ವರ್ಗದವರ ಬಗ್ಗೆ ಯಾವುದೇ ಕಳಕಳಿಯನ್ನು ತೋರಿಸಿಲ್ಲ. ಹಳ್ಳಿಯ ಬದುಕನ್ನು ಹಸನುಮಾಡಲು ಯಾವುದೇ ಕಾರ್ಯಕ್ರಮಗಳಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಯಾರು ನೌಕರಿಯಲ್ಲಿರುತ್ತಾರೆ ಅವರ ಜೊತೆ ಇತರರು ಸ್ಪರ್ಧೆ ಮಾಡಿ ಬದುಕಬೇಕಾಗಿದೆ ಓದಿದವನು, ನೌಕರ ಸೇರಿಕೊಂಡಿರುವ ತಮ್ಮನ ಬಗ್ಗೆ ಅಣ್ಣನಾದವನು ನಾಚಿಕೆಯಿಂದ ಬದುಕಬೇಕಾದ ಸ್ಥಿತಿ ಬಂದಿದೆ. ಒಂದು ಕಡೆ ಹೇರಳವಾಗಿ ಸಂಬಳಗಳ ಹೆಚ್ಚಳ, ಅನುಕೂಲಗಳ ಹೆಚ್ಚಳ, ಇನ್ನೊಂದು ಕಡೆ ನಿರ್ಗತಿಕರನ್ನಾಗಿ ಮಾಡುತ್ತಿರುವ ವ್ಯವಸ್ಥೆಯನ್ನು ತಾವು ಸರಿದೂಗಿಸುತ್ತೀರೆಂದು ಭಾವಿಸಿದ್ದೆ, ಖಂಡಿತವಾಗಿ ಆ ಯಾವುದೇ ಪ್ರಯೋಗ ತಮ್ಮ ಭಾಷಣದಲ್ಲಿ ಆಗಿಲ್ಲ. ಶೆಡ್ಯುಲ್ ಐದರಲ್ಲಿ ತೆರಿಗೆ ಹಾಕುವ ಮೂಲಕ ಮಾನ್ಯ ಸಿದ್ಧರಾಮಯ್ಯನವರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿಬಿಟ್ಟಿದ್ದಾರೆ. ದಿನನಿತ್ಯ ಉಪಯೋಗಿಸತಕ್ಕ ವಸ್ತುಗಳನ್ನು ಶೆಡ್ಯೂಲ್ ಐದರಲ್ಲಿ ಹಾಕಿ ಅದಕ್ಕೆ ಒಂದು ಮಹತ್ವವಿದೆ. ಇವುಗಳನ್ನಾದರೂ ತೆರಿಗೆಯಿಂದ ಹೊರಗಿಡುವ ಸಾಮಾನ್ಯ ನೀತಿ ಇದೆ. ಯಾವುದೇ ಸರ್ಕಾರ ಬಂದರೂ ಸಹ ಶೆಡ್ಯೂಲ್ ಐದರ ಮೇಲೆ ದಿಢೀರ್ ಎಂದು ತೆರಿಗೆಯನ್ನು ಹಾಕುತ್ತಿರಲಿಲ್ಲ. ಕಾಂಗ್ರೆಸ್‌ನವರು ವೀಟ್ ಪ್ರಾಡಕ್ಟ್ ಮೇಲೆ ತೆರಿಗೆಯನ್ನು ಹಾಕಿದ್ದಾಗ ನಾವೇ ವಿರೋಧ ಮಾಡಿದ್ದೆವು. ತಮ್ಮ ಪಕ್ಷದವರೇ ಅದನ್ನು ಸಿದ್ಧಾಂತವನ್ನಾಗಿ ಮಾಡಿಕೊಂಡು ವಿರೋಧ

ಮಾಡಿದ್ದರು. ಕೇವಲ ಫ್ಲೋರ್ ಮಿಲ್‌ನವರ ಮೇಲೆ ತೆರಿಗೆಯನ್ನು ಹಾಕುತ್ತಿಲ್ಲ ಇದನ್ನು ಬಳಕೆ ಮಾಡುವ ಜನಸಾಮಾನ್ಯರ್ಯಾರಿದ್ದಾರೆ ಅವರ ಮೇಲೆ ತೆರಿಗೆ ಹಾಕಿದಂತಾಗುತ್ತದೆಂದು ವಿರೋಧ ಮಾಡಿದ್ದರು. ಆದರೆ ತಾವು ಇಂದು ಇಲ್ಲಿ ದಿಢೀರನೆ ಎರಡು ಪರ್‌ಸೆಂಟ್ ತೆರಿಗೆಯನ್ನು ಹಾಕಿದ್ದೀರಿ. ಟರ್ನೋವರ್ ಟ್ಯಾಕ್ಸ್‌ನ್ನು ರ್‍ಯಾಷನಲೈಜೇಷನ್ ಮಾಡಿದ್ದೇವೆಂದು ಹೇಳಿದ್ದೀರಿ. ಅಷ್ಟು ಕೋಟಿ ಬಂಡವಾಳವನ್ನಾಗಿ ವ್ಯಾಪಾರ ಮಾಡದಿದ್ದರೆ ಆ ಫ್ಯಾಕ್ಟರಿಯನ್ನು ಇವತ್ತು ನಡೆಸಲು ಆಗುವುದಿಲ್ಲ. ಇದರ ಬಗ್ಗೆ ನಾನು ವಿವರವಾಗಿ ಮಾತನಾಡಬಯಸುತ್ತೇನೆ. ಗೋಧಿಯನ್ನು ನಾವು ಹೊರರಾಜ್ಯಗಳಿಂದ ಕೊಂಡು ಕೊಂಡು ಬರಬೇಕು. ಆ ರೀತಿ ತರಬೇಕಾದರೆ ಬೇರೆಯವರಿಗಿಂತ 150-200 ರೂಪಾಯಿ ಜಾಸ್ತಿ ವೆಚ್ಚವಾಗುತ್ತದೆ. ಇಲ್ಲಿ ತಂದು ರವೆಯೋ, ಮೈದವನ್ನೊ ಮಾಡಿ ಮಾರಾಟ ಮಾಡಬೇಕು. ಆದ್ದರಿಂದ, ಇಲ್ಲಿ ಪ್ರೋಸೆಸಿಂಗ್ ಕಾಸ್ಟ್ ಹೆಚ್ಚಾಯಿತು. ಹೋಗಲಿ ವಿದ್ಯುತ್ತ್‌ನ್ನು ಸರಿಯಾಗಿ ಕೊಡುತ್ತೀರಾ? ಅದೂ ಇಲ್ಲ. ಇನ್‌ಸ್ಟಾಲ್ಡ್ ಕೆಪಾಸಿಟಿಯನ್ನು ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳತಕ್ಕ ಶಕ್ತಿ ನಮಗಿದೆಯೇ, ಅದೂ ಇಲ್ಲ, 30-40 ಪರ್‌ಸೆಂಟ್‌ಗಿಂತ ಹೆಚ್ಚು ಪ್ಲಾಂಟ್ಸ್ ಯುಟಿಲೈಜೇಷನ್ ಆಗುತ್ತಿಲ್ಲ, ಒಂದು ಕಡೆ ಹಾಕಿರುವ ಮೂಲ ಬಂಡವಾಳದ ಮೇಲೆ ಬಡ್ಡಿಯನ್ನು ಕೊಡಬೇಕು, ಮತ್ತೊಂದು ಕಡೆ ತೆರಿಗೆಯನ್ನು ಕೊಡಬೇಕು, ಇದನ್ನು ಬಳಕೆದಾರರ ಮೇಲೆ ಹೇರಲು ಹೋದರೆ ಏನಾಗುತ್ತದೆಂದರೆ, ಮಹಾರಾಷ್ಟ್ರದವರು, ಆಂಧ್ರದವರು, ತಮಿಳುನಾಡಿನವರು ಇಲ್ಲಿನ ಮೇಜರ್ ಕನ್‌ಸ್ಯೂಮರ್‌ಗಳಿಗೆ ಮೈದವನ್ನು ಕೊಡುತ್ತಾರೆಂದರೆ ನಮ್ಮ ರಾಜ್ಯದಲ್ಲಿ ಮೈದಾವನ್ನು ಮಾಡಿದವರ ಗತಿಯೇನು? ಈ ರಾಜ್ಯದಲ್ಲಿ ಗೋಧಿಯನ್ನು ಅರೆದು ನುಚ್ಚು ಮಾಡಿ ಮಾರುವವರ ಸ್ಥಿತಿಯೇನಾಗುತ್ತದೆ ಎಂಬ ಬಗ್ಗೆ ತಾವು ಯೋಚನೆ ಮಾಡಿದ್ದೀರಾ?

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರೂ ಬುದ್ಧಿವಂತರು. ಗೋಧಿಯ ಉತ್ಪಾನ್ನಗಳ ಮೇಲೆ ಎರಡು ಪರ್‌ಸೆಂಟ್ ತೆರಿಗೆ ಹಾಕಿದ್ದೀರಿ, ಇದರಿಂದಾಗಿ ಕ್ವಿಂಟಾಲ್‌ಗೆ ಸುಮಾರು 60 ರೂಪಾಯಿ ಜಾಸ್ತಿಯಾಗುತ್ತದೆ. ಇದರಿಂದಾಗಿ ಬಿಸ್ಕತ್ತು, ಬ್ರೆಡ್ ಮುಂತಾದವುಗಳನ್ನು ಉಪಯೋಗ ಮಾಡತಕ್ಕ ಜನಸಾಮಾನ್ಯರು, ರೋಗಿಗಳಿಗೆ ತೊಂದರೆಯಾಗುತ್ತದೆಂದು ನಾವುಗಳೆಲ್ಲರೂ ಭಾಷಣ ಮಾಡಿದ್ದೇವೆ. ಅದನ್ನು ಕಡಿಮೆ ಮಾಡಿದ್ದೇವೆಂದು ಅವರು ಹೇಳಿ ಹೆಸರನ್ನು ತೆಗೆದುಕೊಳ್ಳಬೇಕು. ನಾವುಗಳೆಲ್ಲರೂ ಚರ್ಚೆಯಲ್ಲಿ ಇದರ ಬಗ್ಗೆ ಮಾತನಾಡಿದ್ದೇವೆ. ಆದ್ದರಿಂದ ಮಾನ್ಯ ಸಿದ್ದರಾಮಯ್ಯನವರೇ ಸ್ವತ: ಎದ್ದುನಿಂತು ತಾವುಗಳು ಹೇಳಿದ್ದು ಮನವರಿಕೆಯಾಗಿದೆ, ತಾವುಗಳು ಅದರ ಕಡೆ ಗಮನಕೊಡುತ್ತಿರೋ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಲು ಅಲ್ಲಿ ಎರಡು ಪರ್‌ಸೆಂಟ್ ತೆರಿಗೆ ಹಾಕಿದ್ದೆ, ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡುವುದನ್ನು ಬಿಟ್ಟು ಬೇರೆ ವಿಚಾರದ ಬಗ್ಗೆ ಸಮಯವನ್ನು ಉಪಯೋಗ ಮಾಡಬಹುದು. ತಾವು ಇದರಲ್ಲಿ ಹಾಕಿರುವ ತೆರಿಗೆಯನ್ನು ಹಿಂದಕ್ಕೆ ಪಡೆಯದಿದ್ದರೆ ಜನರು ತಮ್ಮನ್ನು ಬಿಡುವುದಿಲ್ಲ. ತಾವು ಆ ಕೆಲಸವನ್ನು ಮಾಡುತ್ತಿರೆಂದು ವಿಶ್ವಾಸವಿದೆ. ನಾಲ್ಕು ಬಾರಿ ಬಜೆಟ್‌ನ್ನು ಮಂಡಿಸಿ ಅನುಭವವಿರುವ ಮಾನ್ಯ ಸಿದ್ದರಾಮಯ್ಯನವರು ಇದನ್ನು ವಾಪಸ್ ತೆಗೆದುಕೊಂಡಿದ್ದೇನೆಂದು ಹೇಳಿದರೆ ಬೇರೆ ವಿಚಾರದ ಬಗ್ಗೆ ಚರ್ಚೆ ಮಾಡಲು ಅನುಕೂಲವಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ :- ಮಾನ್ಯ ಹಣಕಾಸು ಸಚಿವರು ಅದನ್ನು ಹೇಳಿದರೆ ಇದರ ಬಗ್ಗೆ ನಾನು ಚರ್ಚೆಯನ್ನು ಮುಂದುವರೆಸುವುದಿಲ್ಲ, ಇಲ್ಲದಿದ್ದರೆ ಇದನ್ನು ಪೂರ್ತಿಯಾಗಿ ಹೇಳಬೇಕಾಗುತ್ತದೆ. ಇದರ

ಬಗ್ಗೆ ನಾನು ಅವರಿಗೆ ಹೆಚ್ಚು ಮನವರಿಕೆಮಾಡಿಕೊಡುವ ಉದ್ದೇಶವೇನೆಂದರೆ, ಇದರಿಂದಾಗಿ ಒಂದು ಕಡೆ ಬಳಕೆದಾರರಿಗೆ ತೊಂದರೆಯಾಗುತ್ತದೆ, ಮತ್ತೊಂದು ಕಡೆ ಈ ಉದ್ಯಮ ಸಂಪೂರ್ಣವಾಗಿ ನಿಷ್ಕ್ರಿಯೆಯಾಗಿಬಿಡುತ್ತದೆ. ಆಂಧ್ರಪ್ರದೇಶದಲ್ಲಾಗಲಿರುವ ಪರಿಸ್ಥಿತಿಯ ಬಗ್ಗೆ ತಮಗೆ ಮಾಹಿತಿಯನ್ನು ಕಳಿಸಿ ಕೊಡುತ್ತೇನೆ. ಅಲ್ಲಿ ಇದೇ ರೀತಿ ಕೇವಲ ಒಂದು ಪರ್‌ಸೆಂಟ್ ತೆರಿಗೆಯನ್ನು ಇದರ ಮೇಲೆ ಹಾಕಿದ್ದಕ್ಕೆ 20 ಮಿಲ್‌ಗಳು ಮುಚ್ಚಿದ್ದಾರೆ. ಅವರುಗಳು ಅಲ್ಲಿನ ಮುಖ್ಯಮಂತ್ರಿಯವರಿಗೆ ಇದಕ್ಕೆ ನೀವೇ ಜವಾಬ್ದಾರರು ಎಂದು ಮನವಿ ಪತ್ರವನ್ನು ಸಹ ಕೊಟ್ಟಿದ್ದಾರೆ. ಕಳ್ಳಲೆಕ್ಕದಲ್ಲಿ ವ್ಯಾಪಾರ ಮಾಡುವುದನ್ನು ತಪ್ಪಿಸಬೇಕಾಗಿದ್ದರೆ, ದಯಮಾಡಿ ಕನಿಷ್ಟ ಪಕ್ಷ ಈ ಗೋಧಿ ನುಚ್ಚು ಮಾಡಿ ಮಾರುವವರಾದರು ಸಾಚಾ ವ್ಯವಹಾರ ಮಾಡಬೇಕು ಎನ್ನತಕ್ಕ ಭಾವನೆ ತಮಗೆ ಇದ್ದರೆ ಈ ತೆರಿಗೆಯನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆಡಳಿತ ವೆಚ್ಚದಲ್ಲಿ ಕಡಿಮೆ ಮಾಡುತ್ತೇವೆಂದು ಹೋದಸಲದ ಭಾಷಣದಲ್ಲೂ ಮಾತನಾಡಿದ್ದಿರಿ ಈ ಸಲದ ಭಾಷಣದಲ್ಲೂ ಮಾತನಾಡಿದ್ದೀರಿ. ಈ ಅವಧಿಯಲ್ಲಿ ಅಂಥ ಯಾವುದೇ ಕಾರ್ಯಕ್ರಮ ಆಚರಣೆಗೆ ಬಂದಿದ್ದನ್ನು ನಾವು ನೋಡಲಿಲ್ಲ. ಒಂದು ಪರ್‌ಸೆಂಟ್ ಸಹ ವೆಚ್ಚವನ್ನು ಕಡಿಮೆ ಮಾಡಿದ್ದರ ಬಗ್ಗೆ ಸರ್ಕಾರದಲ್ಲಿ ಯಾವುದೇ ದಾಖಲೆಗಳಿಲ್ಲ. ಅದಕ್ಕೆ ಬದಲಾಗಿ ಏಳು ಹೊಸ ಜಿಲ್ಲೆ ಮಾಡಿದ್ದೀರಿ, ಆ ರೀತಿ ಮಾಡುವ ಮೂಲಕ ಜನರ ಮನೆಬಾಗಿಲಿಗೆ ಆಡಳಿತವನ್ನು ತೆಗೆದುಕೊಂಡು ಹೋಗುತ್ತೇವೆಂದಿದ್ದೀರಿ. ಯಾರಿಗೆ ಬೇಕಾಗಿತ್ತು 7 ಜಿಲ್ಲೆ, ಮಾನ್ಯ ಸಿದ್ಧರಾಮಯ್ಯನವರ ಆತ್ಮಸಾಕ್ಷಿಗೆ ಇದು ಒಪ್ಪುತ್ತದೆಯೇ ಎಂದು ಕೇಳಬಯಸುತ್ತೇನೆ. ಇದರಿಂದ ಏನು ಪ್ರಯೋಜನವಾಯಿತು?

ಶ್ರೀ ಯು. ಆರ್. ಸಭಾಪತಿ:- ಹೊಸದಾಗಿ ಜಿಲ್ಲೆಯನ್ನು ಪಡೆದುಕೊಂಡವರಿಗೆ ಆ ಪರಿಸ್ಥಿತಿ ಬಂದಿದೆ. ಹೊಸ ಜಿಲ್ಲೆ ಮಾಡಿ ಹಣವನ್ನು ಕೊಡದೆ, ಜಿಲ್ಲಾಧಿಕಾರಿಯವರನ್ನು ನೇಮಕ ಮಾಡದೆ ಇದ್ದರೆ ಆ ಜಿಲ್ಲೆಗಳು ಏಕೆ ಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ :- ಒಂದು ಕಡೆ ಹೆಚ್ಚುವರಿ ಜಿಲ್ಲೆಗಳನ್ನು ಮಾಡಿ, ಒಂದು ಕಡೆ ಜಿಲ್ಲಾಪಂಚಾಯಿತಿಗಳನ್ನು ಮಾಡಿದ್ದೇವೆಂದು ಹೇಳಿ, ಮತ್ತೊಂದು ಕಡೆ 40-45 ಜನ ಮಂತ್ರಿಗಳನ್ನು ಇಟ್ಟುಕೊಂಡು ವಾರಕ್ಕೆ ಒಂದೆರಡು ಕಡತಗಳು ಬರುವ ವ್ಯವಸ್ಥೆ ಮಾಡಿಕೊಂಡು, ಇಷ್ಟೆಲ್ಲಾ ಆಡಳಿತ ನಾವು ಮಾಡಿಸಿದ್ದೇವೆಂದು ಹೇಳಿ ನಮಗಿವತ್ತು ವರಮಾನ ಕಡಿಮೆಯಾಗಿದೆ, ರಾಜಸ್ವದಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಮಟ್ಟದಲ್ಲಿ ಆದಾಯ ಬಂದಿಲ್ಲವೆಂದು ಭಾಷಣ ಮಾಡುವ ಮಟ್ಟದಲ್ಲಿ ನಾವಿದ್ದೆವೆಯೇ? ಒಂದೊಂದು ತಾಲ್ಲೂಕಿಗೆ ಒಂದೊಂದು ಜಿಲ್ಲೆ ಕೊಡಿ, ನಾವೂ ಸಂತೋಷ ಪಡುತ್ತೇವೆ. ಅಲ್ಲೊಬ್ಬರು ಡಿ.ಸಿ, ಎಸ್.ಪಿ. ಇದ್ದಾರೆಂದು ನಮಗೂ ಸಂತೋಷಕೊಡುತ್ತದೆ. ಈ ರಾಜ್ಯವಿರುವ ಸ್ಥಿತಿಯಲ್ಲಿ ಆ ಜಿಲ್ಲೆಗಳನ್ನು ಮಾಡುವ ಅಗತ್ಯವಿತ್ತೇ ಎಂದು ಚಿಂತನೆ ಮಾಡಬೇಕಿತ್ತು. ಇದನ್ನು ಎಮೋಷನಲ್ ಇಶ್ಯೂವಾಗಿ ತೆಗೆದುಕೊಳ್ಳಲು ನಾವು ತಯಾರಾಗಿಲ್ಲ. ರೆವಿನ್ಯೂ ಡಿ.ಸಿ.ಗಳಿಗೆ ಎಕ್ಸೈಜ್ ಮೇಲೆ ಅಧಿಕಾರ ಕೊಡುವುದಾಗಿ ನಿನ್ನೆ ತಾವು ಹೇಳಿದ್ದೀರಿ. ಈ ರೀತಿ ಆಲೋಚನೆ ಇದ್ದವರು ಎಕ್ಸೈಜ್ ಡಿ.ಸಿ. ಪೋಸ್ಟ್‌ನ್ನೇಕೆ ಮೊದಲೆ ರದ್ದು ಮಾಡಲಿಲ್ಲ? ಡಿ.ಸಿ.ರವರಿಗೆ ಎಕ್ಸೈಜ್ ಮೇಲೆ ಅಧಿಕಾರವನ್ನು ವಾಪಸ್ ಕೊಡುವುದಾಗಿ ಭಾಷಣ ಮಾಡುವ ತಾವು ಎಕ್ಸೈಜ್ ಡಿ.ಸಿ. ರವರ ಅಧಿಕಾರವನ್ನು ರದ್ದು ಮಾಡಿದ್ದೇವೆಂದು ಭಾಷಣದಲ್ಲಿ ಹೇಳಿದ್ದೀರಾ? ಆ ಡಿ.ಸಿ. ಯವರಿಗೇನು ಕೆಲಸ ಕೊಡುತ್ತೀರಿ? ಒಂದೊಂದು ತಾಲ್ಲೂಕಿಗೆ ಇಬ್ಬಿಬ್ಬರು ಅರಣ್ಯಾಧಿಕಾರಿಯವರ ಹುದ್ದೆಯನ್ನು ನಿರ್ಮಾಣ ಮಾಡಿದಿರಿ.

ಸೋಶಿಯಲ್ ಫಾರೆಸ್ಟ್‌ಗೊಬ್ಬರು, ಟೆರಿಟೋರಿಯಲ್ ಫಾರೆಸ್ಟ್‌ಗೆ ಒಬ್ಬರನ್ನು ನಿರ್ಮಾಣ ಮಾಡಿದಿರಿ. ಅವರ ಸ್ವಂತ ವರಮಾನ ಕಡಿಮೆಯಾಗಿದೆಯೆಂದು ಅವರು ಇರುವ ಮರಗಳನ್ನೆಲ್ಲ ಕಡಿಸಿಕೊಂಡು ಕುಳಿತಿದ್ದಾರೆ. ಅವರಿಗೇನು ಕೆಲಸವಿದೆ? ತಾವು ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡು ಹೋಗಿ, ಅವರ ವರಮಾನವನ್ನು ಜಾಸ್ತಿ ಮಾಡುವುದಕ್ಕಾಗಿ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು? ಸಿಂಪ್ಲಿಫಿಕೇಷನ್ ಆಫ್ ಟ್ಯಾಕ್ಸ್ ರಿಡಕ್ಷನ್ ಆಫ್ ಸ್ಲ್ಯಾಬ್ಸ್ ಎಂದು ಏನು ಇಟ್ಟುಕೊಂಡಿದ್ದೀರಿ ಇದರ ಬಗ್ಗೆ ದಯಮಾಡಿ ಮತ್ತೆ ಯೋಚನೆ ಮಾಡಿ. ಎಂಟನ್ನು ಹತ್ತು ಮಾಡುವ ಗಣಿತಕ್ಕೆ ಸ್ಟಿಕ್ ಆನ್ ಆಗುವುದು ಬೇಡ. ದೊಡ್ಡ ಮನಸ್ಸು ಮಾಡಿ ಎಂಟನ್ನು ನಾಲ್ಕನ್ನಾಗಿ ಮಾಡಿ. 12 ಇರುವುದನ್ನು 15 ಮಾಡಿ, ಒಂದು ಸ್ಲ್ಯಾಬ್ ಕಡಿಮೆಯಾಗಿ ಬಿಡುತ್ತದೆ. 12 ಕೊಡುತ್ತಿರುವವರು 15 ಕೊಟ್ಟರೇನು ಅಪರಾಧವಾಗುವುದಿಲ್ಲ. ತಾವು ಕೆಲವು ಜನರಿಗೆ ಭಾರಿ ರಿಯಾಯಿತಿಯನ್ನು ತೋರಿಸಿದ್ದೀರಿ. ಪ್ರಮೋಟರ್‌ಗಳು, ಬಿಲ್ಡರ್‌ಗಳಿಗೆ ಎರಡು ಲಕ್ಷದವರೆಗಿದ್ದಿದ್ದನ್ನು ಕೈಗಾರಿಕೆ ಮಾಡುವುದಕ್ಕೆ ಕೇಳುವವರಿಗೆ ಹತ್ತು ಸಾವಿರಕ್ಕೆ ಇಳಿಸಿಕೊಡುತ್ತೇವೆಂದು ಭಾಷಣ ಮಾಡುತ್ತೀರಿ. ಪ್ಲ್ಯಾಂಟ್ ಅಂಡ್ ಮೆಶಿನರಿಯನ್ನು ಲೀಸ್ ಮಾಡಿದರೆ ಎರಡು ಲಕ್ಷದವರೆಗೆ ಸ್ಟ್ಯಾಂಪ್‌ನ್ನು ತೆಗೆದುಕೊಳ್ಳಬೇಕಾಗಿದ್ದದ್ದನ್ನು ಹತ್ತು ಸಾವಿರಕ್ಕೆ ಇಳಿಸುತ್ತಿದ್ದೀರಿ. ಇದರಿಂದ ಯಾರಿಗೆ ಲಾಭ? ಇಲ್ಲಿ ಕೈಗಾರಿಕೆಗೆ ಹಣವನ್ನು ತೊಡಗಿಸುವವರು ಅದನ್ನು ಕಟ್ಟಬಹುದಾಗಿತ್ತು. ಯಾರಾದರೂ ಧಾರ್ಮಿಕದತ್ತಿ ಸಂಸ್ಥೆಗೆ ಸ್ವಲ್ಪ ಜಮೀನು ಕೊಡುತ್ತೇನೆ, ಅದಕ್ಕೆ ಸ್ಟ್ಯಾಂಪ್ ಅಂಡ್ ಡ್ಯೂಟೀಸ್‌ನಲ್ಲಿ ಸ್ವಲ್ಪ ವಿನಾಯಿತಿ ಕೊಡಿ ಎಂದರೆ ಇಲ್ಲವೆಂದು ಹೇಳುತ್ತೀರಿ. ನನ್ನದೇ ಜಮೀನನ್ನು ಆ ರೀತಿ ಚಾರಿಟಬಲ್ ಸಂಸ್ಥೆಗೆ ಕೊಡುತ್ತೇನೆಂದಾಗ ಅದಕ್ಕೆ ರಿಜಿಸ್ಟ್ರೇಷನ್ ಫೀನಲ್ಲಿ ಸ್ವಲ್ಪ ವಿನಾಯಿತಿ ಕೊಡಲು ತೊಂದರೆಯೇನಾಗುತ್ತದೆ? ರೈತರು ಅವರ ಸ್ವಂತ ಮನೆಯನ್ನು ಯಾರಿಗಾದರೂ ದಾನ ಮಾಡಬೇಕಾದರೆ ರೆಗ್ಯುಲರ್ ಸೇಲ್ ಡೀಡ್ ಪ್ರಕಾರ ರಿಜಿಸ್ಟ್ರೇಷನ್ ಮಾಡಿಸಬೇಕಾದ ತೊಂದರೆ ಇದೆ. ಯಾರಾದರೂ, ಜಮೀನನ್ನು ಬದಲಾವಣೆ ಮಾಡಿಕೊಳ್ಳಬೇಕೆಂದರೆ ರೆಗ್ಯುಲರ್ ಸ್ಟ್ಯಾಂಪ್ ಡ್ಯೂಟಿಯನ್ನು ಕೊಡಬೇಕಾಗಿದೆ: ರೈತರ ಮಗನಾದ ತಾವು ಈ ಕಡೆ ಏಕೆ ಗಮನಹರಿಸುತ್ತಿಲ್ಲ ಎಂಬುದು ನನಗೆ ಅರ್ಥವಾಗಬೇಕು. ಅವರು ಜಮೀನನ್ನು ಬದಲಾವಣೆ ಮಾಡಿಕೊಳ್ಳುತ್ತೇವೆಂದರೆ ರಿಯಾಯಿತಿ ದರದಲ್ಲಿ ನೋಂದಣಿ ಮಾಡಿಸಿಕೊಡಲು ಆಗುವುದಿಲ್ಲವೆ? ನಾನು ನನ್ನ ತಮ್ಮನ ಹೆಸರಿಗೆ ದಾನ ಬರೆಯುತ್ತೇನೆಂದರೆ ಆ ಸ್ಟ್ಯಾಂಪ್ ಡ್ಯೂಟೀಸ್‌ನಿಂದ ವಿನಾಯಿತಿ ಕೊಡಲು ಆಗುತ್ತಿರಲಿಲ್ಲವೆ? ತಮಗೆ ಬೆಂಗಳೂರು ನಗರ ಮಾತ್ರ ಕಾಣುತ್ತದೆ, ಗ್ರಾಮೀಣ ಜನರಾದ ನಾವ್ಯಾರು ಕಾಣುವುದಿಲ್ಲ. ಅಧ್ಯಕ್ಷರೆ, ಇದರ ಜೊತೆಗೆ, ಬೆಂಗಳೂರು ನಗರಕ್ಕೆ ಸೆಸ್ ಹಾಕಿಬಿಟ್ಟು, ಮೆಟ್ರೋಪಾಲಿಟನ್ ಏರಿಯಾಕ್ಕೆ ಅದರ ಡೆವಲಪ್‌ಮೆಂಟ್‌ಗೆ ಹೆಲ್ಪ್ ಮಾಡುತ್ತೇವೆ, ಇದನ್ನು ರಿಲ್ಯಾಕ್ಸ್ ಮಾಡುತ್ತೇವೆ ಎಂದು ಒಂದು ಕಡೆ ಹೇಳಿ, ಇಡೀ ರಾಜ್ಯಕ್ಕೆ ವಿಸ್ತಾರ ಮಾಡುತ್ತೇವೆಂದು ಒಂದು ಕಡೆ ಹೇಳಿದ್ದೀರಿ. ಅದರಲ್ಲಿ ಕನ್‌ಸೇಸನ್ ಯಾರಿಗೆ ಕೊಟ್ಟಿದ್ದೀರಿ? ಇಸ್ಪೀಟ್, ರೇಸ್ ಆಡುವವರು ಸೆಸ್‌ಕೊಡಲಿ, ಕನ್ಸ್ಯೂಮರ್ಸ್ ಮೇಲೆ ಸೆಸ್ ಅನ್ನು ಉಳಿಸುತ್ತಿದ್ದೀರಿ, ಜೂಜು ಆಡುವವರಿಗೆ ರಿಲ್ಯಾಕ್ಸ್ ಮಾಡುತ್ತಿದ್ದೀರಾ? ಏನು ಜೂಜುಕೋರರು ಈ ಸರ್ಕಾರವನ್ನು ನಡೆಸುತ್ತಿದ್ದಾರಾ? ಕರ್ನಾಟಕದಲ್ಲಿ ಅವರು ಇಷ್ಟೊಂದು ಪ್ರಭಾವಿಗಳಾಗಿ ಬಿಟ್ಟರಾ? ಟ್ಯಾಕ್ಸ್ ತೆಗೆಸಿಕೊಂಡು ರಿಬೆಟ್ ಮಾಡಿಕೊಂಡು ಅವರು ಇದ್ದಾರೆ. ಎರಡನೆಯದು ನೋಡಿ, ನೀವು ಕೇಕ್ಸ್ ಮೇಲೆ ಟ್ಯಾಕ್ಸ್ ಕಡಿಮೆ ಮಾಡುತ್ತೀರಿ, ಬಿಸ್ಕೆಟ್ ಮೇಲೆ ಜಾಸ್ತಿ ಮಾಡುತ್ತೀರಿ, ಇದಕ್ಕೆ Rationalisation ಎಂದು ಕರೆಯುತ್ತೇವೆ. ಸಿಗರೇಟ್ ಮೇಲೆ ಕಡಿಮೆ

ಮಾಡಿ, ಡೀಸಲ್ ಎಂಜಿನ್ ಮೇಲೆ ಜಾಸ್ತಿ ಮಾಡುತ್ತೀರಿ. ಸನ್ಮಾನ್ಯ ಅಧ್ಯಕ್ಷರೆ ನಿನ್ನೆಯೂ ಕೂಡ ಇದರ ಬಗ್ಗೆ ಮಾನ್ಯ ಸಚಿವರಿಗೆ ವಿವರಿಸಿ ಹೇಳಿದ್ದೇನೆ, ಡೀಸಲ್ ಎಂಜಿನ್ 10 ಹೆಚ್.ಪಿ. ಗಿಂತಲೂ ಕಡಿಮೆ ಬಳಸಿದರೆ ಅದಕ್ಕೆ ಔಟ್‌ಪುಟ್ ಇರುವುದಿಲ್ಲ. ಇನ್ನು ಸಬ್- ಮರ್ಸಿಬಲ್ ಪಂಪ್ ಏನಾದರೂ ಒಳಕ್ಕೆ ಬಿಟ್ಟು, ನಾನೇನಾದರೂ 5, 6, 7 ಹೆಚ್.ಪಿ ಬಳಸಿದರೆ, ಸ್ವಲ್ಪ ನೀರು ಆಚೆ ಹಾಕುತ್ತದೆ. ಇವತ್ತು ಒಂದು ಡೀಸಲ್ ಎಂಜಿನ್ ಅನ್ನು 10 ಹೆಚ್.ಪಿ. ಗಿಂತ ಕಡಿಮೆ ಹೇಗೆ ಬಳಸುತ್ತೀರಿ? ಅದಕ್ಕೆ ಏಕೆ 2 ಪರ್ಸೆಂಟ್ ಅಡೀಷನಲ್ ಟ್ಯಾಕ್ಸ್ ಹಾಕಿದ್ದೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ. ದಯಮಾಡಿ ತಾವು ಇದನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳಬೇಕು. ಇನ್ನು ನಾನು ಅಬಕಾರಿ ಬಗ್ಗೆ ಹೇಳುವುದಾದರೆ, ಒಂದು ರೂಪಾಯಿ ಬಿಯರ್ ಮೇಲೆ ಜಾಸ್ತಿ ಮಾಡಿದ್ದರೆ, ಬೆಂಗಳೂರಿನಲ್ಲಿ ನಿನ್ನೆಯಿಂದಲೇ 5 ರೂಪಾಯಿ ಜಾಸ್ತಿ ಆಗಿದೆ. ಕಡಿಮೆ ಮಾಡಿದ್ದು ಮಾತ್ರ ಕಡಿಮೆ ಆಗುವುದಿಲ್ಲ, ಈ ರಾಜ್ಯದಲ್ಲಿ, ಜಾಸ್ತಿ ಮಾಡಿದ್ದು ಮಾತ್ರ ತಕ್ಷಣ ಜಾಸ್ತಿಯಾಗುತ್ತದೆ. ಎಕ್ಸ್‌ಪೋರ್ಟ್ ಮಾಡುವ ಬಿಯರ್ ಮೇಲೆ 40 ಪೈಸೆ ಜಾಸ್ತಿ ಮಾಡಿದರೆ, 2-3 ರೂಪಾಯಿ ಜಾಸ್ತಿಯಾಗುತ್ತದೆ. ಇದರ ಬಗ್ಗೆ ತಾವು ಸ್ವಲ್ಪ ವಿಮರ್ಶೆಯನ್ನು ಮಾಡಬೇಕು, ಕನಿಷ್ಟ ಏಪ್ರಿಲ್ ಒಂದರವರೆಗೆ ಆದರೂ ನೀವು ರಿಯಾಯಿತಿಯನ್ನು ಕೊಡಬೇಕಾಗಿತ್ತು.

ಶ್ರೀ ಹೆಚ್. ಎನ್. ನಂಜೇಗೌಡ:- ಬೆಂಗಳೂರಿನಲ್ಲಿ ನೀರಿನ ಬೆಲೆ ಬಿಯರ್ ಬೆಲೆ ಎಲ್ಲಾ ಒಂದೇ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಇನ್ನು ಈ ಮಾಂಗಲ್ಯಭಾಗ್ಯದ ಯೋಜನೆ ಬಗ್ಗೆ ಹೇಳುವುದಾದರೆ, ಈ ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರ ಮಗಳ ಮದುವೆಗೆ 5 ಸಾವಿರ ಕೊಡುತ್ತೇವೆ ಎಂದು ಹೇಳಿದ್ದೀರಿ, ನಾನು ಮಾನ್ಯ ಸಚಿವರನ್ನು ಕೇಳುವುದೇನೆಂದರೆ ಇದರಲ್ಲಿ ಎಷ್ಟು ಆ ರೀತಿಯ ಕುಟುಂಬಗಳು ಇವೆ, ಎಷ್ಟು ಕೊಡಬೇಕು, ಎಷ್ಟು ಹಣವನ್ನು ಇದಕ್ಕಾಗಿ ಇಡಬೇಕು, ಎಷ್ಟು ಖರ್ಚು ಬರುತ್ತದೆ, ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇದ್ದರೆ ನಮಗೆ ಹೇಳಿ. ಏಕೆಂದರೆ ಎಲ್ಲಿಯೂ ಕೂಡ ನೀವು ಈ ಮಾಂಗಲ್ಯ ಭಾಗ್ಯಕ್ಕೆ ಎಷ್ಟು ಹಣವನ್ನು ಒದಗಿಸುತ್ತೀರಿ ಎಂದು ಹೇಳಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ಈಗ ಶ್ರೀರಾಮರೆಡ್ಡಿಯವರು ಹೇಳಿದಂಥ ಮಾತಿಗೆ ಬರುತ್ತಿದ್ದೇನೆ, ತಾವೇ ಒಪ್ಪಿಕೊಂಡಿದ್ದೀರಿ, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಕಡಿಮೆ ಎಂದು, ಎಂಟರ್ ಪ್ರಿನರ್ಸ್ ಬರುತ್ತಿಲ್ಲ. 1995ನೇ ಇಸವಿಯಿಂದ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿದ್ದೀರಿ, ಸಿನಿಯಾರಿಟಿ ಪಟ್ಟಿ ಮಾಡಿ ಎಂಟರ್‌ಪ್ರಿನರ್ಸ್‌ಗೆ ಸಬ್ಸಿಡಿ ಕೊಡುತ್ತಾ ಬಂದಿದ್ದರೆ, ಒಳ್ಳೆಯದಿತ್ತು. ಆ ಎಂಟರ್‌ಪ್ರಿನರ್ಸ್ ಸಬ್ಸಿಡಿಗಾಗಿ ಕಾದು 5-6 ಲಕ್ಷಗಳವರೆಗೆ ಬಡ್ಡಿ ಕಟ್ಟುತ್ತಿದ್ದಾರೆ. ಇನ್ನು ಜಯದೇವ ಹೃದ್ರೋಗ ಆಸ್ಪತ್ರೆಯ ಬಗ್ಗೆ ಮಾತನಾಡಿದ್ದೀರಿ, ಅದರಿಂದ ಬಡವರಿಗೆ ಏನು ಉಪಯೋಗ ಆಗುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಪೋಸ್ಟ್ - ಆಪರೇಟೀವ್ ಕೇರ್ ಅನ್ನು ಅಷ್ಟೊಂದು ಚೆನ್ನಾಗಿ ಮಾಡುತ್ತಿಲ್ಲ. ಆ ಬಗ್ಗೆ ತಾವು ಹೆಚ್ಚು ಗಮನ ಕೊಡಬೇಕು. ಡಾಕ್ಟರ್‌ಗಳನ್ನು ರಿಕ್ರೂಟ್ ಮಾಡಿದ್ದನ್ನು ಮಾತ್ರ ದೊಡ್ಡದಾಗಿ ಹೇಳಿಕೊಂಡಿದ್ದೀರಿ. ಎ. ಎನ್. ಎಮ್. ಮತ್ತು ಹೆಲ್ತ್ ವರ್ಕರ್ಸ್‌ನ್ನು ರಿಕ್ರೂಟ್ ಮಾಡಿ ಎಷ್ಟು ವರ್ಷ ಆಗಿದೆ ಎನ್ನುವುದನ್ನು ಸ್ವಲ್ಪ ದಯಮಾಡಿ ತಿರುಗಿಸಿ ನೋಡಿ. ಯಾವ ತಾಲ್ಲೂಕಿನಲ್ಲಿ ಎ ಎನ್ ಎಂಗಳು ಇದ್ದಾರೆ ಎನ್ನುವುದನ್ನು ಸ್ವಲ್ಪ ಹೇಳುತ್ತೀರಾ? ಇರುವ ನಾಲ್ಕು ಜನ ಎ ಎನ್ ಎಂಗಳನ್ನು ಕೂಡ ಡೆಪ್ಯೂಟೇಷನ್ ತಾಲ್ಲೂಕು ಆಸ್ಪತ್ರೆಗಳಿಗೆ ತೆಗೆದುಕೊಂಡಿದ್ದಾರೆ. ಇದರಿಂದ ಯಾವುದೇ ಹೆಣ್ಣುಮಕ್ಕಳು ಇವತ್ತು ಹೆರಿಗೆಗಾಗಿ 10-15 ಕಿ.ಮೀ ಹೋಗಬೇಕಾಗುತ್ತದೆ. ನಿಮ್ಮ ಎ ಎನ್ ಎಂಗಳು ಅಲ್ಲಿ ಅಸಿಸ್ಟೆಂಟ್ ಮಾಡುತ್ತಿಲ್ಲ. ಆದುದರಿಂದ ನೀವು

ಈ ಎ.ಎನ್.ಎಂ. ಮತ್ತು ಪ್ಯಾರಾ ಮೆಡಿಕಲ್ ಸ್ಟ್ಯಾಫ್ ಅನ್ನು ತಾವು ಹೆಚ್ಚು ಮಾಡಬೇಕು, ಮತ್ತು ತಾವು ಅಪಾಯಿಂಟ್‌ಮೆಂಟ್‌ಗಳಿಗೆ ಬ್ಯಾನ್ ತರುತ್ತೇವೆ ಎಂದು ಹೇಳಿದ್ದೀರಿ, ಯಾವ ಅಪಾಯಿಂಟ್‌ಮೆಂಟ್‌ಗೆ ತರುತ್ತೀರಿ? ಇನ್ನು ನಿಮಗೆ ಕೈಮುಗಿದು ಕೇಳುತ್ತೇವೆ, ಆ ಕೆ.ಇ.ಬಿ. ಲೈನ್ ಮ್ಯಾನ್‌ಗಳನ್ನಾದರೂ ಹಾಕಲಿಕ್ಕೆ ನಮಗೆ ಬಿಡಿ. ಒಬ್ಬೊಬ್ಬ ಲೈನ್ ಮ್ಯಾನ್‌ಗಳಿಗೆ ಎಷ್ಟು ಕೆಲಸವನ್ನು ಕೊಟ್ಟಿದ್ದಾರೆ ಎಂದು ಕೆ.ಇ.ಬಿ. ಅಧಿಕಾರಿಗಳನ್ನು ಕರೆಸಿ ಮಾತನಾಡಿ. ಕೆ.ಇ.ಬಿ. ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಕೆ.ಇ.ಬಿ. ಲೈನ್ ಮೆನ್‌ಗಳನ್ನು 10-15 ಸಾವಿರ ಪರ್ಮಿಟ್ ಮಾಡದೆ ಹೋದರೆ ಇವತ್ತಿನ ಕೆ.ಇ.ಬಿ.ಯನ್ನು ನೀವು ಸುಧಾರಿಸುವುದಕ್ಕೆ ಆಗುವುದಿಲ್ಲ. ಇನ್ನು ಆರ್.ಐ.ಡಿ. ಎಫ್‌ಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಸಣ್ಣ ನೀರಾವರಿ ಇಲಾಖೆಯವರು 1995-96ರಲ್ಲಿ ಆರ್.ಐ.ಡಿ.ಎಫ್ ಯೋಜನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಸಣ್ಣ ನೀರಾವರಿ ಇಲಾಖೆಗೆ ಕೊಡಬೇಕಾಗಿದ್ದ ಆರ್. ಐ.ಡಿ. ಎಫ್‌ಗಳನ್ನು ಕೊಡದೆ, ನಿಮಗೆ ಬರಬೇಕಾಗಿದ್ದ ಎಕ್ಸ್‌ಟರ್ನಲ್ ಅಸಿಸ್ಟೆಂನ್ಸ್ ಮತ್ತೆ ಎರಡು ವರ್ಷ ಬರಲಿಲ್ಲ, ಇದರಿಂದ ಎರಡು ವರ್ಷ ಲ್ಯಾಪ್ಸ್ ಆಯಿತು. ಆ ಅಸಿಸ್ಟೆನ್ಸ್‌ಗೆ ಇವತ್ತು ನೀವು ಏನು ಮಾಡುತ್ತೀರಿ? ಈ ರಾಜ್ಯದಲ್ಲಿ ಬೇಕಾದಷ್ಟು ಸಣ್ಣ ನೀರಾವರಿ ಕೆರೆಗಳನ್ನು ಮಾಡಬಹುದಿತ್ತು, ನಿಮ್ಮ ಇಲಾಖೆಯವರು ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಅವರು ಎಸ್ಟಿಮೇಟ್ ಮಾಡೇ ಇಲ್ಲ ಅವರಿನ್ನೂ ಮೊದಲೇ ಹಂತದ ಯೋಜನೆಯ ಹಣವನ್ನು ಇನ್ನು ಖರ್ಚು ಮಾಡಲಿಲ್ಲ ಎಂದರೆ, ಈಗ ಆರ್. ಐ.ಡಿ. ಎಫ್ 4ಕ್ಕೆ ಬಂದಿದ್ದೇವೆ, ಈ ವರ್ಷವಾದರೂ 140 ಕೋಟಿ ತರಸಲಿಕ್ಕೆ ಅವಕಾಶ ಉಂಟು, ಆದುದರಿಂದ ನೀವು ಅವರನ್ನು ಸ್ವಲ್ಪ ಕರೆಸಿ, ಆರ್. ಐ.ಡಿ. ಎಫ್ ಏನಾಗಿದೆ, ಹಣ ಏಕೆ ಖರ್ಚು ಮಾಡಲಿಲ್ಲ ಎಂದು ಕೇಳಿ. ಇನ್ನು ಈ ಬ್ಯಾರೇಜ್ ಬಗ್ಗೆ ತಾವು ಹೇಳಿದ್ದೀರಿ, ಎಂಟು ಬ್ಯಾರೇಜ್‌ಗಳನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದವರೂ ಕಟ್ಟಬೇಕಾಗಿತ್ತು, ನಾಲ್ಕು ಬ್ಯಾರೇಜ್ ಮಾಡಿ ಮಹಾರಾಷ್ಟ್ರದಲ್ಲಿ 5-6 ವರ್ಷ ಆಗಿದೆ, ಆದರೆ ನೀವು ಪ್ರತಿವರ್ಷ ನಾವು ಬ್ಯಾರೇಜ್ ಮಾಡುತ್ತೇವೆ ಎಂದು ಹೇಳಿಕೊಂಡು ಬರುತ್ತಿದ್ದೀರಿ, ಆದರೆ ಇನ್ನು ಮಾಡಿಲ್ಲ. ನಾವಂತೂ ಹಾರ್ಟಿಕಲ್ಚರ್ ಬೆಳೆಗಾರರಾಗಿ ಸರ್ವನಾಶವಾಗಿದ್ದೇವೆ. ಬೆಳೆಗೆ ಬೋರ್‌ನಲ್ಲಿ ನೀರು ಇಲ್ಲ, ಮಂತ್ರಿಗಳು ನಮಗೆ ಯಾವ ವರ್ಷವೂ ಸಹ ಸರಿಯಾಗಿ ಸಬ್ಸಿಡಿ ತರಸಿ ಕೊಡಲಿಲ್ಲ, ಆದರೆ ಬಾಷಣ ಮಾಡುವುದನ್ನು ಬಿಟ್ಟಿಲ್ಲ, ಈ ವರ್ಷ ಕೂಡ ಕೊಟ್ಟಿಲ್ಲ. ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಹೇಳಬೇಕು. ಇನ್ನು ಏರಿಯಾ ಎಕ್ಸ್‌ಪ್ಯಾನ್‌ಷನ್‌ನಲ್ಲಿ ಕೋಕೋನಟ್ ಬೋರ್ಡ್‌ನವರು ಕೇರಳ ರಾಜ್ಯಕ್ಕೆ ಎಷ್ಟು ಕೊಡುತ್ತಿದ್ದಾರೆ, ಕರ್ನಾಟಕಕ್ಕೆ ಎಷ್ಟು ಕೊಡುತ್ತಿದ್ದಾರೆ? ತಮ್ಮ ಕಾಲದಲ್ಲಿ ತುಮಕೂರು ಜಿಲ್ಲೆಗೆ ಬರೀ 50 ಎಕರೆ ತೆಗೆದುಕೊಂಡಿರುವುದು ನಾಚಿಕೆಗೇಡು. ಇವತ್ತಿನವರೆಗೆ ನಿಮಗೆ ಡ್ರಿಪ್ ಇರಿಗೇಶನ್ ಸಬ್ಸಿಡಿ, ಕಳೆದ ಸಾರಿ ಸಹ ತುಮಕೂರು ಜಿಲ್ಲೆಗೆ ಒಂದಕ್ಕೆ ಎರಡೂವರೆ ಮೂರು ಕೋಟಿ ಸಬ್ಸಿಡಿ ಉಳಿದು ಹೋಗಿ, ಅದನ್ನು ಈ ವರ್ಷ ಏಪ್ರಿಲ್ ಆದನಂತರ ತರಿಸಿಕೊಂಡಿದ್ದೇವೆ. ಈ ವರ್ಷ ಕೂಡ ಅದೇ ಪರಿಸ್ಥಿತಿ ನಿರ್ಮಾಣ ಆಗಿದೆ. ಟೋಕನ್ ಗ್ರ್ಯಾಂಟ್ಸ್ 7-8 ಲಕ್ಷ ಒಂದೊಂದು ತಾಲ್ಲೂಕಿಗೆ ಕೊಟ್ಟಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) :- ತುಮಕೂರು ಶಾಸಕರು ದೂರು ಕೊಟ್ಟಿದ್ದರಿಂದ ಅಲ್ಲಿ ತನಿಖೆ ನಡೆಯುತ್ತಿದೆ. ತೆಂಗಿನ ಮರ ನಾಶವಾಗಿಲ್ಲದಿದ್ದರೂ ಕೂಡ 200 ಕ್ಲೈಮ್ ಮಾಡಿ ಸಾವಿರಾರು ಅರ್ಜಿಗಳು ಬಂದವು. ಇದರ ಬಗ್ಗೆ ನಮಗೆ ಮಾನ್ಯ ಗುಬ್ಬಿ ಶಾಸಕರು ಈ ರೀತಿ ಅನ್ಯಾಯವಾಗುತ್ತಿದೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದರು ಲೆಟರ್ ಬರೆದರು. ಆದುದರಿಂದ ಅಲ್ಲಿ

ತನಿಖೆ ನಡೆಯುತ್ತಿದೆ. ಡ್ರಿಪ್ ಇರಿಗೇಶನ್‌ನಲ್ಲಿ ಚಿತ್ರದುರ್ಗ ಬಿಟ್ಟರೆ ಹೆಚ್ಚು ಹಣ ಕೊಟ್ಟಿರುವುದು ತುಮಕೂರು ಜಿಲ್ಲೆಗೆ, ಅದು ಅಲ್ಲದೆ, ಕೋಕೋನಟ್ ಬೋರ್ಡ್‌ನಿಂದ ನಮಗೆ ಬರುತ್ತಿದ್ದದ್ದು ಬರಿ 40-50 ಲಕ್ಷ, ನಾವು ಬಂದ ಮೇಲೆ, ಎರಡೂವರೆ ಕೋಟಿ ರೂಪಾಯಿ ಅನುದಾನವನ್ನು ಪಡೆದುಕೊಂಡು ನಾಲ್ಕು ಸ್ಕ್ವಾಡ್‌ನ್ನು ಹಾಕಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಾವು ತೆಂಗು, ಅಡಿಕೆಯನ್ನು ನಂಬಿಕೊಂಡು ಬದುಕುತ್ತಿರುವ ಜನ. ನೀವು ಇದೆಲ್ಲಾ ಆಕಾಳಿ, ಬೊಕಾಳಿ ನಮಗೆ ಹೇಳಬಾರದು. ನಿಮ್ಮ ಒಂದು ಫಾರ್ಮ್‌ನಲ್ಲಿ ಇವತ್ತು ರೆಗ್ಯೂಲರ್ ಸ್ಟ್ಯಾಫ್ ಇಲ್ಲ, ಒಂದು ಫಾರ್ಮ್ ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಚಿಕ್ಕನಾಯಕನ ಹಳ್ಳಿಯಲ್ಲಿ ಬಂದಿರುವ ಕಪ್ಪು ತಲೆ ಹುಳು ರೋಗಕ್ಕೆ ಏತಕ್ಕೆ ಔಷಧಿ ಸಿಂಪಡಿಸಿಲ್ಲ ಎಂದು ನಾನು ಅಸೆಂಬ್ಲಿ ಮುಗಿದ ಮೇಲೆ ಶುಕ್ರವಾರ, ಶನಿವಾರ ನಿಮ್ಮ ಅಧಿಕಾರಿಗಳ ಜೊತೆ ಮೀಟಿಂಗ್ ಮಾಡಿದ್ದೇನೆ, ನಾನು ಅಣಬೆ ರೋಗದ ಬಗ್ಗೆ ಹೇಳಿತ್ತಿಲ್ಲ. ಅಣಬೆ ರೋಗ ಎಂದು ಹೇಳಿ ಜನರು ಮೂರು ವರ್ಷಗಳ ಹಿಂದೆ ಸುಳ್ಳು ದುಡ್ಡು ತೆಗೆದುಕೊಂಡಿದ್ದಾರೆ ಎಂದು ಏನು ತುಮಕೂರು ಜಿಲ್ಲೆ ಶಾಸಕರು ಹೇಳಿದ್ದಾರೆ, ಆದರೆ ಏರಿಯಾ ಎಕ್ಸ್‌ಪ್ಲಾನ್‌ಷನ್ ಸ್ಕೀಮ್‌ನಲ್ಲಿ ಒಂದು ಎಕರೆ ತೆಂಗಿನಗಿಡ ಯಾರಾದರೂ ಹೊಸದಾಗಿ ಹಾಕಿದರೆ, 5,000 ರೂಪಾಯಿ ಸಬ್ಸಿಡಿ ತಾವು ಕೊಡಿಸಬೇಕಾಗಿತ್ತು. ನೀವು ಇಡೀ ಜಿಲ್ಲೆಗೆ 50 ಎಕರೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ, ಈ ಕರ್ನಾಟಕ ರಾಜ್ಯ ತೆಂಗಿನ ಉತ್ಪಾದನೆಯಲ್ಲಿ ಎರಡನೇ ಸ್ಥಾನವನ್ನು ಪಡೆದಿತ್ತು. ನಾವೆಲ್ಲಾ ಇದು ಕೇರಳದ ಹತ್ತಿರ ಬರುತ್ತದೆ ತೆಂಗಿನ ಉತ್ಪಾದನೆಯಲ್ಲಿ ಎಂದು ಬಹಳ ಆಶೆ ಇಟ್ಟು ಕೊಂಡಿದ್ದೆವು, ಆದರೆ ನೀವು 3ನೇ ಸ್ಥಾನಕ್ಕೆ ಕಳುಹಿಸಿದ್ದೀರಿ, ಸ್ವಲ್ಪ ದಿವಸ ಕಳೆದರೆ ನಮ್ಮನ್ನು ನಾಲ್ಕನೇ ಸ್ಥಾನಕ್ಕೆ ಕಳುಹಿಸುತ್ತೀರಿ. ಇವತ್ತು ಬರುತ್ತಿರೋ ತೋರಿಸುತ್ತೇನೆ 70 ಪರ್ಸೆಂಟ್‌ಗ್ರ್ಯಾಂಟ್ ಇವತ್ತು ಕೊಚ್ಚಿನ್‌ನಲ್ಲಿ ಮತ್ತು ತಿರುಚ್ನೂರ್‌ನಲ್ಲೇ ಖರ್ಚಾಗುತ್ತದೆ. ಆ ಬೋರ್ಡ್‌ನವರು ನಮಗೆ 12,500 ಸಬ್ಸಿಡಿಯನ್ನು ಕೊಡಬೇಕು. ಆದರೆ ಈ ಸರ್ಕಾರ ನಮಗೆ ತರಿಸಿ ಕೊಡಲಿಲ್ಲ. ತಾವು ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಂದ ವರದಿ ತರಿಸಿಕೊಂಡು ನಮಗೆ ಉತ್ತರ ಕೊಡಿ, ತಿಪಟೂರು ಮತ್ತು ಗುಬ್ಬಿ ತಾಲ್ಲೂಕಿನಲ್ಲಿ ರೋಗ ಬಂದಿದೆ ಎಂದು ನಿಮ್ಮ ತೋಟಗಾರಿಕೆ ಅಧಿಕಾರಿಗಳು ಹಣ ಹೊಡೆದಿದ್ದಾರೆ ಎನ್ನುವ ಬಗ್ಗೆ ಕಾಗದ ಕೊಟ್ಟಿದ್ದು ಬಿಟ್ಟರೆ, ನಿಮಗೆ ಏರಿಯಾ ಎಕ್ಸ್‌ಪ್ಯಾನ್‌ಷನ್ ಸ್ಕೀಮ್ ಬಗ್ಗೆ ತಮಗೆ ಏನೂ ಗೊತ್ತಿಲ್ಲ. ಅಣಬೆ ರೋಗದೊಂದನ್ನು ಇಟ್ಟುಕೊಂಡು ನೀವು ತುಮಕೂರು ಶಾಸಕರು ಕಾಗದ ಬರೆದರು ಎಂದು ಹೇಳುತ್ತೀರಿ. ಒಂದು ವರ್ಷಕ್ಕೆ ಒಂದು ಪಿ.ಎಲ್.ಡಿ. ಬ್ಯಾಂಕ್ ಫೈನಾನ್ಸ್ ಮಾಡಿರುವುದನ್ನು ತೆಗೆಸಿ ನೋಡಿ, ಒಂದು ವರ್ಷಕ್ಕೆ ಕಮರ್ಷಿಯಲ್ ಬ್ಯಾಂಕುಗಳು ಎಷ್ಟು ಎಕರೆಗೆ ಲೋನ್ ಕೊಡುತ್ತಿವೆ ಎನ್ನುವುದನ್ನು ತೆಗೆಸಿ ನೋಡಿ. ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಭಾಗದಲ್ಲಿ ಒಂದು ವರ್ಷಕ್ಕೆ ಎಷ್ಟು ತೆಂಗನ್ನು ಹಾಕುತ್ತಾರೆ ಎನ್ನುವುದನ್ನು ತೆಗೆಸಿ ನೋಡಿ. ಇಡೀ ಜಿಲ್ಲೆಗೆ 50 ಎಕರೆಗೆ ಕೊಟ್ಟು ಇಲ್ಲಿ ನಿಂತುಕೊಂಡು ಮಾತನಾಡಿದರೆ ಏನು ಆಗುತ್ತದೆ? ಕಡತಗಳನ್ನು ತೆಗೆದು ನೋಡಿ ಮಾತನಾಡಿ. ಅಂಕಿ ಅಂಶಗಳನ್ನು ನೀವು ತಿದ್ದಲು ಆಗುತ್ತದೆಯೇ?

ಶ್ರೀ ಡಿ.ಟಿ. ಜಯಕುಮಾರ್ : ನಾವು ಏರಿಯಾ ಎಕ್ಸ್‌ಪ್ಯಾನ್‌ಷನ್‌ನಲ್ಲಿ 13 ಲಕ್ಷ ಹೆಕ್ಟೇರ್ ಇರುವುದನ್ನು 26 ಲಕ್ಷ ಹೆಕ್ಟೇರ್ ಮಾಡಬೇಕೆಂದು, ಪ್ರತಿ ವರ್ಷ 2-3 ಲಕ್ಷ ಉತ್ಪಾದನೆ ಮಾಡುತ್ತಿದ್ದ ತೆಂಗಿನ ಸಸಿಗಳನ್ನು ಈ ವರ್ಷ 1996-97ರಲ್ಲಿ ನಾವು 8 ಲಕ್ಷ ತೆಂಗಿನ ಸಸಿಗಳನ್ನು ಉತ್ಪಾದನೆ ಮಾಡಿದ್ದೇವೆ.

ಇವುಗಳನ್ನು ವಿವಿಧ ಯೋಜನೆಗಳಲ್ಲಿ ಜನಗಳಿಗೆ ಕೊಡುತ್ತಿದ್ದೇವೆ. ತಾವೇ ಕಣ್ಣಾರೆ ನೋಡಿದ್ದೀರಿ. ತೋಟಗಾರಿಕೆ ಹೆಚ್ಚಾಗಿದೆಯೇ ಹೊರತು ಕಡಿಮೆಯಂತೂ ಆಗಿಲ್ಲ. ನಮ್ಮ ಇಲಾಖೆಯವರು ಕೊಡಲಿ, ಕೊಡದಿರಲಿ ಅದು ಹೆಚ್ಚಾಗುತ್ತಿದೆ.

ಅಧ್ಯಕ್ಷರು :- ಅವರು ಹೇಳುತ್ತಿರುವುದೇನೆಂದರೆ, ಏರಿಯಾ ಡೆವೆಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಯಾರಾದರೂ ಒಂದು ಎಕರೆ ತೆಂಗನ್ನು ಹೊಸದಾಗಿ ಹಾಕಿದರೆ ಅವರಿಗೆ 5 ಸಾವಿರ ರೂಪಾಯಿ ಸಬ್ಸಿಡಿ ಸಿಗಬೇಕು. ಈ ವರ್ಷ ನೀವು ಇಡೀ ತುಮಕೂರು ಜಿಲ್ಲೆಯಲ್ಲಿ ಕೇವಲ 50 ಎಕರೆಗೆ ಮಾಡಿದ್ದೀರಿ. ಅದು ಸಾಕಾಗುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಅಂಕಿ ಅಂಶಗಳನ್ನು ತರಿಸಿಕೊಂಡು ಉತ್ತರ ಕೊಡುವ ಸಮಯದಲ್ಲಿ ಹೇಳಿ. ಹಾರ್ಟಿಕಲ್ಚರ್‌ನಲ್ಲಿ ಇಷ್ಟೆಲ್ಲಾ ಇರುತ್ತದೆ ಎನ್ನುವ ಐಡಿಯಾನೇ ನನಗೆ ಇರಲಿಲ್ಲ. ಇದರಲ್ಲಿ ಬಹಳ ವಿಚಾರಗಳಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಡೆವೆಲಪ್‌ಮೆಂಟ್ ಬೋರ್ಡ್‌ನಲ್ಲಿ ಬಹಳ ಹಣವಿತ್ತು ಸಾರ್. ಈ ಕಡೆ ಎಷ್ಟು ಆಸಕ್ತಿ ವಹಿಸಬೇಕು ಎಂದರೆ, ನಮಗೆಲ್ಲಾ ಬಹಳ ನೋವಿದೆ, ಇವತ್ತು ತೆಂಗಿನ ಉತ್ಪಾದನೆ ಮೂರನೇ ಒಂದು ಭಾಗಕ್ಕೆ ಅಥವಾ ಅರ್ಧದಷ್ಟಕ್ಕೆ ಬಂತು ನಿಂತಿದೆ. ಡ್ರಿಪ್ ಇರಿಗೇಷನ್‌ಗೆ ತಾವು ಸಕಾಲದಲ್ಲಿ ಸಬ್ಸಿಡಿ ಕೊಡದೇ ಹೋದರೆ ಈ ವರ್ಷ ನಾವು ಉಳಿಯುವ ಸ್ಥಿತಿಯಲ್ಲಿ ಇಲ್ಲ. ಪೂರ್ತಿ ಬಂಡವಾಳ ಹಾಕಿ ಡ್ರಿಪ್ ಮಾಡಿಸಲು ಜನಗಳಲ್ಲಿ ಶಕ್ತಿ ಇಲ್ಲ. ಇದರ ಜೊತೆಗೆ ಇವತ್ತು ನಮಗೆ ಕುಡಿಯುವ ನೀರಿಗೆ ತುಂಬಾ ಹಾಹಾಕಾರವಾಗಿದೆ. ನಾನು ಈ ಸಮಯದಲ್ಲಿ ಏನನ್ನು ಕೇಳಲು ಇಷ್ಟಪಡುತ್ತೇನೆ ಎಂದರೆ ನಾವು 300-400 ಅಡಿಗಳಷ್ಟು ಆಳದಲ್ಲಿ ಕೊಳವೆ ಬಾವಿಗಳನ್ನು ತೆಗೆಸಬೇಕಾಗಿದೆ. ತಾವು ಕೊಟ್ಟಿರುವ ಹಣ ನಿಜವಾಗಿಯೂ ತೀರ ಕಡಿಮೆ. ನಾವು ಹ್ಯಾಂಡ್‌ಪಂಪ್ ಹಾಕಿ ನೀರೆತ್ತಬೇಕು ಎಂದರೆ ಅಷ್ಟೊಂದು ಶಕ್ತಿ ಇರುವವರು, ರೆಟ್ಟೆ ದಪ್ಪವಾಗಿರುವವರು ಯಾರೂ ಇಲ್ಲ. ಹಾಗಾಗಿ ಮೋಟಾರ್ ಪಂಪ್‌ಗಳನ್ನು ಅಳವಡಿಸುವುದು ಅನಿವಾರ್ಯವಾಗಿದೆ. ನಿಮ್ಮದೇ ತೀರ್ಮಾನದ ಪ್ರಕಾರ ಹ್ಯಾಂಡ್ ಪಂಪ್‌ನಿಂದ ಗರಿಷ್ಟವೆಂದರೆ 100 ಅಡಿಯಿಂದ ನೀರೆತ್ತಬಹುದು. ಅದಕ್ಕಿಂತ ಜಾಸ್ತಿ ಎತ್ತಲು ಆಗುವುದಿಲ್ಲ. ತಾವು ಅರ್ಥ ಸಚಿವರಾಗಿರುವ ಈ ಕಾಲದಲ್ಲಿ ನಮ್ಮ ಜನರು ಅದರಲ್ಲೂ ಗ್ರಾಮೀಣ ಜನರು ಜಾಸ್ತಿ ನಿರೀಕ್ಷೆ ಮಾಡಿದ್ದಾರೆ. ದಯಮಾಡಿ, ಆ ಕಡೆ ಸ್ವಲ್ಪ ನೋಡಬೇಕು. ಈಗ ಇಟ್ಟಿರುವಂಥ ಬಜೆಟ್ ಖಂಡಿತವಾಗಿಯೂ ಗ್ರಾಮೀಣ ಜನರ ಪರವಾಗಿಲ್ಲ. ಇದನ್ನು ನಾನು ತಮಗೆ ಸತ್ಯವಾಗಿ ಹೇಳುತ್ತಿದ್ದೇನೆ. ಮತ್ತು ತೆರಿಗೆಯನ್ನು ಏರಿಸುವ, ಇಳಿಸುವ ಕಡೆಗಳಲ್ಲಿ ಸ್ಲ್ಯಾಬ್ ಕಡಿಮೆ ಮಾಡಲು ನಮ್ಮದೇನೂ ತಕರಾರಿಲ್ಲ. ತಾವು ತೆರಿಗೆಯನ್ನು ಏನು ಇಳಿಸಿದ್ದೀರಿ ಅಲ್ಲಿ ಹೆಚ್ಚು ಮಾಡಬಹುದಾಗಿತ್ತು, ತಾವು ಏನು ಹೆಚ್ಚು ಮಾಡಿದ್ದೀರಿ ಅಲ್ಲಿ ಕಡಿಮೆ ಮಾಡಿದ್ದರೆ ನಿಜವಾಗಿಯೂ ಒಳ್ಳೆಯ ಹೆಸರು ಬರುತ್ತಿತ್ತು. ಇದರ ಜೊತೆಗೆ ಶೆಡ್ಯೂಲ್ 5ರಲ್ಲಿ ಇರುವಂಥಾದ್ದರ ಮೇಲೆ ಮತ್ತೆ ತೆರಿಗೆಯನ್ನು ಹಾಕಲು ದೊಡ್ಡ ಮನಸ್ಸನ್ನು ಮಾಡಬೇಡಿ. ಯಾರೂ ಮಾಡದಿದ್ದ ಕೆಲಸವನ್ನು ನೀವು ಏಕೆ ಮಾಡಲು ಹೋಗುತ್ತೀರಿ? ಇವತ್ತು ಕೊರತೆಯಿಂದ 400 ಕೋಟಿಗೆ ಆ ಎರಡು ಕೋಟಿ ಸೇರಿಕೊಳ್ಳುತ್ತದೆ. ರಾಜಸ್ವವೇ ಕೊರತೆಯಾಗಿದೆ, ನೀವು ನಿರೀಕ್ಷಣೆ ಮಾಡಿದಷ್ಟು ತೆರಿಗೆಯೇ ಬಂದಿಲ್ಲ ಎಂದ ಮೇಲೆ ಮೈದಾ ತಿನ್ನುವವರನ್ನು, ರವೆ ತಿನ್ನುವವರನ್ನು ಏಕೆ ಬಲಿ ಹಾಕಲು ಹೋಗುತ್ತೀರಿ. ಇದಕ್ಕೆ ತಾವು ಸ್ಪಷ್ಟವಾಗಿ ಉತ್ತರ ಕೊಡಬೇಕು ಮತ್ತು ಗ್ರಾಮೀಣಾಭಿವೃದ್ಧಿಗೆ ಮತ್ತು ಕೃಷಿಗೆ ಹೆಚ್ಚಿನ ಹಣವನ್ನು ಒದಗಿಸಬೇಕು. ಏಕೆಂದರೆ ಇವುಗಳಿಗೆ ತಾವು ಕೊಟ್ಟಿರುವ ಹಣ ತೀರಾ ಕಡಿಮೆಯಾಗಿದೆ. ತಾವೇ ಕಡತ ತೆಗೆದು ನೋಡಿ. ಗ್ರಾಮೀಣಾಭಿವೃದ್ಧಿ ಮತ್ತು

ಕೃಷಿ ಇವೆರಡೂ ಸೇರಿದರೂ ಶೇ. 9 ರಷ್ಟು ವಿನಿಯೋಗವಾಗುತ್ತಿಲ್ಲ. ಈ ಸ್ಥಿತಿ ನಿಮ್ಮ ಕಾಲದಲ್ಲಿ ನಮಗೆ ಬರುತ್ತದೆ ಎಂದು ನಾವು ತಿಳಿದುಕೊಂಡಿರಲಿಲ್ಲ. ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು):- ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ರಾಜ್ಯಕ್ಕೆ ಇ. ಡಿ. ಎಸ್. ಮೇಲೆ ಶೇ. 77.5 ರಷ್ಟು ಹಾಗೂ ಎಲ್ಲಾ ರಾಜ್ಯಗಳಿಗೆ ಹೆಚ್ಚುವರಿ ಅನುದಾನ ಒಂದು ಸಾವಿರ ಕೋಟಿ, ಹಾಗೆಯೇ ಸ್ಪಷ್ಟವಾದ ರಾಷ್ಟ್ರೀಯ ಜಲನೀತಿ, ಹಾಗೆಯೇ ಮುಂದಿನ ದಿವಸಗಳಲ್ಲಿ ಕನ್ನಡವೂ ಕೂಡ ಅಧಿಕೃತ ರಾಷ್ಟ್ರ ಭಾಷೆಗಳಲ್ಲಿ ಒಂದಾದರೆ ಆಶ್ಚರ್ಯವಿಲ್ಲ, ಇದರ ಜೊತೆಯಲ್ಲಿ ರಾಜ್ಯ-ಕೇಂದ್ರ ಸಂಬಂಧಗಳನ್ನು ಸಂಪರ್ಕವನ್ನು ಉತ್ತಮಗೊಳಿಸುವಂಥ ಅನೇಕ ಉಪಯುಕ್ತ ನೀತಿಗಳನ್ನು ಹಾಕಿ ಬಹುಶ: ನಮ್ಮ ರಾಜ್ಯಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡುವಂಥ ಪ್ರಯತ್ನ ಮಾಡಿರುವಂಥ ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಮೊಟ್ಟಮೊದಲು ತುಂಬು ಹೃದಯದ ಅಭಿನಂದನೆಗಳನ್ನು ಕರ್ನಾಟಕ ರಾಜ್ಯದ ಪರವಾಗಿ ಸಲ್ಲಿಸಲು ಇಚ್ಛಿಸುತ್ತೇನೆ. ಮುಂದೆ ರಾಜ್ಯ ಬಜೆಟ್‌ಗೆ ಸಂಬಂಧಪಟ್ಟಂತೆ ಕೃಷಿ, ಗ್ರಾಮೀಣಾಭಿವೃದ್ಧಿ, ವಿಶೇಷ ಪ್ರದೇಶ ಯೋಜನೆ, ಕೈಗಾರಿಕೆ ಮತ್ತು ಖನಿಜಗಳು, ಸಮಾಜ ಸೇವೆಗಳಾದ ಶಿಕ್ಷಣ, ಕ್ರೀಡಾಸಂಸ್ಥೆಗಳು, ಆರೋಗ್ಯ, ವಸತಿ ಮತ್ತು ನಗರಾಭಿವೃದ್ಧಿ, ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ ಎಲ್ಲದರಲ್ಲೂ ಕೂಡ ಕಳೆದ ವರ್ಷ ಎಷ್ಟು ಅಲೋಕೇಷನ್ ಆಗಿತ್ತು, ಅದಕ್ಕೆ ಹೋಲಿಸಿದರೆ ಶೇಕಡಾವಾರು ಕಡಿಮೆ ಈ ವರ್ಷ ಕೊಟ್ಟಿರುವುದು ಸರಿಯಲ್ಲ. ಇವುಗಳ ಬಗ್ಗೆ ಇನ್ನೂ ಹೆಚ್ಚಿನ ಅನುದಾನ ಕೊಡಬೇಕಿತ್ತು ಎನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲಿಚ್ಛಿಸುತ್ತೇನೆ. ತಾವು ತೆರಿಗೆಯ ಸರಳೀಕರಣವನ್ನು ಮಾಡಿರುವುದನ್ನು ಸ್ವಾಗತಿಸುತ್ತಾ, ಮಧ್ಯಮ ವರ್ಗ ಹಾಗೂ ಬಡವರ್ಗದವರು ಉಪಯೋಗಿಸುವಂಥ ಚಹಾ, ಮೈದಾ, ಔಷಧ, ಕನ್ನಡಕ, ಪಾದರಕ್ಷೆ, ಸೈಕಲ್ ಇತ್ಯಾದಿಗಳ ಮೇಲೆ ತೆರಿಗೆಯನ್ನು ಏರಿಸಿದ್ದು ಸರಿಯಲ್ಲ. ಆ ತೆರಿಗೆಯನ್ನು ಕಡಿಮೆಗೊಳಿಸಬೇಕು ಎನ್ನುವ ವಿನಂತಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಕಳೆದ ಸಲ ಕೆ. ಇ. ಬಿ. ಯಲ್ಲಿ 1,200 ಕೋಟಿ, ಕೆ. ಎಸ್. ಆರ್. ಟಿ. ಸಿ. ಯಲ್ಲಿ 300 ಕೋಟಿ ಏರಿಸಿದ್ದರೂ ಈ ಸಂದರ್ಭದಲ್ಲಿ 230 ಕೋಟಿಯನ್ನು ಏರಿಸುವುದು ಸರಿಯಲ್ಲ. ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕು ಎನ್ನುವ ವಿನಂತಿಯನ್ನೂ ಸಹ ಮಾಡಲು ಇಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ಹೆಚ್ಚು ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುತ್ತಿರುವಂತಹ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಡುವಂಥ ಯಾವ ನೀತಿಯೂ ಸಹ ನಮ್ಮ ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಉದ್ಯಮದಿಂದ ಕನಿಷ್ಟ 5 ಲಕ್ಷ ಜನರಿಗೆ ಉದ್ಯೋಗ ಸಿಗುತ್ತಿದೆ. ಒರಿಸ್ಸಾದಂತಹ ರಾಜ್ಯ ಇದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಲು ತೆರಿಗೆ ವಿನಾಯಿತಿಯನ್ನು ಕೊಡುವ ಮೂಲಕ ಬೀಡಿ ಉದ್ಯಮವನ್ನು ಆಕರ್ಷಣೆ ಮಾಡುವಂಥ ಪ್ರಯತ್ನವನ್ನು ಮಾಡುತ್ತಿದೆ. ನಮ್ಮ ರಾಜ್ಯದಲ್ಲಿ ಹಲವು ಲಕ್ಷ ಜನ ಬೀಡಿ ಕಾರ್ಮಿಕರು ದಿವಸಕ್ಕೆ 40 ರೂಪಾಯಿ ಸಂಪಾದನೆ ಮಾಡುವಂಥ .ಹಿನ್ನೆಲೆಯಲ್ಲಿ ಈ ಬೀಡಿ ಉದ್ಯಮ ಕರ್ನಾಟಕದಿಂದ ಯಾವುದೇ ಕಾರಣಕ್ಕೆ ಒರಿಸ್ಸಾ ಅಥವಾ ಇನ್ನಿತರ ರಾಜ್ಯಗಳಿಗೆ ಹೋದಲ್ಲಿ ಅನಂತರ ಅಪಾಯ ಬರಬಹುದು ಎನ್ನುವುದನ್ನೂ ಕೂಡ ತಾವು ಗಂಭೀರವಾಗಿ ಚಿಂತನೆ ಮಾಡಬೇಕು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಸಿಗರೇಟ್ ಫಿಲ್ಟರ್‌ಗಳು ಮತ್ತು ಸಿಗರೇಟಿನ ಮೇಲಿನ ತೆರಿಗೆಯನ್ನು ಶೇ. 12 ರಿಂದ 10ಕ್ಕೆ ಇಳಿಸಿದ್ದೀರಿ. ಆದರೆ ಬೀಡಿ ಉದ್ಯಮಕ್ಕೆ ಯಾವುದೇ ರೀತಿಯಾದಂಥ

ಪ್ರೋತ್ಸಾಹವನ್ನು ತಾವು ಕೊಟ್ಟಿಲ್ಲ. ಇದನ್ನು ತಾವು ಕೊಡಬೇಕು ಎನ್ನುವ ವಿನಂತಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಚಹಾಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಶೇ. 8 ರಷ್ಟು ಮಾರಾಟ ತೆರಿಗೆ, ಟರ್ನೋವರ್ ಟ್ಯಾಕ್ಸ್ ಮತ್ತು ಕೇರಳ ಅಥವಾ ಇನ್ನೊಂದು ರಾಜ್ಯದಿಂದ ತರಿಸುವಂಥ ಸಂದರ್ಭದಲ್ಲಿ ಆ ಟ್ಯಾಕ್ಸ್‌ಗಳನ್ನೂ ಕಟ್ಟಿದಾಗ ಒಂದು ಕೆ.ಜಿ. ಚಹಾಕ್ಕೆ ನೂರು ರೂಪಾಯಿಯಾದರೆ 15 ರೂಪಾಯಿಗಳಷ್ಟು ತೆರಿಗೆಯನ್ನು ಕಟ್ಟಬೇಕಾಗುತ್ತದೆ. ಬಡವರ ಪಾನೀಯವಾದ ಚಹಾಕ್ಕೆ ಶೇ. 8 ರಿಂದ 4ಕ್ಕೆ ತೆರಿಗೆ ವಿನಾಯಿತಿ ಕೊಡಬೇಕು. ಹಾಗೂ ಟರ್ನೋವರ್ ಟ್ಯಾಕ್ಸ್ ಅನ್ನು ರದ್ದುಗೊಳಿಸಬೇಕು ಎನ್ನುವ ವಿನಂತಿಯನ್ನೂ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಪ್ರಿಂಟಿಂಗ್ ಎನ್ನುವುದು ಒಂದು ಕಲೆ. ಹಾಗೂ ಒಂದು ಉದ್ಯೋಗ. ಇದರಲ್ಲಿ ನೈಪುಣ್ಯತೆಯನ್ನು ಮಾಡಿ ಜಾಬ್ ವರ್ಕ್‌ಗಳನ್ನೂ ಮಾಡಬಹುದು. ಇಂಥ ಸಂದರ್ಭದಲ್ಲಿ ಪ್ರಿಂಟಿಂಗ್ ಮೇಲೆ ಹಾಕಿದ ತೆರಿಗೆ ಸರಿಯಲ್ಲ. ಇದನ್ನು ರದ್ದುಗೊಳಿಸಬೇಕಾಗಿ ವಿನಂತಿಯನ್ನು ಕೂಡ ಮಾಡುತ್ತಿದ್ದೇನೆ. ಮತ್ತು ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಖಂಡಿತವಾಗಿ ಸಂವಿಧಾನಿಕ ಚೌಕಟ್ಟಿನಲ್ಲಿ ಬರುವುದಿಲ್ಲ. ಹಿಂದೆ ಸರ್‌ಚಾರ್ಜನ್ನು ರದ್ದುಗೊಳಿಸಿ ಶಹಭಾಸ್‌ಗಿರಿಯನ್ನು ಪಡೆದಂಥ ನಮ್ಮ ರಾಜ್ಯ ಸರ್ಕಾರ, ಈ ಸಂದರ್ಭದಲ್ಲಿ ಹಿಂಬದಿಯಿಂದ ಶೇಕಡಾ 0.5 ರಷ್ಟು ಸರ್‌ಚಾರ್ಜ್‌ನ್ನು ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಮೂಲಕ ತರುವಂಥ ಒಂದು ವಿಶೇಷ ಪ್ರಯತ್ನ ಮಾಡುತ್ತಿದೆ. ಅದನ್ನು ತಾವು ಹಿಂತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ಎಂ.ಆರ್.ಪಿ.ಎಲ್ ನಂಥ ದೊಡ್ಡ ದೊಡ್ಡ ಮೆಗಾ ಇಂಡಸ್ಟ್ರೀಸ್‌ಗಳು ಯಾವುವಿವೆ ಅವು 400-500 ಕೋಟಿ ರೂಪಾಯಿಗಳಷ್ಟು ಸೇಲ್ಸ್ ಟ್ಯಾಕ್ಸ್ ಎಕ್ಸಂಪ್‌ಷನ್ ಪಡೆಯುತ್ತಿವೆ. ಅಂಥ ಕೈಗಾರಿಕೆಗಳ ಮೇಲೆ ಖಂಡಿತವಾಗಿ ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಅನ್ನು ಹಾಕಿ, ಅದು ಸ್ಥಳೀಯ ಆಡಳಿತಕ್ಕೆ ಬರುವ ರೀತಿಯಲ್ಲಿ ತಾವು ಸಹಕಾರವನ್ನು ಕೊಡಬೇಕು ಎನ್ನುವ ವಿನಂತಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ರಾಜ್ಯದ ಅನೇಕ ಗ್ರಾಮಗಳಿಗೆ ಇವತ್ತಿಗೂ ಕೂಡ ಬಸ್ ಸಂಚಾರ ಸರಿಯಾಗಿ ಆಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಖಾಸಗಿಯವರು ಗ್ರಾಮೀಣ ಪ್ರದೇಶಗಳಿಗೆ ಬಸ್ಸುಗಳನ್ನು ಹಾಕಿದಲ್ಲಿ ಅವರಿಗೆ ಶೇ. 50 ರಷ್ಟು ತೆರಿಗೆ ವಿನಾಯಿತಿ ನೀಡುವಂಥ ಪ್ರೋತ್ಸಾಹವನ್ನು ತಾವು ನೀಡಬೇಕು. ಈ ಮೂಲಕ ಕನಿಷ್ಠ ಸೌಲಭ್ಯವಾದ ಬಸ್ ಸಂಚಾರವನ್ನು ಒದಗಿಸುವಂಥ ಸಹಕಾರವನ್ನು ಸರ್ಕಾರ ಕೊಡಬೇಕು ಎಂದು ವಿನಂತಿ ಮಾಡುತ್ತೇನೆ. ಅದೇ ರೀತಿ, ನಾನ್-ಟ್ಯಾಕ್ಸ್ ರೆವಿನ್ಯೂವನ್ನು ಹೆಚ್ಚಿಸುವಲ್ಲಿ ಸರ್ಕಾರದ ಪ್ರಯತ್ನ ಖಂಡಿತಾ ಸಾಲದು. ಈ ನಿಟ್ಟಿನಲ್ಲಿ ಪ್ರಯತ್ನಪಟ್ಟಲ್ಲಿ ಗಣಿಗಾರಿಕೆ ನಮಗೆ ಹೆಚ್ಚು ಶಕ್ತಿ ಕೊಡಬಲ್ಲದು ಎನ್ನುವುದನ್ನು ತಿಳಿದುಕೊಂಡಿದ್ದೇನೆ. ಅದೇ ರೀತಿ ಅಡಿಕೆಯಂಥ ಸಾಮಾಗ್ರಿಗಳು ಮಂಗಳೂರಿನಿಂದ ಗುಜರಾತಿನ ಜಾಮ ನಗರದವರೆಗೆ ಚೆಕ್‌ಪೋಸ್ಟ್‌ಗಳಲ್ಲಿ ಮಾಮೂಲು ಕೊಟ್ಟು ರಾಜಾರೋಶವಾಗಿ ಟ್ಯಾಕ್ಸ್‌ನ್ನು ಅವಾಯ್ಡ್ ಮಾಡಿಕೊಂಡು ಹೋಗುತ್ತಿವೆ. ಅದೇ ರೀತಿ, ಗುಟ್ಕಾ ರೆಕ್ಟಿಫೈಡ್ ಸ್ಪಿರಿಟ್‌ಗಳು ಕೋಟ್ಯಾಂತರ ರೂಪಾಯಿಗಳನ್ನು ವಂಚನೆ ಮಾಡುತ್ತವೆ. ಈ ಕಾರಣಕ್ಕೋಸ್ಕರ ನಮ್ಮ ಚೆಕ್ ಪೋಸ್ಟ್‌ಗಳನ್ನು ಸುಧಾರಣೆ ಮಾಡುವಂಥಾದ್ದರಲ್ಲಿ ಅದನ್ನು ಕಂಪ್ಯೂಟರೀಕರಣಗೊಳಿಸಬೇಕು ಮತ್ತು ಯೋಗ್ಯ ಅಧಿಕಾರಿಗಳನ್ನು ನೇಮಕ ಮಾಡಿ ತೆರಿಗೆಯನ್ನು ಸಂಪಾದಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ವಿನಂತಿಯನ್ನೂ ಕೂಡ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಸರ್ಕಾರ ಒಂದು ಯೋಚನೆ ಮಾಡಿದೆ, 1998ರ ಮೇನಲ್ಲಿ ಬಂಡವಾಳ ಹೂಡಿಕೆದಾರರ ವಿಶ್ವ ಸಮ್ಮೇಳನ ನಡೆಸುವ ಬಗ್ಗೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಲು ನಾನು ಇಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ 1,500

ಕೋಟಿ ರೂಪಾಯಿಗಳಷ್ಟು ವಿದೇಶೀ ನೆರವನ್ನು ವಿದ್ಯುತ್ ಯೋಜನೆಗೆ ನೇರವಾಗಿ ಪಡೆಯುವುದರ ಬಗ್ಗೆ ಸ್ವಾತಂತ್ರ್ಯವನ್ನು ಕೊಟ್ಟಿರುವುದನ್ನು ಈ ಸಂದರ್ಭದಲ್ಲಿ ನಾನು ಸ್ವಾಗತಿಸುತ್ತೇನೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಈ ಒಂದು ಕೊಡುಗೆಯನ್ನು ಕೊಟ್ಟಿದೆ. ಇದರ ಉಪಯೋಗವನ್ನು ರಾಜ್ಯ ಸರ್ಕಾರ ಮಾಡಿಕೊಳ್ಳಬೇಕಾಗಿದೆ. ಇಂಥ ಸಂದರ್ಭದಲ್ಲಿ ಕೋಜೆಂಟ್ರಿಕ್ಸ್‌ನಂಥ ಅಸಮರ್ಥ, ಭ್ರಷ್ಟ ಸಂಸ್ಥೆಯನ್ನು ಆಯ್ಕೆ ಮಾಡದೇ, ನಿಜವಾಗಿ ಆರ್ಥಿಕ ಶಕ್ತಿಯನ್ನು ಹೊಂದಿರುವಂಥ ವಿದ್ಯುಚ್ಛಕ್ತಿ ತಯಾರಿಕೆಯಲ್ಲಿ ಅನುಭವ ಸಾಮರ್ಥ್ಯ ಹೊಂದಿದ ಕಂಪೆನಿಗಳೊಡನೆ ವ್ಯವಹಾರ ಮಾಡುವುದು ಸೂಕ್ತ ಎಂದು ವಿನಂತಿಯನ್ನು ಮಾಡುತ್ತೇನೆ. ರಾಜ್ಯ ಸರ್ಕಾರದ ಜೊತೆಗೆ ಒಪ್ಪಂದ ಮಾಡುವಾಗ ಜನರಲ್ ಎಲೆಕ್ಟ್ರಿಕಲ್ಸ್ ಎಂದು ಅಮೇರಿಕಾದ ದೊಡ್ಡ ಕಂಪನಿಯನ್ನು ತೋರಿಸಿ ಒಪ್ಪಂದವಾದ ನಂತರ ಜೈನ ವ್ಯಾಲ್ ಕಂಪನಿ ಜೊತೆಗೆ ಒಪ್ಪಂದ ಮಾಡಿದಂತಹ ಕಂಪನಿ, ಅವರ ಪಾಲುದಾರಿಕೆ ತೋರಿಸಿದಂತಹ ಕಂಪನಿ ಯಾವ ರೀತಿಯಲ್ಲಿ 100 ಕೋಟಿ ರೂಪಾಯಿಗಳನ್ನು ತಮ್ಮ ಬಜೆಟ್‌ನಲ್ಲಿ ತೋರಿಸಿ ಅದರ ನಂತ ಅನುಷ್ಠಾನಕ್ಕೆ ತರದೆ ಅದನ್ನು ವಿವರಣೆ ಕೇಳಿದಾಗ ಅದು ಇರಲ್ಲ ಕಾರ್ಯರೂಪಕ್ಕೆ ಬಂದಿದೆ ಎಂದು ಹೇಳಿದಾಗ ವಿವರಣೆ ಕೊಡುವುದಕ್ಕೆ ಅಸಮರ್ಥರಾಗಿ ಹೈಕೋರ್ಟಿನಿಂದ ತನಿಖೆ ನಡೆಸಿ, ಸಿ ಬಿ ಐ ಯಿಂದ ತನಿಖೆ ನಡೆಸುವಂಥ ಆಜ್ಞೆಯಾದಂತಹ ಸಂದರ್ಭದಲ್ಲಿ ಬಹುಶ: ಇದು ಒಂದು ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯನ್ನು ತಂದು ಕೊಟ್ಟಿದೆ. ರಾಜ್ಯ ಸರ್ಕಾರದ ಆಡಳಿತದ ಮೇಲೆ ಪ್ರತಿಬಿಂಬಿಸುತ್ತಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಹೇಳುತ್ತಿದ್ದೇನೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಥಾರ್‌ಮೋಸ್ಟ್ ವಿದ್ಯುತ್ ಘಟಕಗಳ ಆಯ್ಕೆ ಕೂಡ ಇದೇ ರೀತಿ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಸಂಗ್ರಹಿಸಿದ ಮಾಹಿತಿಯ ಪ್ರಕಾರ ಪಿ ಪಿ ಎ ಸೈನ್ ಮಾಡಿದ ನಾಲ್ಕು ಕಂಪನಿಗಳಲ್ಲಿ ಮೆಸರ್ಸ್ ಸಿತ್ ಕೋ ಜನರೇಷನ್ ಮಾತ್ರ ಡಾಮಿನೇಟ್ ಗಣರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸಿದ ಹಿನ್ನೆಲೆ ಇದೆ. ಯೂನಿವರ್ಸಲ್ ವಾಟರ್ ಅಂಡ್ ಕಂಪನಿ, ಶಿಕಾಗೋ ಪವರ್ ಅಂಡ್ ಕಂಪನಿ, ಮೆಸರ್ಸ್ ನ್ಯಾರೋ ಅಂಡ್ ಕ್ಯಾಪಿಟಲ್ ಕಂಪನಿಗಳು ಕೇವಲ ಬ್ರೋಕರ್ಸ್ ಮಾತ್ರ. ನಾನು ರಾಜ್ಯ ಸರ್ಕಾರಕ್ಕೆ ಸ್ಪಷ್ಟವಾಗಿ ವಿನಂತಿ ಮಾಡುತ್ತೇನೆ, ಯಾವುದೇ ಬ್ರೋಕರ್ ಇಟ್ಟುಕೊಂಡು ವ್ಯವಹಾರ ಮಾಡಬೇಡಿ. ಬ್ರೋಕರ್ ಇಟ್ಟು ವ್ಯವಹಾರ ಮಾಡಿ ರಾಜ್ಯಕ್ಕೆ ಕೆಟ್ಟ ಹೆಸರನ್ನು ತರುವಂಥದ್ದಕ್ಕೆ ಪ್ರಯತ್ನ ಮಾಡಬೇಡಿ ಎಂದು ವಿನಂತಿ ಕೂಡ ಮಾಡುತ್ತೇನೆ. ವಿಶೇಷವಾಗಿ ಪುಟ 9 ರಲ್ಲಿ 17 ನೇ ಐಟಂ ವಿದೇಶಿ ನೆರವಿನ ಯೋಜನೆ ಬಗ್ಗೆ, ಡೆನಿಡಾ ಯೋಜನೆ ಬಗ್ಗೆ ಈಗಾಗಲೇ ಕಾರ್ಯರೂಪಕ್ಕೆ ಬಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 100 ಕೋಟಿಯ ಸಮಗ್ರ ನೀರು ಸರಬರಾಜು ಯೋಜನೆ ಹಾಗೂ ಇನ್ನಿತರ ಅಭಿವೃದ್ಧಿ ಚಟುವಟಿಕೆಗಳಿಗೋಸ್ಕರ ಅನುದಾನ ರೂಪದ ಹಾಗೂ ಸಾಲದ ರೂಪದಲ್ಲಿ ಸಹಾಯ ಕೊಡುವ ಆಶ್ವಾಸನೆ ಉಂಟಾಗಿತ್ತು. ಇಷ್ಟು ಇದ್ದರೂ ಕೂಡ ಯಾವುದೇ ಒಂದು ಕಾರಣಕ್ಕೆ ಈ ಒಪ್ಪಂದ ಬಿದ್ದು ಹೋಯಿತು. ಎಡಿಬಿ ಮತ್ತು ವಿಶ್ವಬ್ಯಾಂಕ್ ಜೊತೆಯಲ್ಲಿ ಸಹಕಾರಕ್ಕಾಗಿ ಸರ್ಕಾರದ ಮಟ್ಟದಲ್ಲಿ ಅನೇಕ ಮಾತುಕತೆಗಳು ನಡೆಯುವಂತಹ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ. ಡೆನಿಡಾ ಸ್ಕೀಮ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನ ಆಗುವುದರಲ್ಲಿ ವಿಫಲವಾಗುವುದಕ್ಕೆ ಮುಖ್ಯ ಕಾರಣವೇನೆಂದರೆ, ಇವೆಲ್ಲಾ ಯೋಜನೆಗಳು ಸರ್ಕಾರದ ಯೋಜಿತ ಸಂಸ್ಥೆ ಯಾವುದು ಇದೆ ಅದರ ಮೂಲಕ ಆಗಬೇಕೆಂದು ಒತ್ತಾಯ ಆ ಸಂದರ್ಭದಲ್ಲಿ ಆಗಿತ್ತು. ಆದರೆ ಡೆನಿಡಾ ಸಂಸ್ಥೆ ಎನ್‌ಜಿ ಒ ಮೂಲಕ ಮಾಡಿದಂತಹ ಒಂದು ಮಾತನ್ನು ಒತ್ತಾಯ ಮಾಡಿದಾಗ

ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಇಂತಹ ಅವ್ಯವಹಾರ ಇದರಲ್ಲಿ ಇದೆ ಇದರ ಬಗ್ಗೆ ಹೆಚ್ಚಿನ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಪುಟ 30, ಕಂಡಿಕೆ 80-81 ರಲ್ಲಿ ಹಾಸ್ಟೆಲ್‌ಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಮಂಗಳೂರು ಕ್ಷೇತ್ರದಲ್ಲಿ ಒಂದು ಉದಾಹರಣೆ ಕೊಡುತ್ತಿದ್ದೇನೆ, 35 ಲಕ್ಷ ರೂಪಾಯಿ ಖರ್ಚು ಮಾಡಿದಂತಹ ಒಂದು ಹಾಸ್ಟೆಲ್ ಯಾವುದು ಇದೆ, ಕಳೆದ ಮೂರು ವರ್ಷಗಳಿಂದ ನಾನು ಈ ಸದನದಲ್ಲಿ ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದೇನೆ, ನಾಲ್ಕು ಜನ ಮಂತ್ರಿಗಳು ಅದಕ್ಕೆ ಭೇಟಿ ಮಾಡಿದ್ದಾರೆ. ನವೀಕರಣ ಮಾಡುವ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಇವತ್ತಿಗೂ ಕೂಡ ಭೂತ ಬಂಗಲೆಯಾಗಿದೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ಉಪಯೋಗವಾಗುವ ಸ್ಥಿತಿಯಲ್ಲಿಲ್ಲ. ಇದು ಸರ್ಕಾರದ ಆಡಳಿತದ ದುರ್ವರ್ತನೆ ಇದೆ ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಕ್ಷಣ ಸರಿಪಡಿಸಬೇಕು. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಈ 32 ಲಕ್ಷ ರೂಪಾಯಿ ಖರ್ಚು ಮಾಡಿದಂತಹ ಈ ಕಟ್ಟಡದ ನವೀಕರಣಗೊಳಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಪುಟ 42 ಕಂಡಿಕೆ 121 ರಲ್ಲಿ ಯುವ ಜನ ಸೇವೆ ಮತ್ತು ಕ್ರೀಡೆಗೆ ಸಂಬಂಧಪಟ್ಟ ಹಾಗೆ ಸಿಂಗಲ್ ಟ್ರ್ಯಾಕಿನ ಬಗ್ಗೆ ಒಪ್ಪಿಗೆ ಕೊಟ್ಟಿದ್ದರೂ ಕೂಡ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ವಿದೇಶಿಗಳಿಗೆ ಹೋಗುವಂತಹ, ಸಿಲ್ವರ್ ಮೆಡಲ್ ಮತ್ತು ಗೋಲ್ಡ್ ಮೆಡಲ್ ಪಡೆಯುವಂತಹ ಕ್ರೀಡಾ ಪಟುಗಳಿಗೆ ಸರ್ಕಾರದ ಕಡೆಯಿಂದ ಪ್ರೋತ್ಸಾಹ ಕೊಡುವುದಕ್ಕಾಗುತ್ತಿಲ್ಲ. ಕಂಡಂತಹ ಕ್ರೀಡಾ ಪಟುಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಡಾ|| ಶಿವರಾಮ ಕಾರಂತರ ಬಗ್ಗೆ ಇವರು ಉಲ್ಲೇಖ ಮಾಡಿದ್ದಾರೆ, ಈ ಸಂದರ್ಭದಲ್ಲಿ ನಾನು ಕೇಳುವುದು, ವಿಶ್ವವಿದ್ಯಾನಿಲಯ ಇರುವಂಹ ಅಧ್ಯಯನ ಪೀಠ ಡಾ: ಶಿವರಾಮ ಕಾರಂತರ ಅಧ್ಯಯನ ಪೀಠದಲ್ಲಿ 1994-95, 1995-96, ಮತ್ತು 1996-97 ಕ್ಕೆ ವಾರ್ಷಿಕವಾಗಿ 10 ಲಕ್ಷ ರೂಪಾಯಿ ಅನುದಾನ ಕೊಡುವ ಆಶ್ವಾಸನೆ ಬಂದಿತ್ತು. ಆದರೆ ಈ ನಾಲ್ಕು ವರ್ಷಗಳಲ್ಲಿ ಕೊಟ್ಟಿರುವ ಅನುದಾನ ಐದು ಲಕ್ಷ ರೂಪಾಯಿಗಳು ಮಾತ್ರ. ಇಂಥ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಹಾಕುವಾಗ ಕನಿಷ್ಟ ಕೊಡಬೇಕಾದ ಅನುದಾನವಾದರೂ ಸೂಕ್ತ ಸಮಯದಲ್ಲಿ ಕೊಡುವಂತಹ ವಿಶ್ವಾಸವನ್ನು ಸರ್ಕಾರ ತೋರಿಸಬೇಕೆಂದು ವಿನಂತಿ ಮಾಡುತ್ತೇನೆ. ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ, ನಾನು ತಮ್ಮಲ್ಲಿ ಸೂಚನೆ ಮಾಡುವುದು ನಮ್ಮ ಡಾ: ಹೆಚ್.ಸಿ. ಮಹದೇವಪ್ಪ, ಮತ್ತು ಡಾ: ಶಂಕರನಾಯಕ್ ಅವರಲ್ಲಿ ಒಂದು ಕೋ ಆರ್ಡಿನೇಷನ್ ತರುವ ಪ್ರಯತ್ನ ಮಾಡಿ. ಏಕೆಂದರೆ ಒಂದೂವರೆ ಕೋಟಿ ರೂಪಾಯಿ ನಮ್ಮ ಕ್ಲೀನಿಕಲ್ ಫೀಸ್‌ನಿಂದ ಸಂಗ್ರಹವಾಗಿದೆ. ಅದನ್ನು ಯುಟಲೈಸ್ ಮಾಡುವುದಕ್ಕೆ ಪರವಾನಗಿ ಕೊಡುವುದಕ್ಕೆ ಮೂರು ವರ್ಷವಾಗಿದೆ, ಈ ಎರಡೂ ಇಲಾಖೆಗಳು ಯಾವುದಿದೆ, ಅದರಲ್ಲಿ ಕೋ-ಆರ್ಡಿನೇಷನ್ ತಂದಲ್ಲಿ ಏನಾದರೂ ಒಳ್ಳೆಯದಾಗಬಹುದು ಎಂದು ನನ್ನ ಅನಿಸಿಕೆ. ಇವತ್ತೂ ಕೂಡ ಆಸ್ಪತ್ರೆಯಲ್ಲಿ ಸಂದರ್ಶನ ಮಂಡಳಿಗಳನ್ನು ಮಾಡುವುದಕ್ಕೆ ವಿಫಲರಾಗಿದ್ದಾರೆ. ಜನರನ್ನು ಸ್ಪಂದಿಸತಕ್ಕಂತಹ ಯಾವ ಕ್ಷೇತ್ರಗಳು ಇವೆ, ಆಡಳಿತ ಕ್ಷೇತ್ರದಲ್ಲಿ ಅಲ್ಲಿ ಈ ರೀತಿ ಸಂದರ್ಶನ ಮಂಡಳಿ ಅಥವಾ ನಾಗರೀಕ ಸಲಹಾ ಸಮಿತಿಯನ್ನು ಖಂಡಿತ ಮಾಡಬೇಕೆಂದು ಒತ್ತಾಯ ಮಾಡುತ್ತಾ, ಮಲೇರಿಯಾಗೆ ಸಂಬಂಧಪಟ್ಟ ಹಾಗೆ, ಬಹುಶ: 12 ಕೋಟಿ ರೂಪಾಯಿ ಕೇಂದ್ರ ಅನುದಾನ ಸಿಗುತ್ತಿದೆ, ಏಳು ಕೋಟಿ ರೂಪಾಯಿ ಬೆಂಗಳೂರು ಮೈಸೂರು

ರಸ್ತೆಯಲ್ಲಿ ಬರುವ ವೃಶಭಾವತಿ ನದಿಗೆ ಡಿಡಿಟಿ ಹಾಕುವುದಕ್ಕೆ ಇವರ ಹತ್ತಿರ ಇದೆ. ಹೆಬ್ಬಾಳ ಕೆರೆ ಶುಚಿತ್ವಗೊಳಿಸುವುದಕ್ಕೆ ಐದು ಕೋಟಿ ರೂಪಾಯಿ ಇದೆ, ಈ 12 ಕೋಟಿ ಅನುದಾನವನ್ನು ಮಂಗಳೂರಿನಲ್ಲಿರುವವರಿಗೂ ಖರ್ಚು ಮಾಡಲಿಲ್ಲ, 22 ಜನ ಸತ್ತಿದ್ದಾರೆ, ಅಷ್ಟು ಮಾತ್ರವಲ್ಲ, 2,200 ಜನರು ಇರತಕ್ಕಂಥ ಸ್ಥಳದಲ್ಲಿ ಒಂದು ಕೇಂದ್ರ, ನಗರ ಮಲೇರಿಯಾ ನಿಯಂತ್ರಣ ಘಟಕವನ್ನು ಕೊಡುವುದಕ್ಕೆ ನಿಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ತಕ್ಷಣ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ನನಗೆ ಸಿಕ್ಕಿರುವ ಕಂಪ್ಲೆಂಟ್ ಪ್ರಕಾರ ಇವತ್ತು ಅಲ್ಲಿ ಯಾವ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ, ತುಂಬ ಕಳಪೆ ಮಟ್ಟದ ಅಕ್ಕಿ ಇದೆ, ಆದ್ದರಿಂದ ಅದನ್ನು ಸುಧಾರಿಸುವ ವ್ಯವಸ್ಥೆಯನ್ನು ತಾವು ಮಾಡಿಕೊಳ್ಳಬೇಕು. ಅಷ್ಟು ಮಾತ್ರವಲ್ಲ ಬಡವರಿಗೆ ಸಹಾಯವಾಗುವ ರೀತಿಯಲ್ಲಿ ಕ್ವಾಲಿಟಿ ಫುಡ್ ಐಟ್ಸಂ ಕೊಡುವಂಥದ್ದನ್ನು ಪ್ರಾರಂಭ ಮಾಡುವುದಕ್ಕೆ , ಮತ್ತು ವಿಶೇಷವಾಗಿ ನಮ್ಮ ಅನಾಥಾಶ್ರಮಗಳಿಗೆ ಸಿಗುವಂತಹ ಖೋಟಾ ಉತ್ತಮವಾದ ಖೋಟಾ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತಾ, ಪುಟ 44 ರಲ್ಲಿ ಒಳ್ಳೆಯ ಅಂಶ ಉಲ್ಲೇಖ ಮಾಡಿದ್ದಾರೆ. ಆಡಳಿತ ಜನರ ಸಮೀಪಕ್ಕೆ ಒಯ್ಯಲು ಜನತೆಗೆ ಸ್ಪಂದಿಸುವಂತಹ ಆಡಳಿತ ನೀಡುವುದು ಸರ್ಕಾರದ ಇಚ್ಛೆ, ಅದು ಪ್ರಕಟ ಕೂಡ ಆಗಿದೆ. ಅದನ್ನು ನಾನು ಈ ಸಂದರ್ಭದಲ್ಲಿ ಹೇಳುವುದು ನೇರವಾಗಿ ಒಂದು ಪತ್ರ ಯಾರೋ ಒಬ್ಬ ಅಧಿಕಾರಿಗೆ ಅಥವಾ ಮಂತ್ರಿಗಳಿಗೆ ಬರೆದರೆ ಸೆಂಟ್ರಲ್ ಡಿಸ್‌ಪ್ಯಾಚ್ ಸೆಕ್ಷನ್‌ಗೆ ಬರುತ್ತದೆ, ಇಲ್ಲಿಂದ ಟಪಾಲ್ ಸೆಕ್ಷನ್‌ಗೆ ಹೋಗಿ ಕನ್‌ಸರ್ನ್ಡ್ ಕೇಸ್ ವರ್ಕರ್‌ಗೆ ಹೋಗಿ, ಸೆಕ್ರೆಟರಿಗೆ ಹೋಗಿ, ಮಂತ್ರಿಗಳಿಗೆ ಹೋಗಬೇಕಾದರೆ ಕನಿಷ್ಟ 35 ರಿಂದ 40 ದಿನಗಳಾಗುತ್ತವೆ. ಕನಿಷ್ಟ ಫೈಲ್ ಯಾವುದಿದೆ, ಅಥವಾ ಕರೆಸ್‌ಪಾಂಡೆನ್ಸ್ ಯಾವುದು ಇದೆ ಅದನ್ನು ಆದರೂ ಸ್ವಲ್ಪ ಸಿಂಪ್ಲಿಫೈ ಮಾಡಿ, ತೆರಿಗೆ ಸರಳೀಕರಣ ಮಾತ್ರವಲ್ಲ, ಆಡಳಿತಾತ್ಮಕ ಸರಳೀಕರಣ ಮಾಡಿ ಡಿಸ್‌ಪ್ಯಾಚ್ ಆಗಿ ತಕ್ಷಣ ಸ್ಪಂದಿಸುವ ಕಾರ್ಯಕ್ರಮ ಹಾಕಿ, ಅದರಿಂದ ಹೆಚ್ಚು ಉಪಯುಕ್ತವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಹಾನಗರ ಪಾಲಿಕೆಯಿಂದ ಕರೆಸ್ ಪಾಂಡೆನ್ಸ್ ಮಾಡಿದರೂ ಉತ್ತರ ಕೊಡುವ ಸ್ಥಿತಿಯಲ್ಲಿ ನಮ್ಮ ಸರ್ಕಾರ ಇಲ್ಲ. ಮೂಡಾ ಸಂಸ್ಥೆ ಸುಮಾರು 50 ಕ್ಕಿಂತ ಕಡಿಮೆ ಇರುವ ಜೋನಲ್ ವಲಯ ಯಾವುದಿದೆ, ಅದನ್ನು ಕನ್‌ವರ್ಷನ್ ಮಾಡುವುದಕ್ಕೆ ಅಲ್ಲಿಯ ಅಧ್ಯಕ್ಷರಿಗೆ ಮತ್ತು ಸಮಿತಿಗೆ ಅವಕಾಶವಿದೆ. ಇಂತಹ ಸಮಯದಲ್ಲಿ ಕೂಡ ಅವರು ಅದನ್ನು ಯಾವುದನ್ನು ಶಿಫಾರಸ್ಸು ಮಾಡಿದರೆ ಇಲ್ಲಿ ಮೂಡಾದವರಿಗೆ ಬಂದರೆ ಸುಮಾರು 6-7 ತಿಂಗಳು ಮಾಡಿ ಅದನ್ನು ಕೊನೆಗೆ ತಿರಸ್ಕಾರ ಮಾಡುತ್ತಾರೆ. ರಿಜೆಕ್ಟ್ ಆದ ನಂತರ ಕೊನೆಯದಾಗಿ ಅವರು ಯಾವ ರೀತಿ ಯೋಚನೆ ಮಾಡುತ್ತಾರೆ, ಅಪೀಲ್ ನಮ್ಮ ಮಂತ್ರಿಗಳಿಗೆ ಹೋಗಬೇಕು. ಅಂತಹ ಒಂದು ಪರಿಸ್ಥಿತಿಯನ್ನು ಖಂಡಿತ ತರಬೇಡಿ. ಅದಕ್ಕಿಂತ ನೇರವಾಗಿ ಎಲ್ಲಾ ಆಡಳಿತ ಜವಾಬ್ದಾರಿ ಅಧಿಕಾರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳಿ, ಒತ್ತಾಯ ಮಾಡುತ್ತಾ, ಕೊನೆಯದಾಗಿ ನಾವು ಇತ್ತೀಚೆಗೆ ಕಾಶ್ಮೀರ ಮತ್ತು ಶ್ರೀ ನಗರದ ಪ್ರವಾಸ ಮಾಡುವ ಸಂದರ್ಭದಲ್ಲಿ ಶ್ರೀ ನಗರ, ಪಾಕಿಸ್ತಾನದ ಬಾರ್ಡರ್ ಮತ್ತು ಚೈನಾ ಬಾರ್ಡರ್‌ನಲ್ಲಿ ಕೆಲಸ ಮಾಡುವಂತಹ ನಮ್ಮ ಕನ್ನಡ ನಾಡಿನ ಯುವಕ ಯುವತಿಯರನ್ನು ಗುರುತಿಸುವಂತಹ, ಪರಿಚಯಿಸುವಂತಹ ಅವಕಾಶ ನಮಗೆ ದೊರಕಿತು. ಈ ಸಂದರ್ಭದಲ್ಲಿ ನಮಗೆ ಸಿಕ್ಕಿದ ಮಾಹಿತಿ ಪ್ರಕಾರ ಬಿ ಎಸ್ ಎಫ್, ಐಟಿ ಬಿ ಪಿ ಮತ್ತು ಸಿ ಆರ್ ಪಿ ಎಫ್ ಇದರಲ್ಲಿ ಸುಮಾರು 10,000 ಕನ್ನಡಿಗರು ಸೇವೆ ಸಲ್ಲಿಸುತ್ತಿದ್ದರು. ಮೈನಸ್ ಆರು ಡಿಗ್ರಿ ಸೆಂಟಿಗ್ರೇಡ್‌ನ ಚಳಿಯಲ್ಲಿ ಕೂಡ ಎಲ್ಲಾ ಅಪಾಯಗಳನ್ನು ಎದುರಿಸಿ ಕೆಲಸ ಮಾಡುತ್ತಿದ್ದಾರೆ. ಇಂತಹ

ವ್ಯಕ್ತಿಗಳು, ನಮ್ಮ ತರುಣರು ವರ್ಷದಲ್ಲಿ ಕನಿಷ್ಠ 60 ರಿಂದ 81 ಜನ ಬೇರೆ ಬೇರೆ ಕಾರಣಗಳಿಂದ ಹುತಾತ್ಮರಾಗುತ್ತಾರೆ. ಈ ದೇಶವನ್ನು ರಕ್ಷಣೆ ಮಾಡುವಂತಹ ಇಂತಹ ಯುವಕ ಯುವತಿಯರ ಕುಟುಂಬಕ್ಕೆ ನಮ್ಮ ಸರ್ಕಾರದ ಕಡೆಯಿಂದ ಯಾವುದೇ ರೀತಿಯಿಂದ ಆರ್ಥಿಕ ನೆರವು ಉದ್ಯೋಗ ಹಾಗೂ ಶಿಕ್ಷಣದ ಅವಕಾಶ ಕೊಡುವ ಆಶ್ವಾಸನೆ ಸನ್ಮಾನ್ಯ ಸಚಿವರು ಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಈಗ 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಸನ್ಮಾನ್ಯ ಸದಸ್ಯರಾದ ರಾಜಣ್ಣನವರು ಮಾತನಾಡಬೇಕೆಂದು ಕೋರುತ್ತೇನೆ.

ಶ್ರೀ ಕೆ.ಸಿ. ಪುಟ್ಟಣ್ಣಯ್ಯ :- ಮಾನ್ಯ ಅಧ್ಯಕ್ಷರೆ ತಾವು ಈ ರೀತಿ ಹೇಳಿದ ತಕ್ಷಣ ಬಜೆಟ್ ಮೇಲಿನ ಸಾಮಾನ್ಯ ಚರ್ಚೆ ಮುಗಿಯುತ್ತೇನೋ ಎನ್ನಿಸಿತು.

ಅಧ್ಯಕ್ಷರು :- ಬಜೆಟ್ ಮೇಲಿನ ಭಾಷಣ ಮುಗಿಯಲಿಲ್ಲ, ಈಗ ಪ್ರಾರಂಭವಾಗುತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ಶ್ರೀ ರಾಮರೆಡ್ಡಿಯವರು ತಮ್ಮ ಟ್ರಸ್ ಟೆಡ್ ಫ್ರೆಂಡ್ ರಾಜಣ್ಣನವರು ಏನು?

Mr. Speaker :- I will tell you later.

ಶ್ರೀ ಎನ್. ರಾಜಣ್ಣ (ಭಾರತೀನಗರ):- ಮಾನ್ಯ ಅಧ್ಯಕ್ಷರೆ, ತಾವು ಮೊದಲನೆಯ ಬಾರಿಗೆ 4ನೇ ಬಜೆಟ್ ಮೇಲೆ ಮಾತನಾಡಲು ನನಗೆ /Indian Standard Time 12 ಗಂಟೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಹೃತ್ ಪೂರ್ವಕವಾದ ಅಭಿನಂದನೆಗಳನ್ನು ತಮಗೆ ಸಲ್ಲಿಸುತ್ತೇನೆ. Sun is very near to the equator. I am very grate-ful to the Speaker.

Mr. Speaker :- And also to the equator

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, ಮೊದಲನೆಯ ಬಾರಿಗೆ ಬಜೆಟ್ ಮೇಲೆ ಮಾತನಾಡಲು 12 ಗಂಟೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನನ್ನ ಧನ್ಯವಾದಗಳು ಸರ್ I am very grateful to you. ಇದು ಗೋಲ್ಡನ್ ಜುಬ್ಲಿ ವರ್ಷ ಎಂದು ನಾವು ಬೇರೆಯಾಗಿ ಮಾಡಿಕೊಂಡಿದ್ದೇನೆ. ಆ ಗೋಲ್ಡನ್ ಕಲರ್ ಬಜೆಟ್ ಬುಕ್ ನಮಗೆ ಬಂದಿದೆ. ಬಜೆಟ್ ಬಗ್ಗೆ ಎಲ್ಲ ಹಿರಿಯ ಮುಖಂಡರು ಚರ್ಚೆ ಮಾಡಿದ್ದಾರೆ. ಆದರೆ ಯಾರು ಇದರಲ್ಲಿ ಒಳ್ಳೆಯದು ಮಾಡಿದ್ದಾರೆ ಎಂದು ಹೇಳಲಿಲ್ಲ. Even if you try to search. ಅಂದರೆ, ಊಟ ಮಾಡುವಾಗ ಅನ್ನದಲ್ಲಿ ಕಲ್ಲು ಸಿಗಬಹುದು, ಪಲ್ಯದಲ್ಲಿ ಕಲ್ಲು ಸಿಗಬಹುದು, ಆದರೆ ನೀವು ಮೊಸರಿನಲ್ಲಿ ಕಲ್ಲು ಹುಡುಕುವವರು. Our hon. Chief Minister, Shri J.H. Patel, Hon'ble Finance Minister, Sri Siddaramaiah, with his officers, have taken seriousness to prepare the budget. It is not so easy to prepare a budget. Pandit Jawaharlal Nehru once said: "Planning is application of your intellect to your logical reason and better way of doing things. Whether it is in economics or politics or anything else,

planning is essential." They have done their duty. When the architect, who wants to build a building, sits for months together and applies his mind and then it comes to his mind to write plan. Likewise, I think Mr. Siddaramaiah, our Finance Minister, and the Finance Department have done their wonderful job even though at that particular period we were in the elections. They have done their duty. But there are certain loopholes. We can set right these. You speak about stability. Our Government has got the stability, for five years. Nobody need to bother about that. There is stability in our Finance also. We are trying our level best to tone up the stability in the Administration. 1994-95 ರಲ್ಲಿ ನಾವು ಇಲ್ಲಿಗೆ ಬಂದಾಗ ಇದು ಸಾಲದ ಮನೆಯಾಗಿತ್ತು ಹಿಂದಿನ ಸರ್ಕಾರದವರು 6 ಕೋಟಿ ರೂಪಾಯಿಗಳ ಸಾಲವನ್ನು ಬಿಟ್ಟು ಹೋಗಿದ್ದರು. ಅಂದರೆ ಇದು ಖಾಲಿ ಮನೆಯಾಗಿತ್ತು. ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನಂತಹ ಒಬ್ಬ ಅತ್ತೆ ಮನೆಗೆ ಹೋದಾಗ, ಅತ್ತೆಯ ಹತ್ತಿರ ಹಣ ಇರಲಿಲ್ಲ ಆಗ ಅತ್ತೆ ಮನೆಯನ್ನು ಗಿರಿವಿ ಇಟ್ಟು ಓಲೆಯನ್ನು ಮಾಡಿಸುತ್ತಾಳೆ, ಮಾಡಿದ ಸಾಲದ ಬಡ್ಡಿಯನ್ನು ತೀರಿಸಿಸಲು ಓಲೆಯನ್ನು ಮಾರಬೇಕಾಗುತ್ತದೆ. ಸಾಲ ಮಾಡಿ ಓಲೆ ಮಾಡಿಸಿ, ಓಲೆ ಮಾರಿ ಬಡ್ಡಿ ಕಟ್ಟುವಂತಹ ಪರಿಸ್ಥಿತಿ 1994-95 ರಲ್ಲಿ ಇತ್ತು. ಇಂತಹ ಪರಿಸ್ಥಿತಿಯಲ್ಲಿ ನಾವು ಬಂದಿದ್ದು. We don't take loan. There is no single O.D. Ours is clear cut bank transactions. No rebouncing of cheque in the last four years, except there is some difference in contract etc. ಏನಾದರೂ ವ್ಯತ್ಯಾಸವಾಗಿದ್ದರೆ, ಅಥವಾ ಅಧಿಕಾರಿಗಳ ಸಹಿಯಲ್ಲಿ ವ್ಯತ್ಯಾಸ ಇದ್ದರೆ ಚೆಕ್ ಬೌನ್ಸ್ ಆಗಿರಬಹುದು. ಇಲ್ಲ ಅಂದರೆ we have tried our level best to give this good budget this year. God made man. Man made money. Money made manythings. But what our Government is doing is, money is made for poor people. This budget will go to the grassroot, poor people. There is economy in this finance, there is education, there is employment. All these three are there.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ರಾಜಣ್ಣನವರು ಕನ್ನಡ ಸಂಸ್ಕೃತಿ ಇಲಾಖೆಯ ಅಧ್ಯಕ್ಷರು ಆಗಿದ್ದವರು, ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾ ಇದ್ದಾರೆ. ಇದು ಸರಿಯಾ ಎಂದು ತಮ್ಮನ್ನು ನಾನು ಕೇಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ ಶ್ರೀ ಯು. ಆರ್. ಅನಂತ ಮೂರ್ತಿಯವರು ಇಂಗ್ಲಿಷ್ ಪ್ರೊಫೆಸರ್, ಆದರೂ ಅವರು ಕನ್ನಡದಲ್ಲಿ ಬರೆಯುತ್ತಾರೆ. ಅವರ ಇನ್ನೊಂದು ಮುಖವೇ ರಾಜಣ್ಣನವರು.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೆ, ಈ ರಾಜಣ್ಣನವರು ಸಂಸ್ಕೃತದಲ್ಲಿ ಮಾತನಾಡುತ್ತಾರೆ.

ಅಧ್ಯಕ್ಷರು :- ಅವರ ಭಾಷೆ ನಿಮಗೆ ಅರ್ಥವಾಗದಿದ್ದರೆ ನಾನು ಏನು ಮಾಡಲಿ?

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, ತಾವು ಹೇಳುವುದರಲ್ಲಿ ಸತ್ಯಾಂಶ ಇದೆ. ನನಗೂ ಕನ್ನಡದ ಬಗ್ಗೆ ಪ್ರೀತಿ ಇದೆ. ಆದರೆ ನಾನು ಹುಟ್ಟಿದ ಜಾಗ ಎಂಥದ್ದು ಎಂದರೆ, ತಮಿಳರು, ತೆಲುಗಿನವರು, ಆಂಗ್ಲೊ ಇಂಡಿಯನ್ಸ್, ಕ್ರಿಶ್ಚಿಯನ್ಸ್ ಮಲೆಯಾಳಿಯನ್ಸ್ ಮುಸ್ಲಿಂ ಇರುವಂತಹ ಜಾಗ. ನಾನು ಏನು ಮಾಡಲಿ ಬೆಳಿಗ್ಗೆ ಎದ್ದರೆ ತಮಿಳಿನಲ್ಲಿ ಮಾತನಾಡಬೇಕು, ತೆಲುಗಿನಲ್ಲಿ ಮಾತನಾಡಬೇಕು, ಇಲ್ಲದಿದ್ದರೆ ಇಂಗ್ಲೀಷ್‌ನಲ್ಲಿ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಅವರು ಅವರ ಬೀದಿಯಲ್ಲಿ ಏನಾದರೂ ಮಾತನಾಡಿಕೊಳ್ಳಲಿ, ಇಲ್ಲಿ ಸರ್ಕಾರದ ನೀಡಿ ಆಡಳಿತ ಭಾಷೆ ಕನ್ನಡ ಎಂದು ಇದೆ. ಅವರ ಪಕ್ಕದ ಮನೆಯವರೊಂದಿಗೆ ಏನಾದರೂ ಮಾತನಾಡಿಕೊಳ್ಳಲಿ ಅದಕ್ಕೆ ನನ್ನ ಅಭ್ಯಂತರ ಇಲ್ಲ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಈಗ ರಾಜಣ್ಣನವರು ಕನ್ನಡದಲ್ಲಿಯೇ ಮಾತನಾಡುತ್ತಾರೆ.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, ಆದಷ್ಟು ಕನ್ನಡದಲ್ಲಿ ಮಾತನಾಡಲು ಪ್ರಯತ್ನಮಾಡುತ್ತೇನೆ. I will try my level best to speak in Kannada.

(laughter)

Mr. Speaker :- Right person in this House, ಇವರದು ಆದ ಮೇಲೆ ಬಿ.ಐ. ಪಾಟೀಲರು ಇವರ ಮೇಲೆ ಚಾಲೆಂಜಿಂಗ್ ರೀತಿಯಲ್ಲಿ ಮಾತನಾಡುವವರಿದ್ದಾರೆ.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, In this budget, I accept what Mr. Srirama Reddy said : Fall in revenue. From Rs. 450 crores to Rs. 381 crores. Where we have to plug, that is very important. I hope the officers will note down this. Regarding budget deficit, after all ಡಿಫಿಸಿಟ್ ಮಾಡಬೇಕು ಈಗ. ಇಷ್ಟೆಲ್ಲಾ ಜನರಿಗೆ ನಾವು ಉದ್ಯೋಗವನ್ನು ಕೊಡಬೇಕು, ಶಿಕ್ಷಣವನ್ನು ಕೊಡಬೇಕು, ಇದರಲ್ಲಿ ಡಿಪಾಜಿಟ್ ಎಷ್ಟು ಡಿಫಿಸಿಟ್ ಆಗುತ್ತದೆ ಎಂದರೆ 104 ಕೋಟಿ ರೂಪಾಯಿ ಈ ವರ್ಷ 196.62 ಕೋಟಿ Though the resource mobilisation is up by Rs. 186 crores to Rs. 330 crores in Page 19 Para 46. Minor Irrigation. How much we have provided to the farmers is very important. ಇನ್ನು ನೀರಾವರಿಗೆ ಹಿಂದಿನ ವರ್ಷ ಇಟ್ಟಿದ್ದು 1095 ಕೋಟಿ ರೂಪಾಯಿಗಳು ಈ ವರ್ಷ 1,481 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ವಿದ್ಯುಚ್ಛಕ್ತಿಗೆ ಹೋದ ವರ್ಷ 672 ಕೋಟಿ ಇಟ್ಟಿದ್ದು, ಈ ವರ್ಷ 869 ಕೋಟಿ ಇಟ್ಟಿದ್ದಾರೆ. ಎಲ್ಲ ಕೆಲಸಗಳಿಗೂ ಹೆಚ್ಚಿಗೆ ಇಟ್ಟಿದ್ದಾರೆ. On Oage 23 Para 59 Education is important.

ಇವತ್ತು ದೇಶದಲ್ಲಿ ಎಲ್ಲರೂ ಶೇ. 100 ರಷ್ಟು ವಿದ್ಯಾವಂತರಾಗಬೇಕು. ಕೇರಳವನ್ನು ಬಿಟ್ಟು, ಶೇ, 60 ರಷ್ಟು ನಾವು ಈಗ ರೀಚ್ ಆಗಿದ್ದೆವೆ. Or Government is taking all efforts. ಮತ್ತೆ ನಮ್ಮ ಸರ್ಕಾರ ವಿದ್ಯಾಭ್ಯಾಸವನ್ನು ಕಡ್ಡಾಯಗೊಳಿಸಬೇಕೆಂದು ಪ್ರಯತ್ನ ಮಾಡಿದೆ. 1994-95ರಲ್ಲಿ 1600 ಕೋಟಿ ಇತ್ತು ಎಂದು ಕೇಳಿದ್ದೇನೆ. ಈಗ 2,200 ಕೋಟಿ ಕೊಟ್ಟಿದ್ದಾರೆ. ಯೋಜನೆಗೆ ಹೋದ ವರ್ಷ 4,326 ಕೋಟಿ ರೂಪಾಯಿ ಕೊಟ್ಟಿದ್ದಾರೆ, ಈಗ 5,353 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಲ್ಲಿ ಯೋಜನೆಗೆ ಮಾತ್ರ 1,027 ಕೋಟಿ ರೂಪಾಯಿ ಜಾಸ್ತಿ ಇಟ್ಟಿದ್ದಾರೆ. 196 ಕೋಟಿ ರೂಪಾಯಿಗಳ ಕೊರತೆ ಬಜೆಟ್ ಇದಾಗಿದೆಯಷ್ಟೆ. ಕೇವಲ ಇಷ್ಟೆ ಕೊರತೆಯನ್ನು ತೋರಿಸಿ ಸರ್ಕಾರ ಎಷ್ಟು ಒಳ್ಳೆಯ ಕೆಲಸ ಮಾಡಿದೆ ಎಂಬುದನ್ನು ಅರಿತು ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಈ ವರ್ಷದಲ್ಲಿ ಎಲ್ಲಾ ಸದಸ್ಯರು ಶಹಭಾಸ್‌ಗಿರಿಯನ್ನು ಸರ್ಕಾರಕ್ಕೆ ಕೊಡಬೇಕು. ಚುನಾವಣಾ ಕಾರ್ಯದಲ್ಲಿ ಎಷ್ಟೆಲ್ಲಾ ತೊಡಗಿಸಿಕೊಂಡಿದ್ದರೂ ಕೂಡ ಮಾನ್ಯ ಸಿದ್ಧರಾಮಯ್ಯನವರು ಕೇವಲ 15 ದಿವಸಗಳಲ್ಲಿ ಸರಿಯಾದ ರೀತಿಯ ಒಳ್ಳೆಯ ಬಜೆಟ್‌ನ್ನು ಕೊಟ್ಟಿದ್ದಾರೆ ಎಂದು ತಾರಿಫ್‌ಗಿರಿ ಕೊಟ್ಟು ಸರ್ಟಿಫೈಯನ್ನು ವಿರೋಧ ಪಕ್ಷದವರು ಮಾಡಲಿಲ್ಲವೆನ್ನುವುದೇ ನನಗೆ ಆಶ್ಚರ್ಯವಾಗಿದೆ. ನಾನು ನಮ್ಮ ಪಕ್ಷ ಒಳ್ಳೆಯ ಕೆಲಸಗಳನ್ನು ಮಾಡಿರುವುದರಿಂದ ಅವುಗಳ ಬಗ್ಗೆ ಹೇಳುತ್ತೇನೆ. ಅದೇ ರೀತಿ ಲೂಪ್‌ಹೋಲ್ ಏನಾದರೂ ಒಂದೆರಡು ಇದ್ದರೆ ಅದನ್ನೂ ಹೇಳುತ್ತೇನೆ. ಒಳ್ಳೆಯ ಕೆಲಸ ಮಾಡಿರುವ ಬಗ್ಗೆ ಎಲ್ಲಾ ಸದಸ್ಯರು ಅಪ್ರಿಶಿಯೇಟ್ ಮಾಡಿದರೆ ನಮಗೆ ಮತ್ತು ನಮ್ಮ ಪಕ್ಷದವರಿಗೆ ಸಂತೋಷವಾಗುತ್ತದೆ ಮತ್ತು ತೆರಿಗೆ ವಸೂಲಿಯಲ್ಲಿಯೂ ಕೂಡ ಈ ವರ್ಷ ಹೆಚ್ಚಾಗುತ್ತದೆ. ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಈ ವರ್ಷದಲ್ಲಿ ಗುರಿ ಇಟ್ಟುಕೊಂಡಿರುವಂತೆ ಪ್ಯಾರಾ ನಂಬರ್ 161 ರಲ್ಲಿ 1998-99ನೇ ಸಾಲಿನ ಆಯವ್ಯಯ ಅಂದಾಜು 15,157 ಕೋಟಿ ರೂಪಾಯಿಗಳಿಗೆ ರೀಚ್ ಆಗಿದೆ. ಈ ರೀತಿಯಲ್ಲಿ ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರಿಂದ 196 ಕೋಟಿ ರೂಪಾಯಿಗಳ ಕೊರತೆ ಕಂಡು ಬಂದೇ ಬರುತ್ತದೆ. ಯಾವುದೋ ಕೆಲವೊಂದು ಐಟಂಗಳಡಿಯಲ್ಲಿ ಸ್ವಲ್ಪ ತೆರಿಗೆ ಜಾಸ್ತಿಯಾಗಿದೆ. ಮೋಜು ಕಾರ್ಯಗಳಿಗೋಗುವವರಿಗೆ ತೆರಿಗೆ ಜಾಸ್ತಿಯಾಗಿದೆ. ಲೈವ್ ಬ್ಯಾಂಡ್‌ಗೆ ಇಂದು ಹಣವಿರುವವರೇ ಹೋಗುವುದು, ಆವರು ಸ್ವಲ್ಪ ತೆರಿಗೆ ಹೆಚ್ಚು ಕೊಡಲಿ ಬಿಡಿ, ಅದೇ ರೀತಿ ಬೀರ್‌ನ್ನು ಕುಡಿಯುವರು ಯಾರು? ಹಣ ಹೆಚ್ಚು ಇರುವವರೇ ಹೋಗಿ ಬೀರ್ ಕುಡಿಯುತ್ತಾರೆ. ಅವರು ತೆರಿಗೆ ಜಾಸ್ತಿ ಕೊಡಲಿ ಬಿಡಿ. ಇನ್ನು ಶಿಕ್ಷಣಕ್ಕಾಗಿ ಈ ಸಾಲಿನಲ್ಲಿ ಅತಿ ಹೆಚ್ಚಿನ ಮೊತ್ತವನ್ನು ನಾವು ಇಟ್ಟಿದ್ದೇವೆ. ಇನ್ನು ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆಯ ನಿರುದ್ಯೋಗಿಗಳಿದ್ದಾರೆ. ಈ ನಿರುದ್ಯೋಗಿಗಳ ಬಗ್ಗೆ ಶ್ರೀರಾಮರೆಡ್ಡಿಯವರು ಮಾತನಾಡಬೇಕಾದರೆ ಬಹಳ ಚೆನ್ನಾಗಿ ಮಾತನಾಡುತ್ತ ಹೇಳಿದರು. There were about 28,000 employees in the goldmine about ten years back ಆದರೆ ಇಂದು 8 ಸಾವಿರಕ್ಕೆ ಇವರ ಸಂಖ್ಯೆ ಇಳಿದಿದೆ. ಈ 8 ಸಾವಿರ ಉದ್ಯೋಗಿಗಳನ್ನು ಮನೆಗೆ ಕಳುಹಿಸಬೇಕಾಗಿತ್ತು, ಅಂಥ ಸಮಯದಲ್ಲಿ ಸಂಯುಕ್ತರಂಗ ಸರ್ಕಾರದ 16 ಜನ ಲೋಕಸಭಾ ಸದಸ್ಯರು ಮತ್ತು ಅಂದಿನ ಪ್ರಧಾನಿಗಳಾದ ದೇವೇಗೌಡರು ಅಲ್ಲಿಗೆ ಹೋಗಿ ಇದನ್ನು ತಡೆದರು. ಇಲ್ಲದಿದ್ದರೆ ಇವರೆಲ್ಲರನ್ನೂ ಮನೆಗೆ ಕಳುಹಿಸಿಬಿಡುತ್ತಿದ್ದರು. ಇವರ ಮಧ್ಯೆ ಪ್ರವೇಶದಿಂದ ಇವೊತ್ತು ಆ 8 ಸಾವಿರ ಉದ್ಯೋಗಿಗಳು ಕೆಲಸವನ್ನು ಉಳಿಸಿಕೊಂಡು 9 ಸಾವಿರ ಅಡಿಯಿಂದ ಚಿನ್ನದ ಅದಿರನ್ನು ತೆಗೆದುಕೊಂಡು ಬಂದು ತಾಜಾ ಚಿನ್ನವನ್ನು ತೆಗೆದು ಕೆಲಸವನ್ನು ಮಾಡಿ ತಮ್ಮ ಸಂಸಾರದ ಜೀವನವನ್ನು ನಡೆಸುವುದಕ್ಕೆ

ಸಂಯುಕ್ತರಂಗ ಸರ್ಕಾರ ದಾರಿ ಮಾಡಿಕೊಟ್ಟಿದೆ. ಇದೇ ರೀತಿಯಲ್ಲಿ ಭದ್ರಾವತಿಯ ಕಾರ್ಖಾನೆಯೂ ಮುಚ್ಚುವ ಪರಿಸ್ಥಿತಿ ಬಂದಿತ್ತು. ಆ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮತ್ತು ಮುಖ್ಯಮಂತ್ರಿಗಳಾದ ಜೆ. ಹೆಚ್. ಪಟೇಲ್‌ರವರು ಈ ಕಾರ್ಖಾನೆಗೆ ಸಂಬಂಧಪಟ್ಟ ಫೈಲ್‌ಗಳನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಸೇಲ್ ಅಥಾರಿಟಿಗೆ ಭದ್ರಾವತಿ ಕಾರ್ಖಾನೆಯನ್ನು ಕೊಟ್ಟು ಅಲ್ಲಿಗೆ 600 ಕೋಟಿ ರೂಪಾಯಿಗಳನ್ನು ಕೊಟ್ಟು ಇಂದು ಆ ಕಾರ್ಖಾನೆ ನಡೆಯುವ ಮಟ್ಟಕ್ಕೆ ಬರುವುದಕ್ಕೆ ನಮ್ಮ ಸರ್ಕಾರ ಕಾರಣವಾಗಿದೆ. ಈ ರೀತಿ ಮಾಡದಿದ್ದರೆ ಇಂದು 10 ಸಾವಿರ ಕುಟುಂಬಗಳು ಬೀದಿಪಾಲಾಗುತ್ತಿದ್ದವು. ಈ ರೀತಿ ಮಾಡದಿದ್ದರೆ ಭದ್ರಾವತಿ ಮತ್ತು ಶಿವಮೊಗ್ಗದ ಮುಖ್ಯರಸ್ತೆಗಳ ಬದಿಯಲ್ಲಿರುವ ಎಲ್ಲಾ ಅಂಗಡಿಗಳನ್ನು ಮುಚ್ಚಬೇಕಾದ ಪ್ರಸಂಗ ಬಂದಿರುತ್ತಿತ್ತು. ಆದರೆ ಆ ರೀತಿಯಾಗದೆ ಇಂದು ಕಾರ್ಮಿಕರು ಸಂತೋಷವಾಗಿ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡಿದ್ದಾರೆ. ವ್ಯಾಪಾರಸ್ಥರು ಚೆನ್ನಾಗಿ ವ್ಯಾಪಾರವಾಗುತ್ತಿರುವುದರಿಂದ ಒಳ್ಳೆಯ ಮಟ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ರೈತರುಗಳು ತಮ್ಮ ಪದಾರ್ಥಗಳನ್ನು ಮಾರುಕಟ್ಟೆಗೆ ತಂದರೆ ಅದು ಉತ್ತಮ ಬೆಲೆಗೆ ಮಾರಾಟವಾಗುವ ಪರಿಸ್ಥಿತಿ ಇವೊತ್ತು ಭದ್ರಾವತಿ ಮತ್ತು ಶಿವಮೊಗ್ಗದಲ್ಲಿ ಬಂದಿದೆ. ಅದೇ ರೀತಿ ಬೆಂಗಳೂರು ಮತ್ತು ಇಡೀ ಕರ್ನಾಟಕದಲ್ಲಿ ಇಂಥ ಒಳ್ಳೆಯ ಪರಿಸ್ಥಿತಿ ಇದೆ. ಇದು ಕೇಂದ್ರ ಸರ್ಕಾರದಲ್ಲಿ ಸಂಯುಕ್ತ ರಂಗ ಸರ್ಕಾರ ಮತ್ತು ಕರ್ನಾಟಕದಲ್ಲಿ ಜನತಾದಳ ಸರ್ಕಾರ ಮಾಡಿದ ಸಾಧನೆಯಿಂದ ಮಾತ್ರ ಇದೆ. ಇನ್ನು ಕರ್ನಾಟಕ ಎಲೆಕ್ಟ್ರಾನಿಕ್ ಕಂಪನಿ ಬಗ್ಗೆ ಹೇಳಬೇಕೆಂದರೆ ಇದು 600 ಜನ ಕೆಲಸಗಾರರನ್ನು ಹೊಂದಿದ್ದು ಕೆಲಸ ನಡೆಸಲಾಗದೇ ಮುಚ್ಚಿದ್ದರು. ಇದಕ್ಕೆ 24 ಕೋಟಿ ರೂಪಾಯಿಗಳನ್ನು ಕೊಟ್ಟ ಪ್ರಯುಕ್ತ ಇವೊತ್ತು ಮತ್ತೆ ಕೆಲಸ ಪ್ರಾರಂಭವಾಗಿದೆ. ಇಂದು ಒಳ್ಳೆಯ ಆರ್ಡರ್‌ಗಳನ್ನು ಕಂಪನಿಗೆ ಕೊಡಲಾಗುತ್ತಿದೆ. ಇಂಥ ಕೆಲಸಗಳನ್ನು ಮಾಡಿರುವುದು ಒಳ್ಳೆಯದಲ್ಲವೇ? ಕಾರ್ಮಿಕರಿಗೆ ಕೆಲಸ ಕೊಟ್ಟಿರುವುದು ಒಳ್ಳೆಯ ಕೆಲಸವಲ್ಲವೇ? ಇದನ್ನೇ ನಮ್ಮ ಜನತಾ ದಳ ಸರ್ಕಾರ ಮಾಡಿರುವ ಸಾಧನೆ ಎಂದು ಹೇಳುವುದು. ಇನ್ನು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳಬೇಕೆಂದರೆ ಒಟ್ಟು 73 ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗುತ್ತಿದೆ. ಕಳೆದ ವರ್ಷ 50 ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಈ ವರ್ಷ 28 ಸಾವಿರ ಶಿಕ್ಷಕರನ್ನು ತೆಗೆದುಕೊಳ್ಳಲಾಗುತ್ತದೆ. ಹೆಚ್ಚು ಕಡಿಮೆ ಸುಮಾರು 70 ಸಾವಿರ ಶಿಕ್ಷಕರನ್ನು ಶಿಕ್ಷಣ ಇಲಾಖೆಯಲ್ಲಿ ನೇಮಕಾತಿ ಆದಹಾಗೆ ಆಗುತ್ತದೆ. ಇದರಲ್ಲಿ ಅರ್ಧ ಭಾಗದಷ್ಟು ಮಹಿಳೆಯರನ್ನೇ ತೆಗೆದುಕೊಳ್ಳಲಾಗುತ್ತಿದೆ. ಇದರ ಬಗ್ಗೆ ಗಂಭೀರವಾಗಿ ಎಲ್ಲರೂ ಆಲೋಚಿತರಾಗಬೇಕಾಗುತ್ತದೆ. ಈ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಶೇಕಡ 50 ರಷ್ಟನ್ನು ಮಹಿಳೆಯರಿಗೆ ಮೀಸಲಾಗಿಡಲಾಗಿದೆ. ಏತಕ್ಕೋಸ್ಕರ ಹೀಗೆ ಮಾಡಲಾಗಿದೆ ಎಂದು ಚಿಂತನೆ ಮಾಡಬೇಕು. ತಾಯಿಯಾದವಳು ತನ್ನ ಮಗು ಜನಿಸಿದೊಡನೆ ಅದರ ಬಗ್ಗೆ ಯೋಚನೆ ಮಾಡುತ್ತ ಅದನ್ನು ಹೇಗೆ ಸಾಕುವುದು, ಮಗುವನ್ನು ಶಾಲೆಗೆ ಕಳುಹಿಸುವುದಕ್ಕೆ ಆಗುತ್ತದೆಯೇ, ತನ್ನ ಮಗು ಶಾಲೆಗೆ ಹೋದರೆ ಪದವೀಧರಳಾಗುತ್ತಾಳೆಯೇ, ಪದವೀಧರಳಾದರೆ ಅವಳಿಗೆ ಕೆಲಸ ಸಿಗುತ್ತದೆಯೇ, ಕೆಲಸ ಸಿಗದಿದ್ದರೂ ಪರವಾಗಿಲ್ಲ ಒಳ್ಳೆಯ ಗಂಡನಾದರು ಸಿಗುತ್ತಾನೆಯೇ ಎಂದು ತಾಯಿಗೆ ಮಗು ಜನಿಸಿದಾಗಲೇ ಚಿಂತನೆ ಪ್ರಾರಂಭವಾಗುತ್ತದೆ. ಇದನ್ನೆಲ್ಲಾ ಚಿಂತನೆ ಮಾಡಿಯೇ ನಮ್ಮ ಜನತಾದಳ ಸರ್ಕಾರದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಶಿಕ್ಷಣ ಕ್ಷೇತ್ರದಲ್ಲಿ 35 ಸಾವಿರ ಶಿಕ್ಷಕರ ಹುದ್ದೆಯನ್ನು ಮಹಿಳೆಯರಿಗೇ ಮೀಸಲಿಟ್ಟು ನೇಮಕ ಮಾಡುತ್ತಿರುವುದು. ಮಾನ್ಯ ಗೋವಿಂದೇಗೌಡರು ಶಿಕ್ಷಣ ಇಲಾಖೆಯ

ಮಂತ್ರಿಗಳಾಗಿ ಈ ಕೆಲಸ ಮಾಡುತ್ತಿದ್ದಾರೆ. ಇನ್ನು ಬಡವರ ಕೆಲಸವೆಂದು ಭಾವಿಸಿ '' ಮಾಂಗಲ್ಯ ಭಾಗ್ಯ'' ಯೋಜನೆಯಡಿಯಲ್ಲಿ ಮದುವೆಯಾಗುವ ಹೆಣ್ಣು ಮಗಳಿಗೆ 5 ಸಾವಿರ ರೂಪಾಯಿಗಳನ್ನು ನಮ್ಮ ಸರ್ಕಾರ ಕೊಡುತ್ತದೆ. ಇದು ಒಂದು ಒಳ್ಳೆಯ ಕೆಲಸವೇ ಆಗಿದೆ. ಕಳೆದ ವರ್ಷ ನಮ್ಮ ಮಗಳು, ನಮ್ಮ ಶಕ್ತಿ ಯೋಜನೆಯಡಿಯಲ್ಲಿ 3 ಸಾವಿರ ರೂಪಾಯಿಗಳನ್ನು ಕೊಡುವ ಯೋಜನೆ ಇತ್ತು. ಹೆಣ್ಣು ಮಕ್ಕಳಿಗಾಗಿ ನಮ್ಮ ಸರ್ಕಾರ ಇಷ್ಟೆಲ್ಲಾ ಕೆಲಸಗಳನ್ನು ಮಾಡಿದ್ದರೂ ಕೂಡ ವಿರೋಧ ಪಕ್ಷದವರು ನೀವು ಏನು ಮಾಡಿದ್ದೀರಿ? ನೀವು ಏನು ಮಾಡಿದ್ದೀರಿ? ಎಂದು ಕೇಳುತ್ತಲೇ ಇರುತ್ತಾರೆ. ನಾವು ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇವೆ. ನಾವು ಇಂದು ಖೋತಾ ಬಜೆಟ್ ತೋರಿಸಿರುವುದಕ್ಕೆ ಒಂದು ಬಹಳ ಮುಖ್ಯವಾದ ಮೇಜರ್ ಕಾರಣ ಇದೆ. According to the report of the 5th Pay Commission, the State Government employees salary is an additional burden on the State Government. ಆ ಹಿನ್ನೆಲೆಯಲ್ಲಿ ಇವೊತ್ತು ನಾವು ಮೊದಲ ಹಂತದಲ್ಲಿ 450 ಕೋಟಿ ರೂಪಾಯಿಗಳನ್ನು ಸಂಬಳದಲ್ಲಿ ಹೆಚ್ಚಾಗಿ ಕೊಡಬೇಕಾಗಿ ಬಂದದ್ದರಿಂದ ಖೋತಾ ಬಜೆಟ್ ಆಯಿತು. ಈ 450 ಕೋಟಿ ರೂಪಾಯಿಗಳನ್ನು ಕೊಡುವ ಕಾರ್ಯ ಇಲ್ಲದಿದ್ದರೆ ಖೋತಾ ಬಜೆಟ್ ತೋರಿಸದೇ ಇನ್ನೂ 250 ಕೋಟಿ ರೂಪಾಯಿಗಳು ಸರ್‌ಪ್ಲಸ್ ಉಳಿಯುತ್ತಿತ್ತು. ಸಂಬಳವನ್ನು ಜಾಸ್ತಿ ಮಾಡಿದ ಕಾರಣದಿಂದಲೇ ನಾವು ಇವೊತ್ತು 190 ಕೋಟಿ ರೂಪಾಯಿಗಳ ಖೋತಾ ಬಜೆಟ್‌ನ್ನು ಕೊಡಬೇಕಾಗಿ ಬಂತು. ಇದನ್ನು ಮೊದಲು ಕೇಂದ್ರ ಸರ್ಕಾರದವರು ಮಾಡಿದರು. ಅವರು ಯಾವ ಪ್ರಮಾಣದಲ್ಲಿ ಸಂಬಳವನ್ನು ಹೆಚ್ಚು ಮಾಡಿದ್ದಾರೋ ಅದೇ ಪ್ರಮಾಣದಲ್ಲಿ ನಮ್ಮ ರಾಜ್ಯ ಸರ್ಕಾರ ಮಾಡಿದರೆ ಒಟ್ಟು 1,400 ಕೋಟಿ ರೂಪಾಯಿಗಳು ಬೇಕಾಗಿತ್ತೆಂದು ನಮ್ಮ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಸನ್ಮಾನ್ಯ ಅಧ್ಯಕ್ಷರಾದ ನಿಮ್ಮನ್ನೇ ಇದರ ಬಗ್ಗೆ ಕೇಳಬಯಸುತ್ತೇನೆ. ನಮ್ಮ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 30 ರಷ್ಟು ಮಾತ್ರ ನೌಕರರ ಸಂಬಳಕ್ಕೆ ಹೋಗಬೇಕಲ್ಲವೇ? ಇದು ಕಡೇ ಪಕ್ಷ ಶೇಕಡ 40ಕ್ಕೆ ಹೋದರೂ ಪರವಾಗಿಲ್ಲ. ಆದರೆ ಶೇಕಡ 50ಕ್ಕೆ ಹೋಗಿರುವುದರಿಂದ ಇದನ್ನು ಕಡಿವಾಣ ಹಾಕಬೇಕೆಂದು, ಅದಕ್ಕಾಗಿ ಏನು ಚಿಂತನೆ ಮಾಡಬಹುದು ಎಂಬ ಬಗ್ಗೆ ಉಪ ಮುಖ್ಯಮಂತ್ರಿಗಳು ಚಿಂತನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಸರ್ಕಾರ ಮಾಡಿರುವ ಒಳ್ಳೆಯ ಕೆಲಸಗಳ ಬಗ್ಗೆ ಹೇಳಬೇಕೆಂದರೆ ಸುಮಾರು 37,507 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಇದಲ್ಲದೇ 141 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಮಾಡಿ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ಮರು ಯೋಜನೆ ಹಾಗೂ ಒಳ ಚರಂಡಿ ಸೌಲಭ್ಯ ಒದಗಿಸುವುದಾಗಿ ಹೇಳಲಾಗಿದೆ. ನಾನು ಮಂತ್ರಿಗಳನ್ನು ಒಂದು ಮಾತು ಕೇಳುತ್ತೇನೆ. ನೀವು ಗ್ರಾಮೀಣ ನೈರ್ಮಲ್ಯ ಯೋಜನೆಯಡಿ 1998-99ನೇ ಸಾಲಿಗೆ ಒಟ್ಟು 2 ಲಕ್ಷದ 98 ಸಾವಿರ ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದ್ದೀರಿ. ಈ ಶೌಚಾಲಯದ ವೇಸ್ಟ್ ಎಲ್ಲಿಗೆ ಹೋಗುತ್ತದೆ ಎಂಬ ಬಗ್ಗೆ ತಾವು ಹೇಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಇದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಏಕೆಂದರೆ ಸೆಪ್ಟಿಕ್ ಟ್ಯಾಂಕ್ ಎಂದು ಇರುತ್ತದೆ, ಆ ಸೆಪ್ಟಿಕ್ ಟ್ಯಾಂಕ್‌ಗೆ ಈ ವೇಸ್ಟ್ ಹೋದರೆ ಗ್ರಾಜ್ಯುಯಲಿ ಅಲ್ಲಿರುವ ಬೋರ್‌ವೆಲ್‌ಗೆ ಕೆಟ್ಟ ಪರಿಣಾಮ ಬೀರುತ್ತದೆ. ಆದ ಕಾರಣ ಈ ವೇಸ್ಟ್‌ನ್ನು ಸೆಗಣಿಗೆ ಮಿಕ್ಸ್ ಮಾಡಿ ಗಾಂಧಿಯನ್ ಮೆತೆಡ್‌ನಲ್ಲಿ ಹಳ್ಳಿಯಲ್ಲಿ ನಾಲ್ಕು ಕಡೆ ಡೈವರ್ಟ್ ಮಾಡಿ ಇದನ್ನು ಗೋಬರ್ ಗ್ಯಾಸ್‌ನಲ್ಲಿ ಉಪಯೋಗಿಸಿದರೆ ಹಳ್ಳಿಯ ರೈತರಿಗೆಲ್ಲಾ

ಅನುಕೂಲವಾಗುತ್ತದೆ ಮತ್ತು ಒಳ್ಳೆಯ ಗೊಬ್ಬರವೂ ದೊರೆಯುತ್ತದೆ. ಈ ಗೊಬ್ಬರ ನ್ಯಾಚುರಲ್ ಆಗಿರುತ್ತದೆ. ಇದು ಬಹಳ ಮುಖ್ಯವಾದ ವಿಷಯವಾಗಿರುವುದರಿಂದ ನಾನು ಇದರ ಬಗ್ಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು :- ರಾಜಣ್ಣನವರೇ ಬೇಗ ಮುಗಿಸಿ. ಮುಂದೆ ಬೇಡಿಕೆಗಳ ಮೇಲೆ ಮಾತನಾಡುವಾಗ ನಿಮ್ಮ ಭಾಷಣವನ್ನು ಮಾಡಬಹುದು.

ಶ್ರೀ ಎನ್. ರಾಜಣ್ಣ :-ನಾನು ಇನ್ನೂ ಬೆಂಗಳೂರು ನಗರದ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ಏನು ನೀವು ಅವರಿಗೆ ಹೀಗೆ ಹೇಳಿಬಿಟ್ರಿ. ಮುಂದೆ ಹೊಸ ಸರ್ಕಾರ ಬರುತ್ತದೆ, ಆಗ ಅವರು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗುತ್ತಾರೆ. ಆಗ ಅವರು ಉತ್ತರ ಕೊಡುವ ಸ್ಥಾನದಲ್ಲಿರುತ್ತಾರೆ. ಆಗ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಎಂದರೆ ಹೇಗೆ?

Mr. Speaker :- It should be the privilege of this House to have him as Urban Development Minister.

ಶ್ರೀ ಎನ್. ರಾಜಣ್ಣ :- ಮಂತ್ರಿ ಪದವಿ ಕೊಟ್ಟರೆ ಸಂತೋಷ. ಒಂದು ವೇಳೆ ಕೊಡದಿದ್ದರೆ ನಾನು ವ್ಯಥೆ ಪಡುವುದಿಲ್ಲ. ನಾನು ಏನು ದೇಶಕ್ಕೆ ಒಳ್ಳೆ ಕೆಲಸವನ್ನು ಮಾಡಿದೆ ಎಂದು ಹೇಳಿ before reaching the final resting place ಇನ್ನು ಮಾತನಾಡುವುದು ಬಹಳಷ್ಟಿದೆ. ಆದರೆ ನೀವು ಮುಂದೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿರುವುದರಿಂದ ಬೆಂಗಳೂರು ನಗರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ. ಬೆಂಗಳೂರು ಸಿಟಿ ಬಗ್ಗೆ ಪುಟ ಸಂಖ್ಯೆ 37ರ ಪ್ಯಾರಾ ನಂಬರ್ 107 ರಲ್ಲಿ ಹೇಳಲಾದಂತೆ ಒಳ್ಳೆಯ ಕೆಲಸವೇನು ಮಾಡುತ್ತಿದ್ದೇವೆಂದರೆ ನ್ಯಾಶನಲ್ ಹೈವೇ ನಂಬರ್ 4 ದಾಬಸ್ ಪೇಟೆಯಿಂದ ನ್ಯಾಶನಲ್ ಹೈವೇ ನಂಬರ್ 7ಕ್ಕೆ ರಿಂಗ್ ರೋಡ್ ಮಾಡಿ ಅದನ್ನು ಜೋಡಿ ಮಾಡುತ್ತಿದ್ದೇವೆ. ಇದು ಎಷ್ಟೋ ವರ್ಷಗಳಿಂದ ಆಗದೇ ನಿಂತುಹೋಗಿತ್ತು. ಇದಕ್ಕೆ ಕೇಂದ್ರ ಸರ್ಕಾರದಿಂದ 29 ಕೋಟಿ ರೂಪಾಯಿಗಳು ಬಂದಿದೆಯೆಂದು ಗೊತ್ತಾಗಿದೆ. I am grateful to our hon'ble Ex-Prime Minister Devegowda and the effort of Siddaramaiah and J.H. Patel for their efforts ಇದು ಬಂದರೆ ಒಳ್ಳೆಯದು. ಈಗ ಏನು ಬೆಂಗಳೂರು ನಗರದಲ್ಲಿ ಅಪಘಾತಗಳಿಂದ ವರ್ಷಕ್ಕೆ 800 ರಿಂದ 900 ಮರಣಗಳು ಹಾಗೂ ಸುಮಾರು 30 ರಿಂದ 40 ಸಾವಿರ ಜನರು ಏನು ತಮ್ಮ ಕೈಕಾಲುಗಳನ್ನು ಮುರಿದುಕೊಂಡು ಅಂಗವಿಕಲರಾಗುತ್ತಿದ್ದಾರೆ. ಅದು ತಪ್ಪುತ್ತದೆ. ಈ ರಿಂಗ್ ರೋಡ್ ಮಾಡುವುದು ಬಹಳ ಒಳ್ಳೆಯದು ಕೆಲಸವಾಗಿದೆ. ಇದನ್ನು ನಾವು ಮಾಡುತ್ತಿದ್ದೇವೆ. ಇದಕ್ಕಾಗಿ ಬಿ.ಡಿ. ಎ. ದವರು 14 ಕೋಟಿ 14 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇನ್ನೊಂದು ಬಹಳ ಮುಖ್ಯವಾದ ಕೆಲಸವೇನು ಮಾಡುತ್ತಿದ್ದೇವೆಂದರೆ we must be grateful to our Ex-Prime Minister Mr. Devegowda and our BDA Minister and our Deputy Chief Minister ಏಕೆಂದರೆ ಹಿಂದಿನ ಇತಿಹಾಸದಲ್ಲೇ ನೋಡಿದರೆ ನಾವು ಒಂದಿಂಚೂ ಜಾಗವನ್ನು ಡಿಫೆನ್ಸ್‌ನವರಿಂದ ತೆಗೆದುಕೊಂಡಿಲ್ಲ, ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಇಂಥ ಸಂದರ್ಭದಲ್ಲಿ

ನಮ್ಮ ದೇವೇಗೌಡರು ಪ್ರಧಾನ ಮಂತ್ರಿಗಳಾದ ಮೇಲೆ 85 ಎಕರೆ ಭೂಮಿಗಳನ್ನು ಅಕ್ವೈರು ಮಾಡಿಕೊಳ್ಳಲಾಗಿದೆ. ಡಿಫೆನ್ಸ್‌ನವರು ನಮಗೆ 85 ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಪ್ರತಿಯಾಗಿ ನಾವು ಅವರಿಗೆ 214 ಕೋಟಿ ರೂಪಾಯಿಗಳು ಹಣ ಕೊಟ್ಟಿದ್ದಾರೆ. ಆ ಹಣಕ್ಕೆ ನಾವು ಅವರಿಗೆ ಕೋರಮಂಗಲದಲ್ಲಿ ಮನೆಗಳನ್ನು ಬಿಟ್ಟುಕೊಡಬೇಕು, ಆ ಮನೆಗಳನ್ನು ಸಂಪೂರ್ಣವಾಗಿ ಇನ್ನೂ ಬಿಟ್ಟು ಕೊಡಲಾಗಿಲ್ಲ, ಸಧ್ಯದಲ್ಲಿ ಶೇಕಡ 50ರಷ್ಟನ್ನು ಬಿಟ್ಟುಕೊಟ್ಟು ಇನ್ನು 50 ಪರ್ಸೆಂಟ್ ರಿಪೇರಿಯಾಗುತ್ತಿರುವುದರಿಂದ ಅದು ರಿಪೇರಿಯಾದ ಮೇಲೆ ಸಂಪೂರ್ಣವಾಗಿ ಮನೆಗಳನ್ನು ಬಿಟ್ಟುಕೊಡಲಾಗುವುದೆಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಫೈಲ್ ಪೆಂಡಿಂಗ್‌ನಲ್ಲಿದೆ. ದಯವಿಟ್ಟು ಅವರಿಗೆ ಆ ಮನೆಗಳನ್ನು ಬಿಟ್ಟುಕೊಟ್ಟರೆ ನಮಗೆ ಇನ್ನರ್ ರಿಂಗ್ ರೋಡ್ಸ್‌ಗಾಗಿ ಏನು ಜಾಗ ಬೇಕಾಗಿದೆ ಆ ಜಾಗವನ್ನು ಅವರು ಬಿಟ್ಟುಕೊಡುವುದಕ್ಕೆ ಅನುಕೂಲವಾಗುತ್ತದೆ. ಇನ್ನು ನಮ್ಮ ವಿಧಾನಸಭಾ ಕ್ಷೇತ್ರವಾದ ಭಾರತಿ ನಗರದಲ್ಲಿದ್ದಂತೆ ಕೋಲಾರದ ಕಡೆ ಹೋಗುವಾಗ ನೀವೂ ನೋಡಿರಬಹುದು, ಅಲಸೂರು ಲೇಕ್‌ನಿಂದ ಮರ್ಫಿ ರೋಡ್‌ನಲ್ಲಿ ಆ ಪರ್ಟಿಕ್ಯುಲರ್ ಭಾಗದಲ್ಲಿ ಸುಮಾರು 11 ಎಕರೆ ಭೂಮಿಯನ್ನು ನಾವು ಅಕ್ವೈರು ಮಾಡಿಕೊಂಡಿದ್ದೇವೆ. ಆ ರೋಡ್ ಮೈನ್‌ಟೇನ್ ಆಗಬೇಕು. ಅದರ ಬಗ್ಗೆ ಇನ್ನೂ ದುಡ್ಡು ಕೊಟ್ಟಿಲ್ಲ. ದಯವಿಟ್ಟು ಆದಷ್ಟು ಬೇಗ ಸರ್ಕಾರ ಚಿಂತನೆ ಮಾಡಿ ಆ 11 ಎಕರೆ ಜಾಗವನ್ನು ಬಿಡಿಸಿಕೊಟ್ಟರೆ ಆ ಮೂಲಕ ರಸ್ತೆಯನ್ನು ಅಗಲ ಮಾಡಿದರೆ ಒಳ್ಳೆಯದು. ಏಕೆಂದರೆ ವರ್ಷಕ್ಕೆ ಸುಮಾರು 40 ರಿಂದ 50 ಅಪಘಾತಗಳು ಆಗುತ್ತದೆ. ಇದು ಅಲಸೂರು ಲೇಕ್‌ನಿಂದ ಹಳೇ ಮದ್ರಾಸ್ ರೋಡ್‌ಗೆ ಸೇರುವ ಒಂದು ಕಿ.ಮೀ ವ್ಯಾಪ್ತಿಯಲ್ಲಿ 40 ಅಡಿಗೆ 3,000 ಅಡಿ ಉದ್ದ ಮಾಡಬೇಕು. ಇದನ್ನು ಮಾಡಬೇಕಾದರೆ ಜಾಗ ಬೇಕು, ಆ ಜಾಗ ಬೇಕಾದರೆ ಅಲ್ಲಿಯವರೆಗೆ ಬೇರೆ ಕಡೆ ಮನೆಗಳನ್ನು ಸರ್ಕಾರ ಕೊಡಬೇಕು. ಇದನ್ನು ಬೇಗ ಮಾಡಬೇಕು. ಇನ್ನು ಈ ಹಿಂದೆ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ವಿಲಿಯಮ್ ಟೌನ್‌ನಲ್ಲಿ ಒಂದು ಜಾಗವನ್ನು ಅಕ್ವೈರು ಮಾಡಿಕೊಳ್ಳಲಾಗಿತ್ತು. first commander in chief of the Indian Army Mr. General Kariyappa ಅವರ ಕಾಲದಲ್ಲಿ ವಿಲಿಯಮ್ ಟೌನ್‌ನಲ್ಲಿ ಮಿಲಿಟರಿಯವರಿಂದ ಒಂದು ಜಾಗ ಅಕ್ವೈರು ಮಾಡಿಕೊಳ್ಳಲಾಗಿತ್ತು. ಒಟ್ಟು ಇವೆರಡು ಜಾಗವನ್ನು ಬಿಟ್ಟರೆ ಮತ್ತ್ಯಾವ ಜಾಗವನ್ನು ಮಿಲಿಟರಿಯವರಿಂದ ಅಕ್ವೈರು ಮಾಡಿಕೊಂಡಿಲ್ಲ. ಈ ಕೆಲಸ ಬಹಳ ಕಷ್ಟಕರವಾದ ಕೆಲಸವಾಗಿದೆ. ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ನಮ್ಮ ಸರ್ಕಾರದವರು ಮಾಡಿದ್ದೇವೆ. ಕಡೆಯಲ್ಲಿ ದೇವೇಗೌಡರು ಬಿಟ್ಟು ಬರುವಾಗ ಕೂಡ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. 1,600 ಕೋಟಿ ರೂಪಾಯಿಗಳು ನಮ್ಮ ಕರ್ನಾಟಕಕ್ಕೆ ಕೊಟ್ಟಿದ್ದಾರೆ ಡ್ಯಾಮ್‌ಗಳಿಗೆ ಕೊಟ್ಟಿದ್ದಾರೆ, ಸಕ್ಕರೆ ಕಾರ್ಖಾನೆಗಳನ್ನು ಕೊಟ್ಟಿದ್ದಾರೆ, ಕಾರ್ಖಾನೆಗಳಿಗೆ ಉದ್ಯೋಗಿಗಳನ್ನು ಕೊಟ್ಟಿದ್ದಾರೆ. ಒಟ್ಟಾರೆ ಇಂಥ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಅವರು ಏನು ಮಾಡಿದ್ದಾರೆ ಅದರಲ್ಲಿ ಅರ್ಧ ಭಾಗ ಮುಂದಿನ ಸರ್ಕಾರ ಮಾಡಿದರೂ ಸಾಕು, ನಮಗೆ ಸಂತೋಷವಾಗುತ್ತದೆ. ದೇವೇಗೌಡರು ಕೊನೆಯಲ್ಲಿ ಯಾರಿಗೂ ನೋವನ್ನು ಕೊಡಲಿಲ್ಲ, ಯಾರಿಗೂ ನೋವನ್ನು ಕೊಡಲಿಲ್ಲ ಅದರ ಬದಲು ಒಂದು ಒಳ್ಳೆಯ ಕೆಲಸವನ್ನು ಮಾಡಿದರು ಅದೇನೆಂದರೆ flesh without blood ಅಂದರೆ voluntary disclosure of income tax. ಆ ಕಾರ್ಯದಿಂದ ಇವೊತ್ತು 10,050 ಕೋಟಿ ರೂಪಾಯಿಗಳನ್ನು ರಿಸರ್ವ್ ಬ್ಯಾಂಕ್‌ನಲ್ಲಿ ಇಡಲಾಗಿದೆ. ಅದರಲ್ಲಿ ಬಿ.ಜೆ.ಪಿ. ಸರ್ಕಾರ ಹಣವನ್ನು ಧಾರಾಳವಾಗಿ ಖರ್ಚು ಮಾಡಬಹುದು. ಇದರಿಂದ ಕರ್ನಾಟಕಕ್ಕೆ ಬರತಕ್ಕಂಥ ಶೇರ್‌ನಲ್ಲಿ ಶೇಕಡ

ಅರ್ಧ ಭಾಗವನ್ನು ಬೆಂಗಳೂರು ನಗರಕ್ಕೆ ಖರ್ಚು ಮಾಡಿ ಗಾರ್ಡ್‌ನ್ ಸಿಟಿಯನ್ನಾಗಿಯೇ ಮುಂದುವರೆಸಿಕೊಂಡು ಹೋಗಬೇಕು. ಏಕೆಂದರೆ ಈಗಾಗಲೇ ಬೆಂಗಳೂರು ನಗರದಲ್ಲಿ ಜನಸಂಖ್ಯೆ ಜಾಸ್ತಿಯಾಗಿದ್ದಾರೆ, ಇದರಿಂದ ರಸ್ತೆಗಳ ಒತ್ತಡ ಕೂಡ ಜಾಸ್ತಿಯಾಗಿದೆ, ವಾಹನಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ, ಪಾರ್ಕ್‌ಗಳೂ ಕೂಡ ಜಾಸ್ತಿಯಾಗಿ ಬಹಳ ತೊಂದರೆಯಾಗಿದೆ. ಆದಕಾರಣ ಕರ್ನಾಟಕಕ್ಕೆ ಏನು ಹಣ ಬರುತ್ತದೆ ಅದರಲ್ಲಿ ಅರ್ಧ ಭಾಗ ಹಣವನ್ನು ಬೆಂಗಳೂರು ನಗರಕ್ಕೆ ಖರ್ಚು ಮಾಡಿ ಬೆಂಗಳೂರನ್ನು ಗಾರ್ಡ್‌ನ್ ಸಿಟಿಯಾಗಿಯೇ ಇದನ್ನು ಉಳಿಸಬೇಕೆಂದು ಹಣಕಾಸು ಮಂತ್ರಿಗಳನ್ನು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :-ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಆಯವ್ಯಯವನ್ನು 4ನೇ ಬಾರಿಗೆ ಮಂಡಿಸುತ್ತಿರತಕ್ಕಂಥದ್ದು, ಅವರು 5ನೇ ಬಾರಿಯೂ ಮಂಡಿಸುತ್ತಾರೆ, ಅದರಲ್ಲಿ ಏನೂ ಅನುಮಾನವಿಲ್ಲ; ಅದು ಸ್ಪಷ್ಟ. ಇತಿಹಾಸದಲ್ಲಿ ಇದೊಂದು ದಾಖಲೆ. ನಿಮ್ಮ ಬಗ್ಗೆ ನನಗೆ ಅಪಾರವಾದ ಗೌರವ ಮತ್ತು ವಿಶ್ವಾಸವಿದೆ. ಆದರೆ ನೀವು ಚಿಂತನೆಯನ್ನು ತೀವ್ರವಾಗಿ ಮಾಡುವುದಿಲ್ಲ. ನೀವು ನಡೆದು ಬಂದಂತಹ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡಿದ್ದಾರೆ ಇನ್ನು ಉತ್ತಮವಾದಂತಹ ಆಯವ್ಯಯವನ್ನು ಮಂಡಿಸಬಹುದಾಗಿತ್ತೆಂದು ನನ್ನ ಅನಿಸಿಕೆ. ಇದು ಯಾವ ರೀತಿ ಇದೆ ಎಂದು ಹೇಳಿದರೆ ''ಹಬ್ಬಕ್ಕೆ ತಂದ ಹರಕೆಯ ಕುರಿ ತನ್ನ ಕೊಲ್ಲುವರೆಂಬ ಅರಿವಿಲ್ಲದೆ ತಳಿರುತೋರಣವನ್ನು ತಿನ್ನುತ್ತಿತ್ತು'' ಅಂದರೆ ಜನ ಕುರಿಯಾಗಿದ್ದಾರೆ ಪ್ರತಿ ವರ್ಷ ಅವರನ್ನು ಯಾವುದೇ ಚಿಂತನೆಯಿಲ್ಲದೆ ವಧೆ ಮಾಡತಕ್ಕಂತಹ ವ್ಯವಸ್ಥೆ ನಿಮ್ಮ ಆಯವ್ಯಯದಲ್ಲಿ ಇದೆ. ನಾನು ಸಾರಾಸಗಟಾಗಿ ಇವೆಲ್ಲವನ್ನು ತಳ್ಳಿಹಾಕುತ್ತೇನೆಂಬ ಭಾವನೆಯನ್ನು ತಾವು ಇಟ್ಟುಕೊಳ್ಳಬೇಕಾಗಿಲ್ಲ. ನೀವು ಯಾವುದರ ಮೇಲೆ ತೆರಿಗೆಯನ್ನು ಹಾಕಿದ್ದೀರಿ ಎನ್ನುವ ಬಗ್ಗೆ ನಂತರ ಹೇಳುತ್ತೇನೆ. ಅವೆಲ್ಲದರ ಮೇಲೆ ತೆರಿಗೆಯನ್ನು ಹಾಕುವುದರ ಬದಲು ಎರಡು ಇಲಾಖೆಗಳ ಬಗ್ಗೆ ತಾವು ತೀವ್ರವಾಗಿ ಗಮನವನ್ನು ಹರಿಸಿದ್ದರೆ, ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿದ್ದರೆ ಅನೇಕ ಬಾಬುಗಳಲ್ಲಿ ಮೇಲೆ ತೆರಿಗೆಯನ್ನು ತೆಗೆಯಬಹುದಾಗಿತ್ತು. ಅಬ್ಕಾರಿ ಬಾಬು ಬಗ್ಗೆ ನಾವೆಲ್ಲರೂ ಹೇಳುತ್ತೇವೆ, ಒಬ್ಬೊಬ್ಬರು ಒಂದೊಂದು ರೀತಿಯ ಅಂಕಿ ಅಂಶಗಳನ್ನು ಕೊಡಬಹುದು. ಆದರೆ ವಸ್ತು ಸ್ಥಿತಿ ಏನೆಂದರೆ ಅಲ್ಲಿ ನಷ್ಟ ಆಗತಕ್ಕಂಥದ್ದು ಮೋಸ ಆಗತಕ್ಕಂಥದ್ದು, ಸರ್ಕಾರದ ಖಜಾನೆಗೆ ನ್ಯಾಯವಾಗಿ ಬರಬೇಕಾದಂತಹ ಹಣ ಅನ್ಯಾಯವಾಗಿ ಬೇರೆ ಕಡೆಗೆ ಹೋಗತಕ್ಕಂಥದ್ದನ್ನು ತಪ್ಪಿಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಮತ್ತೊಂದು ಗ್ರಾನೈಟ್ ಲೂಟಿ, ಇವೆರಡನ್ನು ನಿಮ್ಮ ನಿಯಂತ್ರಣಕ್ಕೆ ಪರಿಣಾಮಕಾರಿಯಾಗಿ ತಂದಿದ್ದರೆ ನೀವು ಜನಪರವಾಗಿ, ಸಾಮಾನ್ಯ ಜನರು ಒಪ್ಪುವ ರೀತಿಯಲ್ಲಿ ಆಯವ್ಯಯವನ್ನು ಮಂಡಿಸಬಹುದಾಗಿತ್ತು. ಒಂದು ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಗ್ರಾನೈಟ್ ವಿದೇಶಕ್ಕೆ ಹೋಗುತ್ತಿದೆ. ಬಹುಶ: ತಮಗೆ ಇದರಿಂದ ಬರತಕ್ಕಂತಹ ರಾಜಧನ ಅದರಲ್ಲಿ ಒಂದು ಭಾಗವೂ ಇಲ್ಲ. ಗ್ರಾನೈಟ್ ಲೂಟಿ ಒಂದು ಕಡೆ ಆದರೆ, ನಿಸರ್ಗ ನಾಶ ಮತ್ತೊಂದು ಕಡೆಯಾಗುತ್ತಿದೆ. ಆ ರೀತಿ ನಿಸರ್ಗ ನಾಶವಾದರೂ ಚಿಂತೆಯಿಲ್ಲ ಎನ್ನುವ ಸ್ಥಿತಿಯಲ್ಲಿ ನೀವು ಹೋಗುವುದಾದರೆ ಖಜಾನೆಗೆ ಹಣವಾದರೂ ಬರಬೇಕಲ್ಲ? ತಮಗೆ ಹೇಳುತ್ತಿದ್ದೇನೆ ಧಾರ್ಮಿಕ ಸ್ಥಳಗಳು ಇವತ್ತು ನಾಶವಾಗುತ್ತಿದೆ. ಅರಣ್ಯಪ್ರದೇಶ ನಾಶವಾಗಿದೆ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಸುಮಾರು 25 ಸಾವಿರ ಎಕರೆ ಪ್ರದೇಶಗಳಲ್ಲಿ ಗ್ರಾನೈಟನ್ನು ತೆಗೆಯುತ್ತಿದ್ದಾರೆ. ತಾವು ಇದನ್ನು

ನಿಯಂತ್ರಣ ಮಾಡಿದ್ದರೆ ಸರ್ಕಾರದ ಖಜಾನೆಗೆ ಸಾವಿರಾರು ಕೋಟಿ ರೂಪಾಯಿ ಹಣ ಬರುತ್ತಿತ್ತು. ಇದರ ಹಿಂದೆ ಯಾರ್ಯಾರು ಇದ್ದಾರೆ ಎಂಬುದು ಬೇರೆ ವಿಚಾರ. ಇದರಲ್ಲಿ ನಿಮ್ಮ ಬಗ್ಗೆ ಯಾವುದೇ ಭ್ರಷ್ಟಾಚಾರದ ಆರೋಪವನ್ನು ಮಾಡುವುದಿಲ್ಲ. ನಿಮ್ಮ ವ್ಯಕ್ತಿಗತದ ಬಗ್ಗೆ ಮಾತನಾಡುವುದಿಲ್ಲ. ನಿಮ್ಮ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅಬ್ಕಾರಿ ಮತ್ತು ಗ್ರಾನೈಟ್ ಈ ಎರಡು ಬಾಬುಗಳ ಬಗ್ಗೆ ತಾವು ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿದ್ದರೆ ರಾಜ್ಯದ ಜನತೆಗೆ ಹೊಸದಾಗಿ ತೆರಿಗೆಯಿಲ್ಲದೆ ಮತ್ತು ತೆರಿಗೆ ಕಡಿಮೆ ಮಾಡಿದಂತಹ ಆಯವ್ಯಯವನ್ನು ತಾವು ಕೊಡಬಹುದಾಗಿತ್ತು. ನಾನು ಅಬ್ಕಾರಿ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಬೆಂಗಳೂರು ನಗರ ಒಂದರಲ್ಲಿ ಬ್ರಾಂದಿ, ವಿಸ್ಕಿ, ರಮ್‌ನ 25 ಸಾವಿರ ಪೆಟ್ಟಿಗೆಗಳು ಹೋಗುತ್ತವೆ. ಒಂದು ಪೆಟ್ಟಿಗೆಗೆ ಅಬ್ಕಾರಿ ಶುಲ್ಕ 380. 25 ಸಾವಿರ ಪೆಟ್ಟಿಗೆಗಳಿಗೆ ಕನಿಷ್ಟ 97 ಲಕ್ಷದ 25 ಸಾವಿರ ಆದಾಯ ಬರುತ್ತಿದೆ. ವಾಣಿಜ್ಯ ತೆರಿಗೆ, ಸಗಟು ಮಾರಾಟ ಮಳಿಗೆಯವರು ಕೊಡತಕ್ಕಂತಹ ತೆರಿಗೆ ಎರಡನೇ ದರ್ಜೆ ತೆರಿಗೆ ಎಲ್ಲವನ್ನು ಲೆಕ್ಕ ಹಾಕಿದರೆ ಒಂದು ದಿನಕ್ಕೆ ಅಬ್ಕಾರಿ ಮತ್ತು ವಾಣಿಜ್ಯ ತೆರಿಗೆಯಿಂದ ಬೆಂಗಳೂರು ಒಂದರಲ್ಲಿ 2 ಕೋಟಿ 48 ಲಕ್ಷದ 25 ಸಾವಿರ ರೂಪಾಯಿ ಬರುತ್ತದೆ. ಅಂದರೆ ವರ್ಷಕ್ಕೆ ಕನಿಷ್ಟ 750 ಕೋಟಿ ರೂಪಾಯಿ ಬೆಂಗಳೂರು ಒಂದರಲ್ಲೇ ಬರುತ್ತದೆ. ಇಡೀ ಕರ್ನಾಟಕದಲ್ಲಿ ಕನಿಷ್ಟ 3 ಸಾವಿರ ಕೋಟಿ ಇದರಿಂದ ಅಂದಾಜು ಮಾಡಬಹುದು. ತಾವು ಈ ಬಗ್ಗೆ ಕೇಂದ್ರೀಕೃತ ಮಾಡಿ ಸ್ಪಷ್ಟವಾಗಿ ನಿರ್ಧಾರಕ್ಕೆ ಬಂದಿದ್ದರೆ ಈ ಆಯವ್ಯಯ ನಿಜವಾಗಿಯೂ ಒಂದು ಹೊಸ ಚಿಂತನೆಗೆ ಬರುತ್ತಾ ಇತ್ತು ಎಂದು ನನಗನಿಸುತ್ತದೆ. ಇಲ್ಲಿ ಎಷ್ಟು ಲೂಟಿಯಾಗುತ್ತದೆಂದು ಎಲ್ಲರಿಗೂ ಗೊತ್ತೇ ಇದೆ. ಆ ರೀತಿ ಗೊತ್ತಿದ್ದರೂ ಸಹ ಇದರ ಬಗ್ಗೆ ಕಣ್ಣುಮುಚ್ಚಿ ಕುಳಿತಿದ್ದೇವೆ. ಆದ್ದರಿಂದ ಈ ಬಗ್ಗೆ ತಾವು ಗಮನಹರಿಸಿ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿ. ತಾವು ಪಾನ ನಿರೋಧವನ್ನು ಜಾರಿಗೆ ತರುವುದಿಲ್ಲ, ಅಥವಾ ಖಜಾನೆಗೆ ಹಣನೂ ಬರುವಂತೆ ಮಾಡುವುದಿಲ್ಲ. ಇಲ್ಲ ಪಾನ ನಿರೋಧವನ್ನು ಜಾರಿಗೆ ತನ್ನಿ, ಇಲ್ಲ ಖಜಾನೆಗೆ ಹಣ ಬರಲಿ, ಎರಡರಲ್ಲಿ ಒಂದನ್ನಾದರೂ ಮಾಡಿ. ಸಾರಾಯಿ ಮಾರಾಟವನ್ನು ನಿಲ್ಲಿಸುತ್ತೇವೆಂದು ಹೇಳಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆದಾದನಂತರ ನಿರಂತರವಾಗಿ ಉಪಸಮಿತಿಗಳು ತಮ್ಮ ಅಧ್ಯಕ್ಷತೆಯಲ್ಲಿ ಆಯಿತು. ಈ ಸಾರಾಯಿ ಧಂದೆ ಯಾವ ರೀತಿ ನಡೆಯುತ್ತಿದೆ ಎಂದರೆ ಈ ಸಾರಾಯಿಯನ್ನು ತುಂಬತಕ್ಕದ್ದು ಪ್ಲಾಸ್ಟಿಕ್ ಚೀಲಗಳಲ್ಲಿ. ಇದರಲ್ಲಿ ಸರ್ಕಾರಿ ಮುದ್ರೆ ಇರತಕ್ಕಂತಹ ಒಂದು ಚೀಲವಿದ್ದರೆ ಇನ್ನೊಂದು ಸರ್ಕಾರಿ ಮುದ್ರೆಯಿಲ್ಲದೆ ತಾವೇ ಮುದ್ರೆ ಮಾಡಿಕೊಂಡಿರುವಂಥದ್ದು, ತಾವೇ ಪ್ರಿಂಟಿಂಗ್ ಪ್ರೆಸ್‌ಗಳನ್ನು ಇಟ್ಟುಕೊಂಡು ಖೋಟಾ ಮುದ್ರಣ ಮಾಡಿರುವಂಥದ್ದು ಎಲ್ಲಾ ಕಡೆ ಸರ್ಕಾರದ ಕಣ್ಣು ತಪ್ಪಿಸಿ ಈ ರೀತಿಯ ಸಾರಾಯಿ ವ್ಯವಹಾರ ಧಾರಳವಾಗಿ ನಡೆಯುತ್ತಿದೆ. ಆ ರೀತಿ ಯಾರಿಗೆ ಬೇಕಾದರೂ ಅನುಮತಿಯನ್ನು ಕೊಟ್ಟಿದ್ದೀರಾ? ಆಡಳಿತ ವೆಚ್ಚದ ನಿಯಂತ್ರಣದ ಬಗ್ಗೆ ತಾವು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ಸುಮಾರು 1.4.98 ರಿಂದ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿಮಾಡದೆ ಸ್ಥಗಿತಗೊಳಿಸಲು ಉದ್ದೇಶಿಸಿದ್ದೀರಿ, ಸ್ವಾಗತ. ಟೆಲಿಫೋನ್, ಪೆಟ್ರೋಲ್, ಡೀಸಲ್ ಪ್ರವಾಸಭತ್ಯೆ, ಮುಂತಾದವುಗಳ ಮೇಲೆ ವೆಚ್ಚಗಳನ್ನು ಕಡಿಮೆ ಮಾಡಲು ಕ್ರಮಗಳನ್ನು ಕೈಗೊಳ್ಳುತ್ತೇವೆಂದಿದ್ದೀರಿ ಅದನ್ನು ಸ್ವಾಗತಿಸುತ್ತೇನೆ. ಆದರೆ ತಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮ ರಾಜ್ಯದಲ್ಲಿ ಪ್ರಥಮ ದರ್ಜೆ ಅಧಿಕಾರಿಗಳು ಎಷ್ಟು ಜನ ಇರಬಹುದು? ಕರ್ನಾಟಕ ರಾಜ್ಯದಲ್ಲಿ ಐ ಎ ಎಸ್ ಅಧಿಕಾರಿಗಳು, 257, ಐಪಿಎಸ್ ಅಧಿಕಾರಿಗಳು 127, ಅನಂತರ ಪ್ರಧಾನ ಇಂಜಿನಿಯರ್‌ಗಳು,

ಮುಖ್ಯ ಇಂಜಿನಿಯರ್‌ಗಳು, ಅಧೀಕ್ಷಕ ಇಂಜಿನಿಯರ್‌ಗಳು 129 ಜನ ಇದ್ದಾರೆ. ಇವರ ಬಗ್ಗೆ ಲೆಕ್ಕ ಹಾಕಿದಾಗ, ಇಲ್ಲಿ ನಾನು ಯಾರ ಬಗ್ಗೆ ಕೂಡ ವೈಯಕ್ತಿಕವಾಗಿ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ. ಈ ರಾಜ್ಯದ ವ್ಯವಸ್ಥೆಗೆ ಇಷ್ಟೊಂದು ಜನ ಬಿಳಿ ಆನೆ ತರಹ, ಒಬ್ಬೊಬ್ಬ ಐ. ಎ. ಎಸ್. ಅಧಿಕಾರಿ ಯಾರನ್ನೂ ಕೂಡ ನಾನು ಆರೋಪಣೆ ಮಾಡುತ್ತಿಲ್ಲ. ಈ ಬಗ್ಗೆ ನಾವು ನೋಡಿದಾಗ ರಾಜಕಾರಣಿಗಳ ಪರಿಸ್ಥಿತಿ ಏನು? ಈ ರಾಜ್ಯದಲ್ಲಿ ಇರತಕ್ಕಂಥ ಅಧಿಕಾರ ವರ್ಗ. ಇದು 1ನೇ ದರ್ಜೆ ಅಧಿಕಾರ ವರ್ಗ ನಾನು ಹೇಳತಕ್ಕಂಥಾದ್ದು. 2ನೇ ದರ್ಜೆ ಮತ್ತು 3ನೇ ದರ್ಜೆ ಬಿಟ್ಟು ಬಿಡಿ. ಇವತ್ತು ಎಲ್ಲರೂ ಮಾತನಾಡತಕ್ಕಂಥಾದ್ದು ರಾಜಕಾರಣಿಗಳ ಮೇಲೆ ನ್ಯಾಯಾಂಗ ತನಿಖೆಯಾಗಬೇಕು. ಅವರ ಆಸ್ತಿ ಸಮಗ್ರ ತನಿಖೆಯಾಗಬೇಕೆಂದು. ಎಲ್ಲಾ ಕಡೆ ಹೇಳುತ್ತೇವೆ, ಪ್ರಾಮಾಣಿಕವಾದಂತಹ ಅಧಿಕಾರಿಗಳು ಇದ್ದಾರೆ. ನಮ್ಮಲ್ಲಿ ಒಳ್ಳೆಯ ದಕ್ಷ ಅಧಿಕಾರಿಗಳು ಇದ್ದಾರೆ. ನಾನು ಹೇಳುವುದೇನೆಂದರೆ ಅಧಿಕಾರಿಗಳ ಬಗ್ಗೆ ಒಂದು ತನಿಖೆ ಆಗಿಹೋಗಲಿ. ಸಾರ್ವಜನಿಕ ತನಿಖೆ, ಸಮಗ್ರವಾಗಿ ಯಾರ್‍ಯಾರು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ. ಎಲ್ಲೆಲ್ಲಿ ಮನೆ ಕಟ್ಟಿದ್ದಾರೆ? ಸ್ವಂತ ಮನೆಯನ್ನು ಕಟ್ಟಿಕೊಂಡು ಬಾಡಿಗೆ ಮನೆಯಲ್ಲಿ ಇರುವವರು ಎಷ್ಟು ಜನ? ಇದೆಲ್ಲಾ ಸಮಗ್ರವಾಗಿ ಚಿಂತನೆಗೆ ಬರಲಿ. ನಮ್ಮ ಬಗ್ಗೆ ಕೂಡ ತನಿಖೆ ಆಗಲಿ. ಮತ್ತು ಪ್ರಜಾಸತ್ತೆ ವ್ಯವಸ್ಥೆಯಲ್ಲಿ ಒಂದು ಕಡೆ ಗೋಪ್ಯವಾಗಿ ಯಾವುದೇ ಚಿಂತನೆ ಇಲ್ಲದೆ ಯಾರ ಗಮನಕ್ಕೂ ಇರುವಂತಹ ಒಂದು ವರ್ಗ. ಆದರೆ ರಾಜಕಾರಣಿಗಳು ಬೀದಿಗೆ ಬಂದಿದ್ದಾರೆ. ಅವರನ್ನು ಯಾರು ಬೇಕಾದರೂ ಎಲ್ಲಿ ಬೇಕಾದರೂ ಎಳೆಯಬಹುದು. ಅದಕ್ಕೆ ನಾನು ಹೇಳುತ್ತಿದ್ದೇನೆ, ಸಮಗ್ರವಾಗಿ ಐ. ಎ. ಎಸ್. ಮತ್ತು ಐ. ಪಿ. ಎಸ್ ಮೊದಲನೆ ದರ್ಜೆ ಅಧಿಕಾರ ವರ್ಗ ಅರಣ್ಯ ಮುಖ್ಯ ಅಧಿಕಾರ ವರ್ಗವನ್ನು ಸೇರಿಸಿ ಒಂದು ಹಂತದಲ್ಲಿ ತನಿಖೆಯಾಗಲಿ. ನಾನು ಎಲ್ಲರೂ ಭ್ರಷ್ಟರಿದ್ದಾರೆ ಎಂದು ಹೇಳುವುದಿಲ್ಲ. ನಮ್ಮಲ್ಲಿ ಅನೇಕರು ಬಹಳ ಉನ್ನತವಾದಂತಹ ಸ್ಥಾನದಲ್ಲಿ ಇದ್ದು ಉತ್ತಮ ಅಧಿಕಾರಿಗಳು ಇದ್ದಾರೆ. ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೋಟಿ ಕೋಟಿ ರೂಪಾಯಿ ಲೂಟಿ ಮಾಡಿ ಲೋಕಾಯುಕ್ತದಲ್ಲಿ ಇರುವವರು, ಬೇರೆ ಬೇರೆ ತನಿಖೆಯಲ್ಲಿ ಇರುವವರು ಇದ್ದಾರೆ. ಅವರೆಲ್ಲರನ್ನೂ ಇವತ್ತು ನೀವು ಒಂದು ಕಡೆಯಿಂದ ಸಮಗ್ರ ಚಿಂತನೆ ಮಾಡಿ ನಿಮಗೆ ಪ್ರಮಾಣಿಕವಾಗಿ ಶಕ್ತಿ ಇದ್ದರೆ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಅಧಿಕಾರಿಗಳ ಸಭೆ ಕರೆದಿರುವುದಕ್ಕೆ ನಾನು ಇದನ್ನು ಸ್ವಾಗತಿಸುತ್ತೇನೆ. ಒಬ್ಬ ಅಧಿಕಾರಿ ಹೇಳುತ್ತಾರಂತೆ ನಿಮ್ಮ ಮುಖ್ಯಮಂತ್ರಿಗಳ ಕಾರ್ಯಾಲಯಕ್ಕೆ, ನೀವು ಎಷ್ಟು ದಿವಸ ಇರುತ್ತೀರಿ? ಎಂದು ಹೇಳುತ್ತಾರಂತೆ ಈ ಮಾತನ್ನು ನಾನು ಹೇಳುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹಾಗೆ ಹೇಳಿದವರು ಯಾರು ಎಂದು ಹೇಳಬೇಕು. ಈ ಸದನದ ಮುಂದೆ ತಾವು ತಮ್ಮ ಉತ್ತರವನ್ನು ಕೊಡುವಾಗ ಹೇಳಬೇಕು. ಈ ಪ್ರಜಾಸತ್ತೆ ವ್ಯವಸ್ಥೆಯಲ್ಲಿ ನಾವು ಮೂರು ದಿವಸ ಇರಬಹುದು. ಒಂದು ನಿಮಿಷ ಇರಬಹುದು. ಈ ರೀತಿಯಾದ ಅತ್ಯಂತ ಸೊಕ್ಕಿನ ಅಧಿಕಾರಿಗಳ ಒಂದು ಗುಂಪು ಇದೆ. ಮೂರು ವರ್ಗ ಇದೆ. ಸರ್ಕಾರವನ್ನು ತೆಗೆಯಬೇಕೆಂದು ಇರುವ ವರ್ಗ. ಸರ್ಕಾರದ ಪರವಾಗಿ ಇರಬೇಕೆನ್ನುವ ಒಂದು ವರ್ಗ. ತಟಸ್ಥವಾಗಿರತಕ್ಕಂಥ ವರ್ಗ. ಈ ವರ್ಗದ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿ. ತಾವು ಏನು ವೆಚ್ಚವನ್ನು ಕಡಿಮೆ ಮಾಡಬೇಕೆಂದು ಮಾಡಿದ್ದೀರಿ, ಆ ವೆಚ್ಚ ಕಡಿಮೆ ಮಾಡುವುದರ ಬಗ್ಗೆ ಎಷ್ಟು ಅಧಿಕಾರಿಗಳನ್ನು ಕಡಿಮೆ ಮಾಡಬೇಕು, ಯಾವ್ಯಾವ ಇಲಾಖೆಯನ್ನು ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಯಾರ ಮುಲಾಜಿಗೂ ಒಳಗಾಗದೆ ನೀವು ಇಂತಿಂತಹ ಇಲಾಖೆಯನ್ನು ಸಂಪೂರ್ಣವಾಗಿ

ಕಡಿಮೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಬೇಕು. ಮತ್ತು ಐ. ಎ. ಎಸ್. ಮತ್ತು ಐ.ಪಿ. ಎಸ್. ಉನ್ನತ ಮಟ್ಟದ ಅಧಿಕಾರಿಗಳ ಬಗ್ಗೆ ತನಿಖೆ ಮಾಡುವ ಬಗ್ಗೆ ತಾವು ಸ್ಪಷ್ಟ ಉತ್ತರವನ್ನು ಈ ಸದನದ ಮುಂದೆ ಇಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

ಅಧ್ಯಕ್ಷರು :- ಐ. ಎ. ಎಸ್. ಮತ್ತು ಐ.ಪಿ. ಎಸ್. ಖೋಟಾ ಫಿಕ್ಸ್ ಮಾಡುತ್ತಾರಲ್ಲ, ಹೇಗೆ ಮಾಡುವುದು? ಇಷ್ಟು ಜನ ಒಂದೊಂದು ರಾಜ್ಯಕ್ಕೆ ಇರಬೇಕೆಂದು ಇದೆಯಲ್ಲ. ಆಲ್ ಇಂಡಿಯಾ ಸರ್ವೀಸಸ್, ಅದು ಹೇಗೆ ಮಾಡುತ್ತಾರೆ? Who decides that?

ಶ್ರೀ ಎಂ. ಪಿ. ಪ್ರಕಾಶ್ :- ಇದನ್ನು ಗೌವರ್ನಮೆಂಟ್ ಆಫ್ ಇಂಡಿಯಾದವರು ನಿರ್ಣಯ ಮಾಡುತ್ತಾರೆ. ಅವರು ಖೋಟಾ ಫಿಕ್ಸ್ ಮಾಡಿ ಕೇಡರ್ ಯು. ಪಿ. ಎಸ್. ಯವರಿಗೆ ತಿಳಿಸುತ್ತಾರೆ.

ಅಧ್ಯಕ್ಷರು :- ಇದನ್ನು ಜನಸಂಖ್ಯೆ ಆಧಾರದ ಮೇಲೆ ಮಾಡುತ್ತಾರೆಯೇ? What is the basis for it?

ಶ್ರೀ ಎಂ.ಪಿ. ಪ್ರಕಾಶ್ :- ನನಗೆ ಇದರ ಬಗ್ಗೆ ಅಷ್ಟು ವಿವರಗಳು ತಿಳಿದಿಲ್ಲ.

ಅಧ್ಯಕ್ಷರು :- ಇದು ಆಲ್ ಇಂಡಿಯಾ ಸರ್ವೀಸಸ್ ಅಲೋಕೇಷನ್ ಹೇಗೆ ಆಗುತ್ತದೆ? is the State Government consulted before it is done.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಅವರನ್ನು ರಾಜ್ಯಗಳಿಗೆ ಹಾಕಬೇಕೆಂದರೆ ಮ್ಯಾಂಡೇಟರಿ ಇದೆಯೇ?

ಅಧ್ಯಕ್ಷರು :- ಹೌದು, ನನಗೂ ನಿಮ್ಮ ಹಾಗೆ ಆಸಕ್ತಿ ಇದೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಏಕೆಂದರೆ ಆ ಪುಣ್ಯಾತ್ಮರು ಇಲ್ಲದಿದ್ದರೆ ಈ ರಾಜ್ಯದಲ್ಲಿ ಏನೂ ನಡೆಯುವುದಿಲ್ಲವೆ ಎಂದು.

ಶ್ರೀ ಸಿದ್ಧರಾಮಯ್ಯ :- ಸ್ಟೇಟ್‌ಗೆ ಕೇಂದ್ರ ಸರ್ಕಾರದವರು ಖೋಟಾ ಫಿಕ್ಸ್ ಮಾಡುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಅಲ್ಲಿಯ ಐ. ಎ. ಎಸ್. ಅಧಿಕಾರಿಗಳು ಮತ್ತು ಕೇಡರ್ ಸ್ಟ್ರೆಂಗ್ತ್ ಇದೆಲ್ಲವನ್ನು ತರಿಸಿಕೊಂಡು ಇರುತ್ತಾರೆ. ಅದರ ಮೇಲೆ ಅವರು ನಿರ್ಣಯ ಮಾಡುತ್ತಾರೆ.

Mr. Speaker :- Whether the Central Government is taken into confidence? Are they consulted before the quota is fixed.

Sri. M.P. Prakash:- Yes.

ಶ್ರೀ ಹೆಚ್. ಎನ್. ನಂಜೇಗೌಡ :- 1967ರಲ್ಲಿ ಎಷ್ಟು ಜನ ಇದ್ದರು, ಈಗ ಅದರ ನಾಲ್ಕು ಪಟ್ಟು ಆಗಿದೆ. ಅಲ್ಲಿ ಕೇಂದ್ರ ಸರ್ಕಾರ ಎಂದರೆ ಖೋಟಾ ಫಿಕ್ಸ್ ಮಾಡುವವರು ಐ. ಎ. ಎಸ್. ಅಧಿಕಾರಿಗಳು, ಅದನ್ನು ತಿಳಿದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ಸಂಖ್ಯೆ ಕಡಿಮೆಯಾಗಲಿಲ್ಲವೆಂದರೆ ಆಡಳಿತದ ಮೇಲೆ ಹೊರೆ ಬೀಳುತ್ತದೆ, ಭಾರವಾಗುತ್ತದೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಸೌಜನ್ಯವಾಗಿ,

ಪ್ರೀತಿಯಿಂದ ಆಡಳಿತ ನಡೆಸಿ ಬಂದವರಿಗೆ ಉತ್ತರ ಕೊಟ್ಟು ಆಡಳಿತ ಕೊಡತಕ್ಕಂಥವರು ಇದ್ದಾರೆ. ಮಂತ್ರಿಗಳ ಮುಖಕ್ಕೆ ಸಿಗರೇಟು ಸೇದಿ ಹೊಗೆ ಬಿಡತಕ್ಕಂಥ ಅಧಿಕಾರಿಗಳೂ ಇದ್ದಾರೆ. ಅದರ ಬಗ್ಗೆ ತಕರಾರು ಇಲ್ಲ. ಮಂತ್ರಿಗಳು ಎದ್ದು ನಿಂತಾಗ ಅಧಿಕಾರಿಗಳು ಕೆಳಗೆ ಕುಳಿತುಕೊಳ್ಳುವವರು ಇದ್ದಾರೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಅದು ಅವರವರ ದರ್ಜೆ, ಅವರವರ ವರ್ಗಕ್ಕೆ ಹೋಗುತ್ತದೆ. ಬಹಳ ಸೌಜನ್ಯ ಪ್ರೀತಿಯಿಂದ ಕಂಡಿರತಕ್ಕಂಥ ಅಧಿಕಾರಿಗಳು ಉಂಟು. ಎಷ್ಟೋ ಜನ ಅಧಿಕಾರಿಗಳು ಶಾಸಕರು ಹೋದಾಗ ಅವರಿಗೆ ಕೈ ಮುಗಿದರೆ ಇವರಿಗೆ ಕೈ ಮುಗಿಯದೆ ಇರತಕ್ಕಂಥ ಅಧಿಕಾರಿಗಳು ಉಂಟು. ಆದುದರಿಂದ ಇಂತಹ ಅನೇಕ ವರ್ಗದ ಅಧಿಕಾರಿಗಳು ಇದ್ದಾರೆ. ಈ ಪರಿಸ್ಥಿತಿಯಲ್ಲಿ ಪ್ರಜಾಸತ್ತೆ ವ್ಯವಸ್ಥೆಯಲ್ಲಿ ಅಧಿಕಾರಿಗಳ ವರ್ತನೆ ಮತ್ತು ಪ್ರಜಾಪ್ರಭುತ್ವದ ಚಿಂತನೆ ಇವೆರಡು ಬೇರೆ ದಿಕ್ಕಾದ್ದರಿಂದ ಈ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಮಾಡಬೇಕಾದ್ದು ಕರ್ತವ್ಯ. ಅದು ಸರ್ಕಾರಕ್ಕೆ ಸೇರತಕ್ಕಂಥಾದ್ದು. ನಾವು ಅನೇಕ ಸಲ ಹೇಳಿದ್ದೇವೆ. ಶಾಸಕರುಗಳಿಗೆ ಸವಲತ್ತು ಎಂದರೆ ಏನು? ಹಣಕಾಸು ಸವಲತ್ತು ಅಲ್ಲ. ಅಧಿಕಾರಿಗಳನ್ನು ಕಾಣುವುದಕ್ಕೆ ಹೋದಾಗ ಅಧಿಕಾರಿಗಳು ಯಾವ್ಯಾವ ರೀತಿ ವರ್ತನೆ ತೋರುತ್ತಾರೆ ಅದರ ಬಗ್ಗೆ ಮತ್ತೊಮ್ಮೆ ನೀವು ಒಂದು ಸುತ್ತೋಲೆಯನ್ನು ಕಳುಹಿಸಬೇಕಾದಂತಹ ಅವಶ್ಯಕತೆ ಇದೆ. ಅನೇಕ ಹಿರಿಯ ಅಧಿಕಾರಿಗಳು ಪ್ರಾಮಾಣಿಕವಾಗಿ ನಡೆದುಕೊಂಡಿರತಕ್ಕಂಥಾದ್ದು ಉಂಟು. ಆ ದೃಷ್ಟಿಯಿಂದ ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ, ಯಾವ್ಯಾವುದನ್ನು ತಾವು ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆ ಹೇಳುವುದಾದರೆ ವಿಭಾಗಾಧಿಕಾರಿಗಳು ಬೇಕಾಗಿಲ್ಲ. ಜಿಲ್ಲಾಧಿಕಾರಿಗಳು ಇದ್ದಾಗ ಅದಕ್ಕೆ ಒಂದು ವ್ಯವಸ್ಥೆ ಬೇಕಾಗಿಲ್ಲ. ಈಗ ನಮ್ಮಲ್ಲಿ ತಾಲ್ಲೂಕು ಪಂಚಾಯಿತಿ ವ್ಯವಸ್ಥೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಇರುತ್ತಾರೆ. ಮತ್ತು ಕ್ಷೇತ್ರಾಧಿಕಾರಿ ಇರುತ್ತಾರೆ. ಎರಡೂ ಬೇಕಾಗಿಲ್ಲ. ಒಂದೇ ಹುದ್ದೆ ಸಾಕು. ಮತ್ತು ವಿದ್ಯಾ ಇಲಾಖೆಯಲ್ಲಿ, ಈ ರೀತಿಯಾಗಿ ಕೆಲವನ್ನು ತಾವು ಪಟ್ಟಿ ಮಾಡಿ ಪ್ರಾಮಾಣಿಕವಾಗಿ ಇದನ್ನು ಕಡಿಮೆ ಮಾಡಿದರೆ ಈ ಸರ್ಕಾರದ ಬೊಕ್ಕಸಕ್ಕೆ ಅನುಕೂಲವಾಗುತ್ತದೆ. ಮತ್ತು ಆಯವ್ಯಯಕ್ಕೂ ಬೆಲೆ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ಮತ್ತು ವರ್ಗಾವರ್ಗಿ ಬಗ್ಗೆ ಕೂಡ ನೀವು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು. ಏನಾಗುತ್ತದೆಂದರೆ ವಿಧಾನಸೌಧದ ಮೂರನೇ ಮಹಡಿ, 2ನೇ ಮತ್ತು 1ನೇ ಮಹಡಿಗೆ, ಶಾಸಕರ ಭವನಕ್ಕೆ ಶಾಸಕರ ಹತ್ತಿರ ಹೋಗತಕ್ಕಂಥಾದ್ದು, ಅವರನ್ನು ಕೇಳತಕ್ಕಂಥಾದ್ದು, ನಾವು ವಿಧಿ ಇಲ್ಲದೆ ಮಾಡುತ್ತೇವೆ. ಇದೆಲ್ಲಾ ಒಂದು ರೀತಿಯಲ್ಲಿ ಅತ್ಯಂತ ಅಪಾಯಕಾರಿ ಬೆಳವಣಿಗೆ. ಈ ಬಗ್ಗೆ ಸ್ಪಷ್ಟ ಚಿಂತನೆಯನ್ನು ಮಾಡಬೇಕು. ಮತ್ತು ತಮ್ಮ ಮುಂದೆ ಇವತ್ತು ಹೇಳುವುದೇನೆಂದರೆ 4,493 ಪ್ರಾಥಮಿಕ ಶಾಲೆಗಳನ್ನು ಏನು ಪ್ರಾರಂಭ ಮಾಡಿದ್ದೀರಿ ಎಂದು ಹೇಳುತ್ತಿದ್ದೀರಿ, ಅದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಉಪಾಧ್ಯಾಯರು ಇಲ್ಲ. ಶಾಸಕರಿಗೆ ಕೆಲವು ಶಾಲೆಗಳನ್ನು ಕೊಟ್ಟಿದ್ದೀರಿ. ಇವರು ಆರ್ಡರ್ ಕಳುಹಿಸುವಾಗ ಹೊಸ ಶಾಲೆಗಳಿಗೆ ಇರತಕ್ಕಂಥ ಉಪಾಧ್ಯಾಯರನ್ನು ಬಳಸಿಕೊಂಡು ಪ್ರಾರಂಭ ಮಾಡಿ ಎಂದು ಹೇಳಿದರೆ ವಿನಹ ಹೊಸ ಶಾಲೆಗೆ ಉಪಾಧ್ಯಾಯರನ್ನು ಎಲ್ಲಿಂದ ತರಬೇಕು?

ಶ್ರೀ ಸಿದ್ಧರಾಮಯ್ಯ :- 30 ಸಾವಿರ ಉಪಾಧ್ಯಾಯರುಗಳ ರಿಕ್ರೂಟ್‌ಮೆಂಟ್ ನಡೆಯುತ್ತಿದೆ. ಮಾರ್ಚ್ ಏಪ್ರಿಲ್ ಒಳಗೆ ಮುಗಿಯುತ್ತದೆ. ಎಲ್ಲೆಲ್ಲಿ ಹೊಸ ಶಾಲೆಗಳು ಆಗಿದೆ ಅಲ್ಲಿ ಅಪಾಯಿಂಟ್ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಹೇಳಿದ್ದು, 50ನೇ ವರ್ಷದ ಸ್ವಾತಂತ್ರ್ಯ ಸಂದರ್ಭದಲ್ಲಿ ಶಾಸಕರು ಹೇಳಿದಂತೆ ಶಾಲೆ ಪ್ರಾರಂಭ ಮಾಡಿ ಎಂದು ಹೇಳಿದರಲ್ಲ, ಹೇಳಿದ ಮೇಲೆ ಅದಕ್ಕೆ ಬೇಕಾದಂತಹ ಉಪಾಧ್ಯಾಯರುಗಳನ್ನು ಕಳುಹಿಸದೆ ಹೋದರೆ ಶಾಲೆ ಪ್ರಾರಂಭವಾಗುವುದು ಹೇಗೆ?

Sri Siddaramaiah:- Recruitment process is going on.

ಅಧ್ಯಕ್ಷರು:- ಕಳುಹಿಸುತ್ತಿದ್ದಾರೆ ಈಗ. ಅದೆಲ್ಲಾ ತಯಾರು ಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಅದಕ್ಕೆ ಹೇಳಿದ್ದುದು, ರಿಕ್ರೂಟ್‌ಮೆಂಟ್ ನಡೆಯುತ್ತಿದೆ, ಬರುತ್ತಿದೆ, ಐರಾವತ ಇಳಿಯುತ್ತಿದೆ.

ಶ್ರೀ ಅಶೋಕ ಕಾಟ್ವೆ:- ಹುಬ್ಬಳ್ಳಿ- ಧಾರವಾಡದಲ್ಲಿ ಮೂರು ಜನ ಶಾಸಕರು ಇದ್ದಾರೆ. ಅಲ್ಲಿಗೆ ಎಷ್ಟು ಶಾಲೆಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಶಿಕ್ಷಣ ಸಚಿವರು ಹೇಳಬೇಕು.

ಅಧ್ಯಕ್ಷರು :- ಅಲ್ಲಿ ಅಭಿವೃದ್ಧಿಯಾಗಿರುವ ಜಾಗ ಅದು. ಅಲ್ಲಿ ಏನು ಶಾಲೆಯಾಗುತ್ತದೆ? ಹಳ್ಳಿಗಾಡಿನಲ್ಲಿ ಕೊಡುತ್ತಾರೆ. ಸಿಟಿಯಲ್ಲಿ ಕೊಡುತ್ತಾರೆಯೇ?

ಶ್ರೀ ಅಶೋಕ ಕಾಟ್ವೆ:- ಹುಬ್ಬಳ್ಳಿಯ ಶಹರದಲ್ಲಿ 10- 10 ಕಿಲೋಮೀಟರ್ ದೂರದ ಶಾಲೆಗಳಿಗೆ ಹೋಗವಂತಹ ಬಡಾವಣೆಗಳೂ ಇವೆ.

ಅಧ್ಯಕ್ಷರು :- ಬೆಂಗಳೂರು, ಹುಬ್ಬಳ್ಳಿ ಬೆಳಗಾಂನಲ್ಲಿ ಏನಾಗುತ್ತದೆ? ಹಳ್ಳಿಗಳಲ್ಲಿ ಕೊಡುವುದು.

ಶ್ರೀ ವಾಟಾಳ್ ನಾಗರಾಜ್ :- 4,493 ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದ್ದಾರೆ ಸ್ವಾಗತ. ಅದರ ಈ ಶಾಲೆಗಳ ವ್ಯವಸ್ಥೆ ಮತ್ತು ಪರಿಸ್ಥಿತಿ ಬಹಳ ಉತ್ತಮ ಮಟ್ಟದಲ್ಲಿದ್ದರೆ ಖಾಸಗಿ ಶಾಲೆಗಳಿಗೆ ಯಾರೂ ಹೋಗುವುದಕ್ಕೆ ಸಾಧ್ಯವಿಲ್ಲ. ಅನೇಕ ಶಾಲೆಗಳು ದನದ ದೊಡ್ಡಿಗಿಂತ ಕಡಿಮೆ ಇವೆ. ಹೀಗಿರುವುದರಿಂದ ಖಾಸಗಿ ಶಾಲೆಗಳಿಗೆ ಹೋಗತಕ್ಕಂಥದ್ದು. ಖಾಸಗಿ ಶಾಲೆಗೆ ಹೋದರೆ ಏನು ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ಕ್ಯಾಪಿಟೇಷನ್ ಶುಲ್ಕ ಒಂದು ರೀತಿ ಪಿಡುಗು. ಈ ರೋಗ ನಿರಂತರವಾಗಿ ನಡೆಯುತ್ತಿದೆ. ಈ ರೋಗವನ್ನು ನಿಲ್ಲಿಸತಕ್ಕಂತಹ ಒಂದು ಚಿಂತನೆ ತಮ್ಮಲ್ಲಿ ಆಗಿದೆಯೇ?

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿ ಆಸೀನರಾದರು)

ಖಾಸಗಿ ಪ್ರಾಥಮಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಬೇಕಾದರೆ ಮೊದಲು ಹಣ ಇಟ್ಟುಕೊಂಡು ಒಳಗಡೆ ಹೋಗತಕ್ಕಂತಹ ವ್ಯವಸ್ಥೆ ಇದೆ. ಆ ಬಗ್ಗೆ ನೀವು ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗಿಂತ ಉತ್ತಮಪಡಿಸತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡಿದ್ದರೆ ಅದಕ್ಕೆ ಬೇಕಾದ ಹಣಕಾಸನ್ನು ಒದಗಿಸಿದ್ದರೆ ಅದು ನಿಜವಾಗಿ ಅನುಕೂಲವಾಗುತ್ತದೆ ಎಂದು ನನ್ನ ಪ್ರಾಮಾಣಿಕವಾದ ಚಿಂತನೆ. ಒಂದು ಕಡೆ ಕ್ಯಾಪಿಟೇಷನ್ ಶುಲ್ಕ, ಇದು ಒಂದು ರೀತಿ ಇವತ್ತು ಲಾಬಿಯಾಗಿದೆ. ಕ್ಯಾಪಿಟೇಷನ್‌ಶುಲ್ಕ, ವೈದ್ಯಕೀಯ ಕಾಲೇಜು ಮತ್ತು ತಾಂತ್ರಿಕ ಕಾಲೇಜು ನಡೆಸತಕ್ಕಂಥವರು ಒಂದು ರೀತಿ ಸ್ವಾತಂತ್ರ್ಯಕ್ಕೆ ಹಿಂದೆ ನಮ್ಮಲ್ಲಿ ಸಂಸ್ಥಾನಗಳಿದ್ದವು, ಅವರದೇ ಆದ ರಾಜ್ಯ ಮತ್ತು ರಾಜರು ಅದೇ ತರಹ ಈ ವ್ಯವಸ್ಥೆ ಇದೆ. ಈ ವೈದ್ಯಕೀಯ ಕಾಲೇಜು ನಡೆಸತಕ್ಕಂಥ ಈ ಜನ ಒಂದು ರೀತಿ ಪಾಳೆಗಾರರಾಗಿದ್ದಾರೆ. ಕನಿಷ್ಟ 20 ಲಕ್ಷದಿಂದ 75

ಲಕ್ಷದವರೆಗೆ ಇದಕ್ಕೆ ಏನು ಯಾವ ತೆರಿಗೆ ಇಲ್ಲ, ಯಾವ ವ್ಯವಸ್ಥೆನೂ ಇಲ್ಲ, ಇದು ಒಂದು ರೀತಿ ಕಪ್ಪು ಹಣ. ಇದನ್ನು ಬಹಳ ಧಾರಾಳವಾಗಿ ಅವರು ಎಲ್ಲಾ ಸರ್ಕಾರಗಳೂ ಬಂದರೂ ಸರ್ಕಾರವನ್ನು ಲಗಾಮಿನಲ್ಲಿ ಹಿಡಿತದಲ್ಲಿಟ್ಟು ಕೊಳ್ಳತಕ್ಕಂತಹ ಈ ಸಂಸ್ಥೆಗಳು.

ಶ್ರೀ ಹೆಚ್. ಎನ್. ನಂಜೇಗೌಡ:- ಈಗಿರುವ ಪರಿಸ್ಥಿತಿಯಲ್ಲಿ ಪ್ರೈವೇಟ್ ಮೆಡಿಕಲ್ ಕಾಲೇಜಿನಲ್ಲಿ 100ಕ್ಕೆ ಐದು ಸೀಟ್ ಸಿಗುತ್ತವೆ. ಕೆಲವು ಕಾಲೇಜುಗಳು ಇದೇ ರೀತಿ ಆದರೆ ಐದಾರು ವರ್ಷದಲ್ಲಿ ಕೆಲವು ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆ. ಅವರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇರುವುದಿಲ್ಲ. ಆಸ್ಪತ್ರೆ ಮೈಂಟೆನೆನ್ಸ್ ಎಷ್ಟು, ಒಕ್ಕಲಿಗರ ಸಂಘದ್ದೇ ನಾನು ನೋಡುತ್ತಿದ್ದೇನೆ, ದೂರದಿಂದ ನೋಡಿದರೂ ನನಗೆ ಅರ್ಥವಾಗುತ್ತಿದೆ. ಇವತ್ತು ಹಾಲಿ ಅಕೌಂಟ್ ನೋಡಿದರೆ ಈ ಮೂರು ತಿಂಗಳು ಸಂಬಳ ಕೊಡುವುದಕ್ಕೆ ಅವರ ಹತ್ತಿರ ದುಡ್ಡು ಇಲ್ಲ. ಈ ಪರಿಸ್ಥಿತಿಯಲ್ಲಿ ಯಾವುದೋ ಕೋರ್ಟ್ ಆರ್ಡರ್ ಆಗಿ, ಯಾವುದೋ ಕಾನೂನು ಮಾಡಿ ಐದು ಪರ್ಸೆಂಟ್‌ಗೆ ಇಳಿಸಿದ್ದಾರೆ. ಐದು ಸೀಟ್‌ನಲ್ಲಿ ಅವರು 50 ಸೀಟ್‌ಗಳಲ್ಲಿ ಮಾಡುವಷ್ಟು ಹಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಇದು ದರೋಡೆ ಅದರಲ್ಲಿ ಏನೂ ಅನುಮಾನ ಇಲ್ಲ. ಇದು ಗೌರವಸ್ಥರು ಮಾಡತಕ್ಕಂತಹ ದರೋಡೆ. ದರೋಡೆಕೋರರು ಮಾಡುವುದು ಅಲ್ಲ. ಇದು ಒಂದು, ಹಗಲು ದರೋಡೆ, ಅದರಲ್ಲಿ ಏನೂ ಅನುಮಾನ ಇಲ್ಲ. ಇದರ ಬಗ್ಗೆ ನಾವು ಏನು ಅವರ ಬಗ್ಗೆ ಕರುಣೆ ತೋರಿಸಬೇಕಾಗಿಲ್ಲ, ಮತ್ತು ಚಿಂತನೆ ಮಾಡಬೇಕಾಗಿಲ್ಲ. ಅಷ್ಟು ಕಷ್ಟ ಇರುವವರು ಎಲ್ಲಾ ಮುಚ್ಚಿ ಗೋಡೋನ್ ಮಾಡಿ ಹೋಗಲಿ. ಯಾರು ಬೇಡವೆಂದು ಹೇಳುತ್ತಾರೆ ವೈದ್ಯಕೀಯ ಕಾಲೇಜ್ ನಮಗೋಸ್ಕರ ಇದೆಯಾ? ಹೊರಗಡೆಯಿಂದ ಬರುವವರೆಗೆ ತಯಾರಿ ಮಾಡುವುದಕ್ಕೆ ಇರುವುದೇ? ಕರ್ನಾಟಕದವರು ಐದು ಜನ ಇರುವುದಿಲ್ಲ, 99 ಜನ ಹೊರಗಡೆಯಿಂದ ಬರತಕ್ಕಂತಹವರು ಇರುತ್ತಾರೆ. ನಮ್ಮ ವೈದ್ಯಕೀಯ ಕಾಲೇಜು ನಡೆಸುವ ಮಹಾ ಮಹನೀಯರುಗಳು ಅವರು ಸ್ವಲ್ಪ ಹೋಗಿ ನೋಡಬೇಕು. ಯಾರ್‍ಯಾರಿಗೆ ಕೊಟ್ಟಿದ್ದಾರೆ, ಯಾವ ಯಾವ ದೇಶದವರಿಗೆ ಕೊಟ್ಟಿದ್ದಾರೆ, ಎಂದು ಗೊತ್ತಾಗುತ್ತದೆ. ಅವರೇ ಸರ್ಕಾರವನ್ನು ಹಿಡಿತದಲ್ಲಿ ಇಟ್ಟುಕೊಳ್ಳತಕ್ಕಂಥವರು, ಅವರಿಗೆ ಅವರ ಕೈಯಲ್ಲಿ ಒಂದು ದೊಡ್ಡ ಲಾಬಿ, ಅಬಕಾರಿ ಲಾಬಿ ಹೇಗಿತ್ತು, ಗ್ರಾನೈಟ್ ಲಾಬಿ ಹೇಗೆ ಸೇರಿದೆ. ಈಗ ಕ್ಯಾಪಿಟೇಷನ್ ಲಾಬಿ ಸೇರಿದೆ. ನಮ್ಮ ಬಡ ಮಕ್ಕಳಿಗೆ ಯಾರಿಗೂ ಇಲ್ಲ. ನಮ್ಮ ಊರಿನವರಿಗೆ, ನಮ್ಮ ಕನ್ನಡಿಗರಿಗೆ ಯಾರಿಗೂ ಇಲ್ಲ. ಯಾರೋ ಬೇರೆ ರಾಜ್ಯದವರಿಗೆ ಅವರ ಪಾದ ಪೂಜೆ ಮಾಡಿ ಕರೆಯುತ್ತಾರೆ. ಕ್ಯಾಪಿಟೇಷನ್ ತೆಗೆದುಕೊಳ್ಳಬೇಕೆಂದರೆ ಅಷ್ಟು ಸುಲಭವೇನಲ್ಲ. ಇದರ ಬಗ್ಗೆ ಯಾರೂ ಇವರನ್ನು ಕ್ಷಮಿಸುವುದಕ್ಕೆ ಸಾಧ್ಯವಿಲ್ಲ. ಬಹುಶ: ಇವೆಲ್ಲಾ ರಾಷ್ಟ್ರೀಕರಣ ಮಾಡಬೇಕೆಂದು ನನಗನ್ನಿಸುತ್ತದೆ. ವೈದ್ಯಕೀಯ ಕಾಲೇಜುಗಳು ಎಂತಹವರದ್ದೇ ಇರಲಿ, ಎಷ್ಟೇ ದೊಡ್ಡವರೆ ಇರಲಿ, ಅವರು ಎಷ್ಟೇ ದೊಡ್ಡ, ಮಹತ್ತರ ವ್ಯಕ್ತಿಗಳಾಗಿದ್ದರೂ, ಇಡೀ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳನ್ನು ನೇರವಾಗಿ ರಾಷ್ಟ್ರೀಕರಣ ಮಾಡತಕ್ಕಂಥದ್ದು ನನ್ನ ಒತ್ತಾಯ. ಏಕೆ ಒತ್ತಾಯ ಮಾಡುತ್ತೇನೆಂದರೆ, ಪ್ರತಿ ಎಲೆಕ್ಷನ್‌ನಲ್ಲಿ ಇವರದು ಒಂದು ಹಿಡಿತ ಇರುತ್ತದೆ. ಅಬಕಾರಿ ಹೇಗಿದೆಯೋ, ಗ್ರಾನೈಟ್ ಹೇಗಿದೆಯೋ, ಅದೇ ಹಿಡಿತ ಅವರ ಕೈಯಲ್ಲಿದೆ. ಅವರ ಬಳಿ ನೀವೆಲ್ಲಾ ಹೋಗಿ ಶರಣು ಹೊಡೆಯಬೇಕು. ಬಹುಶ: ಈ ಸರ್ಕಾರ ನಡೆಸತಕ್ಕಂತಹ ಮುಖ್ಯ ಮಂತ್ರಿಗಳಿಗಿಂತ ಹೆಚ್ಚಾಗಿ ಅವರಲ್ಲಿ ಅಧಿಕಾರ ಜಾಸ್ತಿಯಾಗಿದೆ. ಆದ್ದರಿಂದ ಇದರ ಬಗ್ಗೆ ನಾವು ತೀರ್ಮಾನ ಮಾಡಿ ಒಟ್ಟಿಗೆ ಪಕ್ಷಾತೀತವಾಗಿ ಇವರನ್ನು ಹೊರಗಡೆ

ಹಾಕಲಿಲ್ಲವೆಂದರೆ, ಈ ದೇಶದಲ್ಲಿ ಒಂದು ಅಪಮಾನಕಾರಿಯಾದ ಬೆಳವಣಿಗೆಯಾಗುತ್ತದೆ ಎಂದು ಹೇಳುತ್ತಿದ್ದೇನೆ. ಇವತ್ತು ನಮ್ಮ ಮಾನ್ಯ ಸಚಿವರು ಕರ್ಪೂರದ ಮೇಲೆ ತೆರಿಗೆ ಇಳಿಸಿದ್ದಾರೆ. ನಿಮ್ಮ ಮುಖಕ್ಕೆ ಮಂಗಳಾರತಿ ಮಾಡುವುದಕ್ಕೆ ಕರ್ಪೂರ ಬೇಕೆಂದು ಇದಕ್ಕೆ ಇಳಿಸಿದ್ದೀರಾ? ಎಲ್ಲರೂ ಬಂದು ನಿಮಗೆ ಧಾರಾಳವಾಗಿ ಮುಖಕ್ಕೆ ಮಂಗಳಾರತಿ ಎತ್ತಬೇಕೆಂದು ಮಾಡಿದ್ದೀರಾ? ಎಲ್ಲರೂ ಹೇಳಿದ್ದಾರೆ, ನಿಮಗೆ ಏಕೆ ಹಿತ್ತಾಳೆ ಪಾತ್ರೆಗಳ ಬಗ್ಗೆ ಕೋಪ ಬಂದಿತು ನನಗೆ ಗೊತ್ತಿಲ್ಲ. ಇದು ಒಂದು ತರಹ ಏನಾಗಿದೆ ಎಂದರೆ, ನೀವು ಮನಸ್ಸು ಮಾಡಿದ್ದರೆ ಒಳ್ಳೆಯ ಆಯವ್ಯಯವನ್ನು ಮಂಡಿಸಬಹುದಾಗಿತ್ತು. ಏನಾಗಿದೆ, 10 ಇದೆ ಎರಡು ಇಳಿಸು, ಎಂಟು ಇದೆ ಎರಡು ತೆಗಿ, ಮೂರು ಇದೆ ಎರಡು ಸೇರಿಸು ಒಟ್ಟಾದರೆ ಎಷ್ಟು, ಈ ತರಹ ಲೆಕ್ಕ, ಆದ್ದರಿಂದ ನಿಮಗೆ ಯಾರೋ ಹಿತ್ತಾಳೆ ಕಿವಿಯಿಂದ ಇದನ್ನು ಹೇಳಿದ್ದಾರೆಂದು ಕಾಣುತ್ತದೆ. ಅವರಿವರ ಮಾತು ಕೇಳುವುದಕ್ಕೆ ಹಿತ್ತಾಳೆ ಕಿವಿ ಎಂದು ಹೇಳುತ್ತಾರೆ. ಆದ್ದರಿಂದ ಈ ತರಹ ಏನಾದರೂ ಆಗಿದೆಯಾ? ಅದರ ಬಗ್ಗೆ ತಾವು ಹೇಳಬೇಕು. ಸಿಗರೇಟ್ ಸೇವನೆ ಮೇಲೆ, ಸಿಗರೇಟ್ ಸೇದುವುದೇ ಹಾನಿಕರವೆಂದು ಹಾಕಿದ್ದಾರೆ. ಇನ್ನೂ ಅದರಲ್ಲಿ ಬೇರೆ ನೀವು ತೆರಿಗೆ ಕಡಿಮೆ ಮಾಡಿ ತಾವು ಆರೋಗ್ಯ ಸಚಿವರು ಇದರ ಬಗ್ಗೆ ರಾಜೀನಾಮೆ ಕೊಡಬೇಕಾಗಿತ್ತು. ಆರೋಗ್ಯದ ಬಗ್ಗೆ ಕಾಳಜಿ ಇದ್ದರೆ ಆರೋಗ್ಯ ಸಚಿವರು ಈ ತರಹ ಜಾಸ್ತಿ ಮಾಡಿದ್ದೀರಿ ನನ್ನ ರಾಜೀನಾಮೆಯನ್ನು ಕೂಡಲೇ ಕೊಡುತ್ತೇನೆಂದು ಹೇಳಬಹುದಾಗಿತ್ತು. ನಾನು ನಿಮಗೆ ರಾಜೀನಾಮೆ ಕೊಡಿ ಎಂದು ನಾನು ಹೇಳುವುದಿಲ್ಲ ಅದು ನಿಮಗೆ ಸೇರಿದ್ದು, ಅವರು ರಾಜೀನಾಮೆ ಕೊಡಿ ಎಂದು ನಾನು ಹೇಳುವುದಿಲ್ಲ. ಕೊಡಬೇಕಾಗಿತ್ತು ಎಂದು ಹೇಳಿದೆ. ಸಿಗರೇಟ್ ಫಿಲ್ಟರ್, ಸಿಗಾರ್ ಇವೆಲ್ಲದರ ಮೇಲೆ ಕಡಿಮೆ, ಇವೆಲ್ಲಾ ಯಾರು ಸೇದುವುದು, ಗುಡಿಸಲು ಇಟ್ಟುಕೊಂಡಿರುವವರು ಪೈಪ್ ಇಟ್ಟು ಸೇದುವುದು. ಏಕೆ ಯಾವುದು ನಿಮಗೆ ಕಣ್ಣಿಗೆ ಬೀಳಲಿಲ್ಲ. ಮನೋರಂಜನೆ ತೆರಿಗೆ ಜಾಸ್ತಿ ಮಾಡಿದರು. ಮಹಾರಾಷ್ಟ್ರದಲ್ಲಿ ಒಂದು ಆಟಕ್ಕೆ 20 ರೂಪಾಯಿ ಇದೆ, ಆಂಧ್ರ ಪ್ರದೇಶದಲ್ಲಿ ಒಂದು ಆಟಕ್ಕೆ 12.50 ರೂಪಾಯಿ ಇದೆ. ತಮಿಳುನಾಡಿನಲ್ಲಿ ಇಲ್ಲ, ಕೇರಳದಲ್ಲಿ ಒಂದು ಆಟಕ್ಕೆ 2.50 ರೂಪಾಯಿ ಕರ್ನಾಟಕದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ 10 ರೂಪಾಯಿ ಇತ್ತು. ಈಗ ತಾವು 100 ರೂಪಾಯಿಗೆ ಏರಿಸಿದ್ದೀರಿ. ಜಿಲ್ಲಾ ಮಟ್ಟದಲ್ಲಿ 30 ಇತ್ತು, ಅದನ್ನು 300 ರೂಪಾಯಿ ಮಾಡಿದ್ದೀರಿ. ಹೀಗಾದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಸಂಚಾರಿ ಚಿತ್ರ ಮಂದಿರಗಳೆಲ್ಲಾ ತಮ್ಮ ಟೆಂಟ್‌ಗಳನ್ನು ಮುಚ್ಚಿ ಅವರು ಬೀದಿಗೆ ಬರತಕ್ಕಂತಹ ವ್ಯವಸ್ಥೆ ತಾವು ಮಾಡಿದ್ದೀರಿ. ಇದು ಕನ್ನಡ ಚಿತ್ರದ ಮೇಲೆ ಬರತಕ್ಕಂತಹ ಒಂದು ದೊಡ್ಡ ಹೊರೆ. ಕನ್ನಡ ಚಿತ್ರಗಳು ಏನು ಪ್ರದರ್ಶನ ಆಗುತ್ತವೆ ಅದರ ಮೇಲೆ ಬರತಕ್ಕಂತಹ ಒಂದು ಭಾರಿ ಹೊರೆ. ಈ ಹೊರೆಯ ಬಗ್ಗೆ ತಾವು ಕೂಡಲೇ ಚಿಂತನೆ ಮಾಡಬೇಕು. ಕನ್ನಡ ಚಿತ್ರಗಳಿಗೆ ಒಂದು ರೀತಿಯಿಂದ ಕೊಡಲಿ ಪೆಟ್ಟು ಹಾಕುತ್ತಿದ್ದೀರಿ. ಒಂದು ಕಡೆ ಸಹಾಯಧನ ನಿಲ್ಲಿಸುತ್ತೀರಿ, ಉತ್ತಮ ಚಿತ್ರಗಳಿಗೆ ಮಾತ್ರ ಕೊಡುತ್ತೇವೆಂದು ಹೇಳಿದ್ದೀರಿ.

ಶ್ರೀ ಸಿದ್ಧರಾಮಯ್ಯ:- ಅಶ್ಲೀಲ ಇರತಕ್ಕಂಥದ್ದು, ಹಿಂಸೆ ಇರತಕ್ಕಂಥದ್ದು, ಕ್ರೌರ್ಯ ಇರತಕ್ಕಂಥದ್ದು ಮತ್ತು ಪ್ರಚೋದನೆ ತರತಕ್ಕಂತಹ ಚಿತ್ರಗಳಿದ್ದರೆ ಅವುಗಳಿಗೆ ಸಹಾಯಧನ ನಿಲ್ಲಿಸತಕ್ಕಂತಹ ಚಿಂತನೆ ಸರ್ಕಾರಕ್ಕೆ ಇದೆ ಎಂದು ಹೇಳಿದ್ದೇನೆ, ಹೊರತು ಸಬ್ಸಿಡಿ ನಿಲ್ಲಿಸಿದ್ದೇವೆಂದು ಎಲ್ಲೂ ಹೇಳಲಿಲ್ಲ. ಸಬ್ಸಿಡಿ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಸಬ್ಸಿಡಿ ಕೊಡುತ್ತೇವೆಂದು ತಾವು ಈ ಸದನದಲ್ಲಿ ಹೇಳಿದ್ದರಿಂದ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ಸಬ್ಸಿಡಿ ಸಾಲ ಕೊಟ್ಟು ಬಿಡಿ. ಅವರದು ಏಳು ಕೋಟಿ ರೂಪಾಯಿ ಉಳಿಸಿದ್ದೀರಿ, ಒಂದಲ್ಲ ಎರಡಲ್ಲ 500 ಚಿತ್ರಗಳಿಗೆ ಇನ್ನು ಹಣ ಬಿಡುಗಡೆ ಮಾಡಿಲ್ಲ. ವಾರ್ತಾ ಇಲಾಖೆಯಲ್ಲಿ ಅವರು ದಿನಾ ಕಾಡಿ ಬೇಡಿ ಸಾಲಸೋಲ ಮಾಡಿ ಚಿತ್ರ ತೆಗೆದಿದ್ದಾರೆ. ಅವರ ಚಿತ್ರಗಳಿಗೆ ಹಣವನ್ನು ಬೇಗ ತಾವು ಬಿಡುಗಡೆ ಮಾಡಿ ಪ್ರದರ್ಶನ ತೆರಿಗೆಯನ್ನು ಕಡಿಮೆ ಮಾಡತಕ್ಕಂತಹ ವ್ಯವಸ್ಥೆಗೆ ತಾವು ಹೋಗಬೇಕು. ಆಮೇಲೆ, ಬೀರ್‌ನ ಮೇಲಿನ ಸುಂಕವನ್ನು 4 ರಿಂದ 5 ಕ್ಕೆ ಏರಿಸಿದ್ದೀರಿ. ಒಂದು ಮಾತು, ನಮ್ಮ ಸರ್ಕಾರ ನಡೆಯುವುದೇ ಇದರಿಂದ, ಬೀರ್ ಕುಡಿಯುವರಿಂದ ನಮ್ಮ ಸರ್ಕಾರ ಸ್ವಲ್ಪ ಹೆಚ್ಚು ಕಡಿಮೆ ನಡೆಯುತ್ತಿರುವುದು. ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ 700 ಕೋಟಿ ರೂಪಾಯಿಗಳನ್ನು ಅವರೆ ತಾನೆ ಕೊಡುವುದು, ಅದು ಬೀರ್ ಒಂದರಿಂದಲೇ ಬರುತ್ತದೆಂದು ಹೇಳುವುದಿಲ್ಲ ಅವರು ಕೂಡ ನಿಮಗೆ ಸಹಕಾರಿ ತಾನೆ ಸ್ವಾಮಿ? ನಿಮ್ಮಲ್ಲಿಯು ಕೂಡ ಬಹುತೇಕ ಜನರಿದ್ದೀರಲ್ಲ, ನಾನು ಅವರ ಪರವಾಗಿಯೂ ಮಾತನಾಡಬೇಕಲ್ಲ? ಆದುದರಿಂದ ನನಗನಿಸುತ್ತದೆ, ನಾನು ಅವರ ಪರವಾಗಿ ಮಾತನಾಡಬೇಕು, ಇಲ್ಲಿ ಅನೇಕ ಜನರಿದ್ದಾರೆ, ಬೀರ್, ರಮ್ ಈ ಬಗ್ಗೆ ಎಲ್ಲಾ ಮಾತನಾಡಬೇಕಾದರೆ, ನಮ್ಮ ಸ್ನೇಹಿತರು ಕೂಡ ಇದ್ದಾರೆ, ಅವರ ಪರವಾಗಿಯೂ ಕೂಡ ಮಾತನಾಡಬೇಕಲ್ಲ? ಬಹುತೇಕವಲ್ಲ, ಅನೇಕ ಜನ ಪತ್ರಕರ್ತರಿದ್ದಾರೆ ನಾನು ಅವರ ಪರವಾಗಿಯೂ ಮಾತನಾಡಬೇಕಲ್ಲ? ಅವರು, ನೀವು ಯಾವಾಗಲೂ ಮಾತನಾಡಿಲ್ಲವೆಂದು ಹೇಳುತ್ತಾರೆ. ಇದರ ಮೇಲೆ ಸುಂಕವನ್ನು ಏರಿಸಿರತಕ್ಕಂಥದ್ದರ ಬಗ್ಗೆ ಮಾತನಾಡುವಾಗ ನಾನು ಬರಿ ಒಂದೇ ವರ್ಗದ ಬಗ್ಗೆ ಮಾತನಾಡಬಾರದು, ನಾನು ಆ ವರ್ಗದ ಪರವಾಗಿಯೂ ಮಾತನಾಡಬೇಕು.

ಶ್ರೀ ಹೆಚ್. ಎನ್. ನಂಜೇಗೌಡ :-ಕಳೆದ ವರ್ಷ ಎಂಟನೂರ ನಲವಾತ್ತಾರು ಕೋಟಿ ಏನೂ ಬಂದಿದೆ, ಅದರಲ್ಲಿ ಈ ವಾಟಾಳ್‌ನಾಗರಾಜ್‌ರಿಂದ ಒಂದು ಪೈಸೆಯೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಅದು ಸತ್ಯ, ಅದು ನಮ್ಮ ಸ್ನೇಹಿತರಿಂದ ಬಂದಿದೆಯಲ್ಲ, ತಮ್ಮಿಂದ ಬಂದಿದೆಯಲ್ಲ, ಅದೆಲ್ಲಾ ನಮಗೆ ಸಂತೋಷವಲ್ಲವೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ನಿಮ್ಮಿಂದ ಏನೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸ್ನೇಹಿತರು ಕೊಟ್ಟಿದ್ದಾರೆ, ಅನೇಕ ಜನ ನಮ್ಮ ಪತ್ರಕರ್ತ ಸ್ನೇಹಿತರಿದ್ದಾರೆ ಅವರು ಕೊಟ್ಟಿದ್ದಾರೆ. ಅದರ ಬಗ್ಗೆ ನಾವು ಚಿಂತೆ ಪಡಬೇಕಾಗಿಲ್ಲ, ಆದರೆ ನಮ್ಮ ಸ್ನೇಹಿತರಿಂದ ಬಂದರೆ ನಮ್ಮ ಕಡೆಯಿಂದ ಬಂತೆಂದು ನಾನು ಹೇಳುವುದಿಲ್ಲ. ಉಪಾಧ್ಯಕ್ಷರೆ, ತಮ್ಮಿಂದಲೂ ಸ್ವಲ್ಪ ಬಂದಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ; ಅದು ಎಷ್ಟರ ಮಟ್ಟಿಗೆ ನಿಜವೋ ಏನೊ ಗೊತ್ತಿಲ್ಲ.

ಶ್ರೀ ಸಿದ್ಧರಾಮಯ್ಯ :- ಪಿ.ಜಿ. ಆರ್. ಸಿಂಧ್ಯಾರವರು ವಾಟಾಳ್ ಕಡೆಯಿಂದ ಬಂದಿಲ್ಲವೆಂದು ನಿಮಗೆಲ್ಲಾ ಗೊತ್ತಾ ಎಂದು ಅನುಮಾನಾಸ್ಪದವಾಗಿ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಮತ್ತು ಸಿಂಧ್ಯಾರವರು ಸುಮಾರು 25 ವರ್ಷಗಳ ಸ್ನೇಹಿತರು, ಅದು ಅವರಿಗೆ ಗೊತ್ತಿದೆ, ಅದು ಹೇಗೆ ಎನ್ನುವುದನ್ನು ಅವರೇ ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ:- ಸ್ವಾಮಿ, ತೆರಿಗೆಯನ್ನು ಕಟ್ಟುವುದಕ್ಕೆ ತೆಗೆದುಕೊಂಡು ಕುಡಿಯಬೇಕೆಂದೇನು ಇಲ್ಲ, ನಮ್ಮಲ್ಲಿ ಕುಡಿಯದಿರತಕ್ಕಂಥ ಜನರು ಆ ವ್ಯವಹಾರದಲ್ಲಿ ತೆಗೆದುಕೊಂಡು ಬೇರೆಯವರಿಗೆ ಕುಡಿಸುತ್ತೇವೆ ಅಥವಾ ಬೇರೆಯವರಿಗೆ ಹಂಚುತ್ತೇವೆ. ಹಂಚುತ್ತೇವೆಂದು ಹೇಳುವುದಕ್ಕೆ ಹೋದರೆ, ಅದು ದೊಡ್ಡ ಸಮಸ್ಯೆಯಾಯಿತು ಅದು ಬೇರೆ ವಿಚಾರ; ಅದನ್ನು ನಾನು ಸಮಯ ಬಂದಾಗ ಹೇಳುತ್ತೇನೆ. ಆದರೆ ಹಂಚಿರಬಹುದೆನ್ನುವ ಸಂಶಯ ನನಗಂತೂ ಇದೆ, ಇಲ್ಲವೆಂದರೆ ಇಲ್ಲವೆಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ :- ಸ್ವಾಮಿ ನಿಜ, ನನ್ನ ಜೀವನದಲ್ಲಿ ಚುನಾವಣೆಯ ಸಂದರ್ಭದಲ್ಲಿ ಒಂದು ಬಾಟ್ಲ್ ಅನ್ನು ನಾನು ಹಂಚಿಲ್ಲ, ನಾನು ಒಂದು ಪ್ಯಾಕೇಟ್ ಅನ್ನು ಹಂಚಿಲ್ಲ, ಇದಂತು ಸ್ಪಷ್ಟ.

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ನಿಮ್ಮ ಜೊತೆಯಲ್ಲಿರುತ್ತಾರಲ್ಲ, ಅವರು ಹಂಚದೆ ಇರುತ್ತಾರೆಯೇ?

ಉಪಾಧ್ಯಕ್ಷರು :- ಅವರು ಹಂಚಿಲ್ಲ, ಅವರ ಪರವಾಗಿ ಹಂಚಿರುತ್ತಾರೆ.

ಶ್ರೀ ಹೆಚ್. ಎನ್ ನಂಜೇಗೌಡ:- ಪತ್ರಿಕಾ ಸ್ನೇಹಿತರು, ನಮ್ಮಂಥ ಸ್ನೇಹಿತರು ಇವರಿಗೆಲ್ಲಾ ಎಷ್ಟೋ ಸಾರಿ ಪಾರ್ಟಿಯನ್ನು ಕೊಡಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಇವರೆಲ್ಲರ ಸಭೆ ಸೇರಿಸಿ ಅವರ ಸೇವೆ ಮಾಡಿರುವುದು ಉಂಟು; ಆದರೆ ನಾನು ಯಾವತ್ತು ಅದನ್ನು ಸೇವನೆ ಮಾಡಿಲ್ಲ. ಉಪಾಧ್ಯಕ್ಷರೆ, ನನ್ನ ಬಗ್ಗೆ ತಮಗೆ ಎಷ್ಟು ಕಾಳಜಿ ಇದೆ ಎಂದು ಗೊತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಅದನ್ನು ಉಪಯೋಗಿಸಿಕೊಳ್ಳದೆ ಇರಬಹುದು ನೀವು ಬೇರೆಯವರಿಗೆ ಕೊಡುವಾಗ ನೀವು ತೆರಿಗೆ ಕೊಟ್ಟಿದ್ದೀರೆಂದು ಹೇಳಿದ್ದುದು.

ಶ್ರೀ ಬಿ. ಎಸ್. ಯಡಿಯೂರಪ್ಪ:- ತಾವು ಕುಡಿಯದೆ, ಬೇರೆಯವರಿಗೆ ಕುಡಿಸುವುದು ಮಹಾಪಾಪ.

ಶ್ರೀ ವಾಟಾಳ್ ನಾಗರಾಜ್:-ನಾನೂ ಎಂದೂ ಯಡಿಯೂರಪ್ಪನವರನ್ನು ಕೆಡಿಸುವುದಕ್ಕೆ ಹೋಗಲಿಲ್ಲ, ಏಕೆಂದರೆ ಅವರು ಕೂಡ ನನ್ನ ರೀತಿ ಸನ್ಯಾಸಿ ಇದ್ದಂತೆ; ಅದಕೋಸ್ಕರ ನಾನು ಎಂದೂ ಅವರನ್ನು ಕೆಡಿಸುವುದಕ್ಕೆ ಹೋಗಿಲ್ಲ, ಯಾವತ್ತಾದರೂ ಅವರನ್ನು ನಾನು ಕರೆದಿದ್ದೇನೆಯೇ ಎಂದು ಕೇಳಿ, ಸ್ವಲ್ಪ ತೆಗೆದುಕೊಳ್ಳಿ ಎಂದು ಹೇಳಿದ್ದೇನೆಯೇ ಎಂದು ಕೇಳಿ? ಇದ್ದರೆ ಅವರು ಈ ಸದನದಲ್ಲಿ ಹೇಳಲಿ.

ಉಪಾಧ್ಯಕ್ಷರು :- ಅಲ್ಲ, ಕೆಡಿಸುವ ಕೆಲಸ ಏತಕ್ಕೆ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ :- ಎಷ್ಟೋ ಸಾರಿ ನಾನು ತಮ್ಮ ಜೊತೆಯಲ್ಲಿ ಭೇಟಿ ಮಾಡಿದ್ದೇನೆ, ನನಗೆ ಅದೇನಾದರೂ ಉಂಟೆ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :-ತಾವು ಯಡಿಯೂರಪ್ಪನವರಿಗೆ ಒಂದು ರೀತಿಯ ಸನ್ಯಾಸಿ ಎಂದು ಹೇಳಿದಿರಿ, ಅದು ಯಾವ ತರಹದ ಸನ್ಯಾಸಿ, ಈ ತರಹದ ಸನ್ಯಾಸಿನೊ, ಆ ತರಹದ ಸನ್ಯಾಸಿನೊ?

ಶ್ರೀವಾಟಾಳ್ ನಾಗರಾಜ್ :- ಅವರು ಆ ತರಹದ ಸನ್ಯಾಸಿಗಳಲ್ಲ, ಅವರ ಬಗ್ಗೆ ನಾವು ಈಗ ಚರ್ಚೆ ಮಾಡುವುದು ಬೇಡ. ಮನೆ ಬಳಕೆಯ ಸೌದೆಯನ್ನು ಹೊರತುಪಡಿಸಿ ಉಳಿದ ಸೌದೆಗಳಿಗೆ ಎಂದರೆ ಯಾವುದದು? ನನ್ನ ದೃಷ್ಟಿನಲ್ಲಿ ಆ ಹೆಣ ಸುಡುವ ಸೌದೆಯೂ ಇದೆ. ಮನೆ ಬಳಕೆಯ ಸೌದೆ ಹೊರತುಪಡಿಸಿ ಉಳಿದ ಸೌದೆ ಎಂದು ಹೇಳಿದ್ದಿರಿ, ನೀರು ಕಾಯಿಸುವುದನ್ನು ಬಿಟ್ಟುಬಿಡೋಣ, ಅಡಿಗೆ ಮಾಡುವುದನ್ನು ಬಿಟ್ಟುಬಿಡೋಣ, ಉಳಿದಿದ್ದರಲ್ಲಿ ಹೆಣ ಸುಡುವುದು ಒಂದು ಬರುತ್ತದೆ. ಅದರ ಮೇಲೆ ಏತಕ್ಕೆ ತೆರಿಗೆ ಹಾಕಿದಿರಿ ಸ್ವಾಮಿ? ಇದರ ಬಗ್ಗೆ ನಿಮ್ಮ ಕಾಳಜಿ ಏನು ಎಂದು ಸ್ವಲ್ಪ ಹೇಳಿ. ನಿಮಗೆ ಹೆಣ ಸುಡುವವರು ಕೂಡ ನಿಮಗೆ ತೆರಿಗೆಯನ್ನು ಕೊಡಬೇಕೇ?

ಶ್ರೀ ಸಿದ್ದರಾಮಯ್ಯ:- ಡೊಮೆಸ್ಟಿಕ್ ಯುಸ್ ಎಂದರ್ಥ, ಅದರಲ್ಲಿ ಹೆಣ ಸುಡುವ ಸೌದೆಯೂ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಇಲ್ಲ ಅದು ಹೇಗೆ ಬರುತ್ತದೆ? ಯಾರಾದರೂ ಮನೆಯಲ್ಲಿ ಹೆಣ ಸುಡುತ್ತಾರೆಯೇ?

ಶ್ರೀ ಸಿದ್ಧರಾಮಯ್ಯ:- ಅದನ್ನು ಲಿಟರರಿಯಾಗಿ ತೆಗೆದುಕೊಳ್ಳುವುದಕ್ಕೆ ಹೋಗಬಾರದು, ಆ ರೀತಿ ಪದ ಬಳಕೆಯಾಗಿದೆ ಅಷ್ಟೆ.

ಶ್ರೀ ಎಸ್. ಸುರೇಶ್ ಕುಮಾರ್ :- ಎಲೆಕ್ಟ್ರಿಕ್ ಕ್ರಿಮಿಟೋರಿಯಂ ನಾನ್ ಡೊಮೆಸ್ಟಿಕ್ ಎಂದು ಚಾರ್ಜ್ ಮಾಡುತ್ತಿರುವುದು. ಕಮರ್ಷಿಯಲ್ ರೇಟ್ ಅದು ಬೇರೆ.

ಶ್ರೀ ಸಿದ್ಧರಾಮಯ್ಯ :- ಹಳ್ಳಿಗಾಡಿನಲ್ಲಿ ಈ ಪ್ರಶ್ನೆಯೇ ಬರುವುದಿಲ್ಲ, ಸೌದೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಮನೆ ಬಳಕೆಯ ಸೌದೆಗೆ ಟ್ಯಾಕ್ಸ್ ಇಲ್ಲ, ತೆರಿಗೆಯಿಂದ ವಿನಾಯಿತಿ ಇದೆ.

ಶ್ರೀ ವಾಟಾಳ್ ನಾಗರಾಜ್ :- ಹೆಣ ಸುಡುವ ಸೌದೆಗೆ ತೆರಿಗೆ ವಿನಾಯಿತಿ ಇದೆಯಾ? ನಾನು ಹೇಳುವುದೇನೆಂದರೆ ಹಳ್ಳಿಗಳಲ್ಲಿ ಹೆಣ ಹೂಳುವುದಕ್ಕೆ ಸ್ಮಶಾನ, ಇಲ್ಲ, ಗೊತ್ತು ಗುರಿ ಇಲ್ಲದ ಕಡೆ ಹೆಣ ಹೂಳುವುದು, ಅಲ್ಲಿ ಇವರು ಸೌದೆಗೂ ಇವರು ತೆರಿಗೆ ಹಾಕಿದರೆ ನಿಜವಾಗಿಯೂ ನಿಮ್ಮನ್ನು ಯಾವ ದೇವರು ಕೂಡ ಮೆಚ್ಚುವುದಿಲ್ಲ; ನಿಮಗೆನೋ ಶಾಪವಾಗುತ್ತದೆ ನನಗೆ ಗೊತ್ತು. ಆಮೇಲೆ ಪಾದರಕ್ಷೆಗೆ ಬಳಸುವ ಅದರಲ್ಲೂ ಕಡಿಮೆ ದರದಲ್ಲಿ ಫುಟ್‌ಪಾತ್‌ನಲ್ಲಿ ದೊರೆಯುವ ಬ್ರಾಂಡ್ ಇಲ್ಲದ ಪಾದರಕ್ಷೆ ಯಾವುದು ಸ್ವಾಮಿ? ಅದರ ಮೇಲಿನ ತೆರಿಗೆಯನ್ನು 4 ರಿಂದ 10 ಕ್ಕೆ ಏರಿಸಿದ್ದೀರಿ. ಅವು ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಳ್ಳುವವರದು, ನೀವು ಅದರ ಮೇಲೂ ತೆರಿಗೆ ಹಾಕಿಬಿಟ್ಟಿರಾ?

ಶ್ರೀ ಸಿದ್ಧರಾಮಯ್ಯ :- ಬ್ರಾಂಡೆಡ್ ಮತ್ತು ಆನ್ ಬ್ರಾಂಡೆಡ್ ಪಾದ ರಕ್ಷೆಗಳಿದ್ದಾವೆ, ಬ್ರಾಂಡೆಡ್ ಪಾದರಕ್ಷೆಗಳೆಂದರೆ, ಬಾಟಾ, ಕರೊನ, ಈ ರೀತಿಯದ್ದೆಲ್ಲಾ ಇದ್ದಾವೆ. ಟ್ರೇಡ್ ಮಾರ್ಕ್ ಸೀಲ್ ಇರುವ ಪಾದರಕ್ಷೆಗಳಿಗೆ ಶೇಕಡ 10 ರಷ್ಟು ತೆರಿಗೆ ಇದೆ ಬ್ರಾಂಡ್ ಇಲ್ಲದಿರುವ ನೂರು ರೂಪಾಯಿ ಮತ್ತು ಅದಕ್ಕಿಂತ ಕಡಿಮೆ ಬೆಲೆ ಇರುವಂತದ್ದಕ್ಕೆ ಶೇಕಡ 4 ರಷ್ಟು ತೆರಿಗೆ ವಿಧಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಆಯಿತು, ಶೋಕಿಗಾಗಿ ಬಳಸುವ ಸುಗಂಧದ್ರಾವ್ಯದ ಮೇಲೆ ತೆರಿಗೆಯನ್ನು ನೀವು ಹೆಚ್ಚಿಸಲಿಲ್ಲ; ಶೇಕಡ ಹನ್ನೆರಡರಿಂದ ಹತ್ತಕ್ಕೆ ತೆರಿಗೆ ಇಳಿಸಿದಿರಿ, ನಿಮಗೇಕೆ ಇದರ ಮೇಲೆ ಪ್ರೀತಿ. ಈ ರೀತಿ ಶೋಕಿ ಮಾಡುವಂಥವರಿಗೆ ಶೇಕಡ 15 ರಷ್ಟು ತೆರಿಗೆ ಹಾಕಿದ್ದರೆ ಯಾರೂ

ಬೇಡವೆಂದು ಹೇಳುತ್ತಿದ್ದರು? ಸೌದೆ ಮೇಲೆ ತೆರಿಗೆ ಹಾಕುತ್ತೀರಿ, ಇದರ ಮೇಲೆ ತೆರಿಗೆಯನ್ನು ಇಳಿಸುತ್ತೀರಿ. ಇದೇನು, ನಿಮ್ಮ ಸಿದ್ಧಾಂತ ಮತ್ತು ತತ್ವವೇನು ಸ್ವಾಮಿ? ಮತ್ತು ತೋಟ ಮತ್ತು ಕಡಲತೀರದಲ್ಲಿ ಛತ್ರಿ ಹಿಡಿದುಕೊಳ್ಳುವವರು ಯಾರು ಸ್ವಾಮಿ? ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಳೆ ಬಂತೆಂದರೆ.

ಶ್ರೀ ಸಿದ್ಧರಾಮಯ್ಯ :- ಮಳೆ ಬಂದರೆ ಉಪಯೋಗಿಸುವ ಛತ್ರಿಯಲ್ಲ, ಕಡಲ ತೀರಗಳಲ್ಲಿ ಉಪಹಾರಕೋಸ್ಕರ ಛತ್ರಿ ರೀತಿ ಹಾಕಿಕೊಂಡು ಕುಳಿತುಕೊಂಡಿರುತ್ತಾರಲ್ಲ, ಆ ಛತ್ರಿಗಳಿಗೆ ಸಂಬಂಧಪಟ್ಟಿದ್ದುದು. ಆ ಛತ್ರಿಯ ಕೆಳಗೆ ಮೈಮೇಲೆ ಬಟ್ಟೆ ಹಾಕಿಕೊಳ್ಳದೆ ಕುಳಿತುಕೊಂಡಿರುತ್ತಾರಲ್ಲ ಆ ಛತ್ರಿ.

ಶ್ರೀ ವಾಟಾಳ್ ನಾಗರಾಜ್ :- ಈಗ ಅವರು ಸಂಸದೀಯ ಭಾಷೆಗೆ ಬಂದರು.

ಶ್ರೀ ಸಿದ್ಧರಾಮಯ್ಯ:- ನಾವು ಸ್ವಲ್ಪ ಹಳ್ಳಿಯವರು, ಈಗ ನಾವು ಅರ್ಧಂಬರ್ಧ ಬಟ್ಟೆ ಬಿಚ್ಚಿಕೊಂಡರು ಕೂಡ ನಾವು ಬಟ್ಟೆ ಬಿಚ್ಚಿಬಿಟ್ಟಿದ್ದೇವೆಂದು ಹೇಳುತ್ತಾರೆ.

ಶ್ರೀ ಹೆಚ್. ಎನ್. ನಂಜೇಗೌಡ:- ಅದು ಸೂರ್ಯಸ್ನಾನ.

ಶ್ರೀ ಸಿದ್ಧರಾಮಯ್ಯ:- ಸರಿ, ಅದು ಸೂರ್ಯ ಸ್ನಾನ, ಆ ಛತ್ರಿಗಳಿಗೆ ತೆರಿಗೆ ವಿಧಿಸುವುದು.

ಶ್ರೀ ವಾಟಾಳ್ ನಾಗರಾಜ್ :- ಸೂರ್ಯಸ್ನಾನವೆಂದರೆ ಅದರ ಬಗ್ಗೆ ವಿವರಣೆ ಕೊಡುವುದು ಬಹಳ ಕಷ್ಟವಾಗುತ್ತದೆ ಬಿಡಿ. ಇವರೆಲ್ಲಾ ಆ ಸೂರ್ಯಸ್ನಾನಕ್ಕೆ ಹೋದರೆ ದೇವರೆ ಕಾಪಾಡಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :- ವಾಟಾಳ್ ನಾಗರಾಜ್‌ರವರೆ, ದಯವಿಟ್ಟು ಆ ವಿವರಣೆಯನ್ನೆಲ್ಲಾ ಕೊಡಬಾರದು.

ಶ್ರೀ ವಾಟಾಳ್ ನಾಗರಾಜ್ :- ನಾನು ನಿಮ್ಮನ್ನೆಲ್ಲಾ ನೋಡಿಕೊಂಡು ವಿವರಣೆ ಕೊಡುವುದಕ್ಕೆ ಹೋಗಲಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :- ನಾವೆಲ್ಲಾ ಇನ್ನು ಇಲ್ಲಿ ಇದ್ದೇವೆ, ದಯವಿಟ್ಟು ಅದನ್ನು ಕೊಡುವುದಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ :- ಆ ರೀತಿ ಮಾಡಿದರೆ, ಪ್ರಮೀಳಾ ನೇಸರ್ಗಿಯವರಿದ್ದಾರೆ, ತಾವು ಇದ್ದೀರಿ, ನನ್ನ ಮೇಲೆ ಯುದ್ಧ ಮಾಡುತ್ತೀರಿ. ನಾನು ನಿಮ್ಮ ಅಭಿಮಾನವನ್ನು ಪಡೆದಿರುವಾಗ ಈ ವಿಚಾರ ಹೇಳಿ ನಾನು ನಿಷ್ಠೂರವಾಗುವುದಕ್ಕೆ ಹೋಗುವುದಿಲ್ಲ. ಆಮೇಲೆ ಹೊರಗೆ ಮಾತನಾಡಿಕೊಳ್ಳೋಣ. ಆಮೇಲೆ ಭೋಗ ವಸ್ತುಗಳಿಗೆ, ಅಂದರೆ ದಂತ ಹಾಗೂ ಗಂಧದ ಮರಗಳ ವಸ್ತುಗಳ ಮೇಲಿನ ತೆರಿಗೆ 8 ರಿಂದ 4ಕ್ಕೆ ಇಳಿಸಿದ್ದೀರಿ ಏತಕ್ಕೆ ಸ್ವಾಮಿ?

ಶ್ರೀ ಸಿದ್ಧರಾಮಯ್ಯ:- ಕರಕುಶಲ ವಸ್ತುಗಳನ್ನು ಸಾಮಾನ್ಯ ಜನ ಮಾಡುತ್ತಿದ್ದಾರೆ ತೆರಿಗೆ ಜಾಸ್ತಿಯಾಗಿ ಮಾರಾಟ ಕುಂಠಿತವಾದರೆ ಆ ಕೈಗಾರಿಕೆನೇ ಹೋಗುತ್ತದೆನ್ನುವ ದೃಷ್ಟಿಯಿಂದ ಅದರ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿರುವುದು.

ಶ್ರೀ ವಾಟಾಳ್ ನಾಗರಾಜ್ :- ಆಯಿತು, ಗಂಧದ ಎಣ್ಣೆಯ ಮೇಲಿನ ಶೇಕಡ 12 ರಿಂದ 10ಕ್ಕೆ ಏತಕ್ಕೆ ಇಳಿಸಿದಿರಿ ತಮಗೆ ಗಂಧದ ಎಣ್ಣೆಯ ಮೇಲೆ ಏತಕ್ಕೆ ಅಷ್ಟೊಂದು ವ್ಯಾಮೋಹ? ಅದರ ಮೇಲೆ ಶೇಕಡ 15 ರಷ್ಟು ಏತಕ್ಕೆ ಹಾಕಬಾರದು?

ಶ್ರೀ ಸಿದ್ಧರಾಮಯ್ಯ :- ತೆರಿಗೆಗಳನ್ನು ನ್ಯಾಷನಲೈಸ್ ಮಾಡಿ ಒಂದು ರೀತಿಯ ರೇಟ್ ತರಬೇಕೆಂದಾಗ ಕೆಲವೊಂದು ಈ ರೀತಿಯದವು ಆಗುತ್ತವೆ. ಕೆಲವು ಪದಾರ್ಥಗಳಿಗೆ ಸಂಬಂಧಿಸಿದಂತೆ ನಾವು ಒಟ್ಟಾರೆ ಏನು ನೋಡಬೇಕು ಎಂದರೆ, ಸಾಮಾನ್ಯ ಜನರು ಬಳಸತಕ್ಕಂಥ ಪದಾರ್ಥಗಳ ಮೇಲೆ ತೆರಿಗೆ ಹೊರೆಯಾಗಿದೆಯೇ? ಹೆಚ್ಚು ಜನರು ಬಳಸತಕ್ಕಂಥ ವಸ್ತುಗಳ ಮೇಲೆ ತೆರಿಗೆ ಹೊರೆ ಯಾಗಿದೆಯೇ?, ಬಡವರು ಉಪಯೋಗಿಸತಕ್ಕಂಥ ಪದಾರ್ಥಗಳ ಮೇಲೆ ತೆರಿಗೆ ಹೆಚ್ಚಾಗಿದೆಯೇ? ಇಡೀ ದೇಶ ಮತ್ತು ರಾಜ್ಯಗಳಲ್ಲಿ ವಾದ ಏನಿದೆ ಎಂದರೆ ತೆರಿಗೆ ಬೆಲೆ ಹೆಚ್ಚಾದಷ್ಟು ಸೋರಿವಿಕೆ ಜಾಸ್ತಿಯಾಗುತ್ತದೆ ಎನ್ನುತಕ್ಕಂಥದ್ದು ದೇಶದಲ್ಲಿ ಹೊಸ ಸಿದ್ಧಾಂತವಿದೆ. ಟ್ಯಾಕ್ಸ್ ರೇಟ್ ಹೆಚ್ಚು ಆದಷ್ಟು ಸೋರಿಕೆ ಕೂಡ ಜಾಸ್ತಿಯಾಗುತ್ತದೆ ಎನ್ನುವುದು ದೇಶದಲ್ಲಿನ ಒಂದು ಹೊಸ ಸಿದ್ಧಾಂತವಾಗಿದೆ. ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಹೆಚ್ಚು ತೆರಿಗೆ ಇದ್ದರೆ ಟ್ರೇಡ್ ಬೇರೆ ರಾಜ್ಯಗಳಿಗೆ ಹೊರಟು ಹೋಗುತ್ತದೆ. ಆ ಕಾರಣಕ್ಕೋಸ್ಕರ ಬೇರೆ ರಾಜ್ಯಗಳಲ್ಲಿರುವ ತೆರಿಗೆ ದರಗಳು, ನಮ್ಮ ರಾಜ್ಯದಲ್ಲಿರತಕ್ಕ ತೆರಿಗೆ ದರಗಳು ಮತ್ತು ತೆರಿಗೆ ಸೋರಬಾರದು ಎನ್ನುವ ಕಾರಣಕ್ಕೋಸ್ಕರ ಈ ರ್‍ಯಾಷನೆಲೈಸೇಷನ್ ಮೆಥಡ್ ಅನ್ನು ಮಾಡಿದ್ದೇವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇದನ್ನು ಮಾಡಿದ್ದೇವೆಯೇ ಹೊರುತು, ಯಾವನೋ ಒಬ್ಬ ವ್ಯಕ್ತಿ ಉಪಯೋಗಿಸುತ್ತಾನೆ, ಒಬ್ಬ ವ್ಯಕ್ತಿ ಉಪಯೋಗಿಸುವುದಿಲ್ಲ ಎನ್ನುವುದಕ್ಕಲ್ಲ. ಇದೇ ಮುಖ್ಯವಾದರೂ ಕೂಡ ತೆರಿಗೆ ಹೆಚ್ಚು ಮಾಡಲಿಕ್ಕೆ ಆದೇ ಆಧಾರವಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ಇನ್ನು ಪಡಿತರ ವ್ಯವಸ್ಥೆ ಇಲ್ಲದ ಸೀಮೆ ಎಣ್ಣೆ ಬಗ್ಗೆ ಹೇಳುವುದಾದರೆ, ಎಷ್ಟೋ ಕಡೆ ಪಡಿತರ ಚೀಟಿಯಲ್ಲಿ ಸೀಮೆಎಣ್ಣೆ ಕೊಡುವುದಿಲ್ಲ. ಅದಕ್ಕೆ ಬದಲಾಗಿ ಕಾಳಸಂತೆಯಲ್ಲಿ ಅದನ್ನು ಮಾರಿಕೊಳ್ಳುತ್ತಾರೆ. ಅಂದರೆ ಜನರು ಅದನ್ನು ಬೇರೆ ಕಡೆ ಕೊಂಡುಕೊಳ್ಳುತ್ತಾರೆ. ಇದರರ್ಥ ನೀವು ನೇರವಾಗಿ ಸೀಮೆಎಣ್ಣೆ ಮೇಲೆ ತೆರಿಗೆಯನ್ನು ಹಾಕಿದಂತಾಯಿತು. ಹೊಲಿಗೆ ಯಂತ್ರಗಳು ಮತ್ತು ಅದರ ಭಾಗಗಳ ಮೇಲಿನ ತೆರಿಗೆಯನ್ನು 8 ರಿಂದ 10 ಕ್ಕೆ ಏರಿಸಿದ್ದೀರಿ. ಅಂದರೆ ಸೂಜಿ, ಕತ್ತರಿಗಳ ಮೇಲೆ ತೆರಿಗೆ ಏರಿಸಿದಂತಾಯಿತು.

ಶ್ರೀ ಸಿದ್ಧರಾಮಯ್ಯ :- ಹೊಲಿಗೆ ಯಂತ್ರಗಳ ಸಾಮಾನುಗಳಾದ ಸೂಜಿ ಮತ್ತು ದಾರದ ಮೇಲೆ ತೆರಿಗೆಯನ್ನು 8 ರಿಂದ 4 ಕ್ಕೆ ಇಳಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- ಇನ್ನು ರೇಜರ್ ಬ್ಲೇಡ್ ಮೇಲಿನ ತೆರಿಗೆಯನ್ನು 8 ರಿಂದ 10ಕ್ಕೆ ಏರಿಸಿದ್ದೀರಿ. ಇದರಲ್ಲಿ ಏನೋ ನಿಮ್ಮ ಸ್ವಾರ್ಥ ಇದೆ ಎಂದು ನಾನು ನೇರವಾಗಿ ಹೇಳುತ್ತೇನೆ. ಬ್ಲೇಡ್ ಅನ್ನು ಯಾರೂ ಉಪಯೋಗಿಸಬಾರದು, ಎಲ್ಲರೂ ನಿಮ್ಮ ತರಹ ಗಡ್ಡ ಬಿಟ್ಟು ಕೊಂಡು ಇರಬೇಕೆಂದು ಆ ರೀತಿ ಮಾಡಿದ್ದೀರೋ?

ಶ್ರೀ ಸಿದ್ಧರಾಮಯ್ಯ:- ಮಾನ್ಯ ಉಪಾಧ್ಯಕ್ಷರೇ, ತೆರಿಗೆ ಎರಡು ಪೈಸೆ ಹೆಚ್ಚು ಆಯಿತು, ಎರಡು ಪೈಸೆ ಕಡಿಮೆ ಆಯಿತು ಎನ್ನತಕ್ಕಂಥದ್ದು ಒಂದು ಭಾಗ. ಆದರೆ ಈ ದೇಶದಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಏನಾಗಿದೆ? ಅದರ ಮೇಲೆ ಲಾಭ ಎಷ್ಟು ಇರುತ್ತದೆ? ಕನ್‌ಸ್ಯೂಮರ್ಸ್‌ಗೆ ಎಷ್ಟು ಸಿಗುತ್ತದೆ? ಎನ್ನುವುದರ

ಬಗ್ಗೆ ಯಾರೂ ಚಿಂತೆ ಮಾಡುವುದಿಲ್ಲ. ಸರ್ಕಾರ ತೆರಿಗೆ ಎರಡು ಪೈಸೆ ಹೆಚ್ಚು ಮಾಡಿದರೆ ಅದರ ಬಗ್ಗೆ ದೇಶದ ಉದ್ದಗಲಕ್ಕೂ ಚರ್ಚೆಯಾಗುತ್ತದೆ. ಮ್ಯಾನುಫ್ಯಾಕ್ಚರ್ ಮಾಡತಕ್ಕ ಒಬ್ಬ ಮನುಷ್ಯನಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಾಗುತ್ತದೆ? ಅದಕ್ಕೆ ಅವನು ಎಷ್ಟು ಲಾಭ ಇಟ್ಟುಕೊಂಡಿರುತ್ತಾನೆ? ಅದರಿಂದ ಎಷ್ಟು ಜನರನ್ನು ಅವನು ಸೂರೆ ಮಾಡುತ್ತಾನೆ ಎನ್ನತಕ್ಕಂಥದ್ದರ ಬಗ್ಗೆ ಗಂಭೀರವಾದಂತಹ ಚರ್ಚೆ ಈ ದೇಶದ ವಿಧಾನಸಭೆಗಳಲ್ಲಿ ಆಗಲಿ, ಸಂಸತ್‌ನಲ್ಲಾಗಲೀ ಆಗುವುದಿಲ್ಲ. ಆದರೆ ತೆರಿಗೆ ಎರಡು ಪೈಸೆ ಹೆಚ್ಚು ಕಡಿಮೆ ಮಾಡಿದರೆ, ಅದರ ಬಗ್ಗೆ ದೇಶದ ಉದ್ದಗಲಕ್ಕೂ ಚರ್ಚೆಗಳು ನಡೆಯುತ್ತವೆ. ಇದನ್ನು ವೈಜ್ಞಾನಿಕವಾಗಿ ನೋಡತಕ್ಕಂತಹ, ಪ್ರಾಗ್‌ಮ್ಯಾಟಿಕ್ಕಾಗಿ ನೋಡತಕ್ಕಂತಹ ಚರ್ಚೆಗಳು ಇವತ್ತು ದೇಶದಲ್ಲಿ ಆಗಬೇಕಾಗಿವೆ.

ಶ್ರೀ ವಾಟಾಳ್ ನಾಗರಾಜ್ :- ಇನ್ನು ಕನ್ನಡಕ, ಸನ್ ಗ್ಲಾಸ್ ಇವುಗಳ ಮೇಲಿನ ತೆರಿಗೆಯನ್ನು 8 ರಿಂದ 10ಕ್ಕೆ ಏರಿಸಿದ್ದೀರಿ. ಹಿಂದೆ 40 ವರ್ಷಕ್ಕೆ ಕಣ್ಣು ಕಾಣದೇ ಇರುತ್ತಿತ್ತು. ಈಗ 30-35 ವರ್ಷಕ್ಕೆ ಕಣ್ಣು ಕಾಣದಂತಾಗುತ್ತಿದೆ.

ಶ್ರೀ ಸಿದ್ಧರಾಮಯ್ಯ:- ರೀಡಿಂಗ್ ಗ್ಲಾಸಸ್‌ಗೆ ವಿನಾಯಿತಿ ಕೊಟ್ಟಿದ್ದೇವೆ. ನೀವೇನು ಈಗ ಕನ್ನಡಕ ಹಾಕಿಕೊಂಡಿದ್ದೀರಿ, ಅದಕ್ಕೆ ಜಾಸ್ತಿಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ - ಪ್ರತಿಯೊಂದು ಬಗೆಯ ಪ್ಲೇಯಿಂಗ್ ಕಾರ್ಡ್ಸ್ ಮೇಲಿನ ತೆರಿಗೆಯನ್ನು 12 ರಿಂದ 10ಕ್ಕೆ ಇಳಿಸಿದ್ದೀರಿ. ಈ ಇಸ್ಪೀಟ್ ಎಂಬ ಜೂಜನ್ನು ರದ್ದು ಮಾಡತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಬದಲಾಗಿ ನೀವು ಅದಕ್ಕೆ ಬೆಂಬಲ ಕೊಡುತ್ತಿದ್ದೀರಿ. ಇದು ಒಳ್ಳೆಯ ನೀತಿಯಲ್ಲ. ಶಸ್ತ್ರಚಿಕಿತ್ಸೆ, ದಂತ ಚಿಕಿತ್ಸೆಗೆ ಸಂಬಂಧಪಟ್ಟ ಉಪಕರಣಗಳ ಮೇಲೆ ತೆರಿಗೆ ಜಾಸ್ತಿ ಮಾಡಿದ್ದೀರಿ. ಇವು ಎಲ್ಲರಿಗೂ ಬೇಕಾದಂತಹ ವಸ್ತುಗಳು. ಈ ವಸ್ತುಗಳ ಮೇಲೆಯೇ ನೀವು ಏಕೆ ಗಮನ ಹರಿಸಿದಿರೋ ನನಗೆ ಗೊತ್ತಾಗುತ್ತಿಲ್ಲ. ಎಕ್ಸರೇ ಮೇಲೆ ತೆರಿಗೆ ಹಾಕಿದ್ದೀರಿ. ಗ್ರಾನೈಟ್ ಕಲ್ಲಿನ ಚೂರಿನ ಮೇಲಿನ ತೆರಿಗೆ ಕಡಿಮೆ ಮಾಡಿದ್ದೀರಿ. ಇದನ್ನು ಏಕೆ ಕಡಿಮೆ ಮಾಡಿದಿರಿ? ನನಗನಿಸುತ್ತದೆ, ಇದೆಲ್ಲಾ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ನನಗೆ ಗೊತ್ತಿರುವಂತೆ ಕೆಲವಕ್ಕಂತೂ ನೀವು ತೆರಿಗೆ ಹಾಕಿಯೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಶಿವದಾರಕ್ಕೆ ನೀವು ತೆರಿಗೆ ಹಾಕಿಲ್ಲ. ಪ್ರತಿ ಶಿವರಾತ್ರಿಯಲ್ಲಿ ಹೆಚ್ಚು ಕಡಿಮೆ ಒಂದು ಲಕ್ಷ ಶಿವದಾರ ಬದಲಾಯಿಸುತ್ತಾರೆ. ಅದರ ಮೇಲೆ ನಿಮಗೆ ಏಕೆ ನಿಮಗೆ ಕಣ್ಣು ಬೀಳಲಿಲ್ಲ? ನಿಮಗೆ ಯಾರು ಅಧಿಕಾರಿಗಳು ಹೇಳಲಿಲ್ಲವೇ? ಹಾಗೆಯೇ ಜನಿವಾರಕ್ಕೆ ಏಕೆ ನೀವು ತೆರಿಗೆ ಹಾಕಿಲ್ಲ. ನನ್ನ ಅಂದಾಜು ಪ್ರಕಾರ ಅದನ್ನು ಬಳಸುವವರು ಹೆಚ್ಚು ಕಡಿಮೆ 40 ಲಕ್ಷ ಬರಬಹುದು. ಇದು ನಗತಕ್ಕ ವಿಷಯವಲ್ಲ. ಇದರ ಮೇಲೂ ಸಹಾ ನಿಮ್ಮ ಕಣ್ಣು ಬಿದ್ದಿಲ್ಲ. ಹಾಗೆಯೇ ಉಡಿದಾರಕ್ಕೂ ನೀವು ತೆರಿಗೆ ಹಾಕಿಲ್ಲ.

ಶ್ರೀ ಸಿದ್ಧರಾಮಯ್ಯ :- ಈಗ ಯಾರೂ ಕೂಡ ಉಡಿದಾರ ಹಾಕುವುದೇ ಇಲ್ಲ.

ಶ್ರೀ ವಾಟಾಳ್ ನಾಗರಜ್ :- ಅದು ಹ್ಯಾಗೆ ಗೊತ್ತು ನಿಮಗೆ?

ಶ್ರೀ ಸಿದ್ಧರಾಮಯ್ಯ:- ಬಹಳ ಜನ ಇವತ್ತು ಹಾಕುತ್ತಿಲ್ಲ. ಇದೆಲ್ಲಾ ನಿಮಗೆ ಗೊತ್ತಿರುತ್ತದೆ. ನೀವು ನೋಡಿರುತ್ತೀರಿ.

ಶ್ರೀ ವಾಟಾಳ್ ನಾಗರಾಜ್ :- ಬಹಳ ಜನ ಉಡಿದಾರ ಕಟ್ಟುವುದಿಲ್ಲ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ಅದು ನಿಮಗೆ ಹೇಗೆ ಗೊತ್ತು ಎಂಬುದನ್ನು ತಾವು ಹೇಳಬೇಕು.

ಶ್ರೀ ಸಿದ್ಧರಾಮಯ್ಯ:- ಬಹಳ ಜನ ಜನಿವಾರ, ಶಿವದಾರಗಳನ್ನೇ ಈಗ ತೆಗೆದು ಹಾಕುತ್ತಿದ್ದಾರೆ. ಅದೇ ಪ್ರಕಾರವಾಗಿ ಉಡಿದಾರಗಳನ್ನೂ ತೆಗೆದು ಹಾಕುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಉಪಾಧ್ಯಕ್ಷರೇ, ನಮ್ಮ ಕಡೆಗೆ ಉಡಿದಾರ ಇಲ್ಲದಿದ್ದರೆ, ಉಡಿದಾರ ಇಲ್ಲದ ಮುಡಿದಾರ ಎಂದು ಕರೆಯುತ್ತಾರೆ. ಆದುದರಿಂದ ಎಲ್ಲರೂ ಉಡಿದಾರ ಕಟ್ಟಿರುತ್ತಾರೆ. ಇಲ್ಲದಿದ್ದರೆ ನಮ್ಮನ್ನು ಮುಡಿದಾರ ಎನ್ನುತ್ತಾರೆ ಎಂಬ ಅಂಜಿಕೆಯಿಂದ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಇವತ್ತು ನಮ್ಮ ಕಡೆ ಬಹಳ ಜನ ಉಡಿದಾರ ಹಾಕುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ:- ಹಿಂದೆ ಹುಡುಗರಿಗೆ ಬೆಳ್ಳಿಯ ಉಡಿದಾರ ಹಾಕುತ್ತಿದ್ದರು. ಯಾವಾಗ ಕೆಲವರು ಅವುಗಳನ್ನು ಕದಿಯುವುದಕ್ಕೆ ಶುರು ಮಾಡಿದರೋ, ಆಗಿನಿಂದ ಉಡಿದಾರ ಯಾರೂ ಹಾಕುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿದ್ಧರಾಮಯ್ಯ:- ನೀವು ಉಡಿದಾರ ಕಟ್ಟಿದ್ದೀರೋ ಹೇಗೆ? ಅದನ್ನು ಪರಿಶೀಲಿಸುವುದಕ್ಕೆ ಬೇಕಾದರೆ ಮಾನ್ಯ ನಂಜೇಗೌಡ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :- ನಾನು ಈ ಸದನದ ಗಾಂಭೀರ್ಯವನ್ನು, ಗೌರವವನ್ನು ಕಾಪಾಡಬೇಕು. ಅಲ್ಲದೆ ನನ್ನ ಇಬ್ಬರು ಅಕ್ಕ ತಂಗಿಯರು ಇಲ್ಲಿದ್ದಾರೆ. ಇಲ್ಲದಿದ್ದರೆ ನಾನು ಈ ಸದನದಲ್ಲಿ ಉಡಿದಾರ ಪ್ರದರ್ಶನ ಮಾಡುತ್ತಿದ್ದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :- ದಯವಿಟ್ಟು ಉಡಿದಾರ, ಶಿವದಾರ, ಜನಿವಾರಗಳನ್ನು ಯಾರೂ ಇಲ್ಲಿ ಪ್ರದರ್ಶನ ಮಾಡುವುದು ಬೇಕಾಗಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಅದಕ್ಕಾಗಿಯೇ ಮಾನ್ಯ ಉಪ ಮುಖ್ಯಮಂತ್ರಿಗಳು ಅದನ್ನು ಇಲ್ಲಿ ಪ್ರದರ್ಶನ ಮಾಡುವುದು ಬೇಡ ಎಂದು ಸದನದ ಸಮಿತಿಯನ್ನು ರಚಿಸುತ್ತೇನೆ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ :- ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಸವಾಲನ್ನು ಸ್ವೀಕರಿಸುತ್ತೇನೆ. ಶ್ರೀ ಶ್ರೀ ರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸದನ ಸಮಿತಿ ಮಾಡಲಿ, ನಾನು ಅಲ್ಲಿ ಅದನ್ನು ಪ್ರದರ್ಶನ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ:- ನಾನು ಮಾನ್ಯ ವಾಟಾಳ್‌ರವರು ಸಿಗರೇಟ್ ಸೇದುವುದಿಲ್ಲ, ಕುಡಿಯುವುದಿಲ್ಲ ಇನ್ನಾವುದೇ ಕೆಟ್ಟ ಕೆಲಸಗಳನ್ನು ಮಾಡುವುದಿಲ್ಲವೆಂದು ಅಂದುಕೊಂಡಿದ್ದೆ. ಈಗ ಅವರು ನೋಡಿದರೆ ನಾನು ಬಟ್ಟೆ ಬಿಸಾಕುತ್ತೇನೆ ಎಂಬ ಮಾತಾಡುತ್ತಿದ್ದಾರೆ. ಇದರಿಂದಾಗಿ ಬಹಳ ಅನುಮಾನ ಉಂಟಾಗುತ್ತಿದೆ.

ಶ್ರೀ ಹೆಚ್. ಎನ್ . ನಂಜೇಗೌಡ :- ಇಂತಹ ಪುಣ್ಯ ಕೆಲಸ ಮಾಡಲು ನೇಮಿಸಲಾಗುವ ಸದನ ಸಮಿತಿಗೆ ನಾನು ಅಧ್ಯಕ್ಷನಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾನು ಯಾವಾಗಲೂ ಸತ್ಯವನ್ನೇ ಹೇಳತಕ್ಕ ಮನುಷ್ಯ. ಆದುದರಿಂದ, ನಾನು ಅವರಿಗೆ ಸುಳ್ಳು ಹೇಳಬಾರದು ಅಂತಾ ಹೇಳಿ ಆ ಮಾತನ್ನು ಹೇಳಿದ್ದೇನೆಯೇ ಹೊರತು, ತಾವು ಅದನ್ನು ಅನ್ಯಥಾ ಭಾವಿಸಬಾರದು.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಆ ಸತ್ಯ ನಗ್ನ ಸತ್ಯ ಆಗಬಾರದು.

ಶ್ರೀ ವಾಟಾಳ್ ನಾಗರಾಜ್ :- ನಾನು ಆಗಿನಿಂದ ಬಹಳ ಎಚ್ಚರಿಕೆಯಿಂದ ಶ್ರೀಮತಿ ಪ್ರಮೀಳಾರವರು ಎಲ್ಲಿ ನನ್ನ ಮೇಲೆ ಬೀಳುತ್ತಾರೋ ಎಂದು ಗಮನಿಸುತ್ತಿದ್ದೇನೆ. ತಾವು ದಯವಿಟ್ಟು ಕ್ಷಮಿಸಬೇಕು. ನಿಮ್ಮ ಮೇಲೆ ನನಗೆ ಅಪಾರ ಗೌರವ ಇದೆ. ಮಾನ್ಯ ಉಪಮುಖ್ಯಮಂತ್ರಿಗಳ ಮೇಲೆ ಕೂಡ ಗೌರವ ಇದೆ.

ಉಪಾಧ್ಯಕ್ಷರು:- ಇನ್ನು 15-20 ನಿಮಿಷಗಳಲ್ಲಿ ಅಂದರೆ 1.30ಕ್ಕೆ ನಿಮ್ಮ ಭಾಷಣ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ :- ಹಾಗೆಯೇ ನೀವು ಬಳೆಗಳು, ಬಿಚ್ಚೋಲೆ, ಅರಿಶಿನ, ಕುಂಕುಮ, ಈರುಳ್ಳಿ, ಬೆಳ್ಳುಳ್ಳಿ ಇವುಗಳ ಮೇಲೆ ತೆರಿಗೆ ಹಾಕಿಲ್ಲ. ಅವು ನಿಮ್ಮ ಕಣ್ಣಿಗೆ ಬೀಳಲಿಲ್ಲವೋ? ಹಾಗೆಯೇ ಕುಟುಂಬ ಯೋಜನೆ ಯಶಸ್ವಿಯಾಗಬೇಕೆಂದು ಹೇಳಿ ನಿರೋಧ್ ಮೇಲೆ ತೆರಿಗೆ ಹಾಕಿಲ್ಲವೇ? ನಾನೇನು ಇವುಗಳ ಮೇಲೆ ತೆರಿಗೆ ಹಾಕಿ ಎಂದು ಹೇಳುವುದಕ್ಕೆ ಹೋಗವುದಿಲ್ಲ. ನಾನು ಅತ್ಯಂತ ಪ್ರಾಮಾಣಿಕವಾಗಿ ಸರ್ಕಾರಕ್ಕೆ ಹೇಳುತ್ತಿದ್ದೇನೆ, ಈ ಸರ್ಕಾರ ಉತ್ತಮ ಆಡಳಿತ ಕೊಡಬೇಕು ಎನ್ನತಕ್ಕಂಥ ವಿಚಾರವಿದ್ದರೂ ಮುಖ್ಯ ಮಂತ್ರಿಗಳ ಹತ್ತಿರ ಅನೇಕ ಖಾತೆಗಳು ಇರುವುದರಿಂದ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿದೆ. 5-6 ಮಂತ್ರಿಗಳು ರಾಜೀನಾಮೆ ಕೊಟ್ಟರು. ಆ ಖಾತೆಗಳು ಯಾವ ಹತ್ತಿರ ಇವೆ? ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಆ ಖಾತೆಗಳನ್ನು ಬೇರೆ ಮಂತ್ರಿಗಳಿಗೆ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಹೌದೇ ಕೊಟ್ಟುಬಿಟ್ಟಿದ್ದಾರೆಯೇ?

ಶ್ರೀ ಎಲ್. ಆರ್. ಶಿವರಾಮೇಗೌಡ:- ಹೌದು, ಬಚ್ಚೇಗೌಡರನ್ನೇ ಕೇಳಿ. ಕಂದಾಯ ಇಲಾಖೆಯನ್ನು ಅವರೇ ಡೀಲ್ ಮಾಡುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಖಾತೆಗಳನ್ನು ಯಾರಿಗೆ ಕೊಟ್ಟಿದ್ದಾರೆ ಎನ್ನುವುದು ರೂಲಿಂಗ್ ಪಾರ್ಟಿಯಲ್ಲಿರುವವರಿಗೂ ಗೊತ್ತಿಲ್ಲ. ವಾಟಾಳ್‌ನಾಗರಾಜ್‌ರವರಿಗೆ ಏನು ಗೊತ್ತಿದೆ. ಅದೇ ಖಂಡಿತ, ಅದೇ ಸತ್ಯ. ಆ ಬಗ್ಗೆ ನೋಟಿಫಿಕೇಷನ್ ಆಗಿಲ್ಲ. ನೀವು ಹೇಳುವುದೇ ಸರಿ. ರಾಜ್ಯಪಾಲರಿಂದ ನೋಟಿಫಿಕೇಷನ್ ಆಗಿ ಇಂಥ ಇಲಾಖೆಯನ್ನು ಇವರಿಗೆ ಕೊಟ್ಟಿದ್ದೇವೆ ಎನ್ನುವುದು ಬಂದಿಲ್ಲ. ಪ್ರಶ್ನೋತ್ತರ ಕಾಲದಲ್ಲಿ ಉತ್ತರ ಕೊಡುವುದಕ್ಕಾಗಿ ಒಬ್ಬರು ರೆವಿನ್ಯೂ ನೋಡಬೇಕು, ಇನ್ನೊಬ್ಬರು ಎಕ್ಸೈಸ್ ನೋಡಬೇಕು, ಮತ್ತೊಬ್ಬರು ಕೆ. ಇ. ಬಿ. ನೋಡಬೇಕು ಹೀಗೆ ಬಿಸಿನೆಸ್ ಅಲೋಕೇಷನ್ ಆಗಿದೆಯೇ ಹೊರತಾಗಿ ಪೋರ್ಟ್‌ಪೋಲಿಯೋ ಆಲೋಕೇಷನ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಸಂಪೂರ್ಣವಾಗಿ ಆ ಇಲಾಖೆಯನ್ನು ವಹಿಸಿಲ್ಲ. ಆ ಇಲಾಖೆಯ ಪರವಾಗಿ ಉತ್ತರವನ್ನು ಕೊಡುವುದಕ್ಕೆ ಮಾತ್ರ ವಹಿಸಿದ್ದಾರೆ. ಏಕೆಂದರೆ ಮುಖ್ಯಮಂತ್ರಿಗಳು ಇಷ್ಟೊಂದು ಇಲಾಖೆಗಳನ್ನು ಇಟ್ಟುಕೊಂಡರೆ ಆಡಳಿತ ನಡೆಸಲು ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಾ ಇಲಾಖೆಗಳನ್ನು ಹಂಚಬೇಕು. ಇವರು ಮಂತ್ರಿಮಂಡಲವನ್ನು ವಿಸ್ತರಣೆ ಮಾಡುತ್ತಾರೆ. ಎನ್ನುವ ಗಾಳಿ ಸುದ್ದಿ ಎಲ್ಲ ಪತ್ರಿಕೆಗಳಲ್ಲಿ ಬಂದಿದೆ. ಆದರೆ ನೀವು ಯಾವಾಗ ಮಾಡುತ್ತೀರೋ ಗೊತ್ತಿಲ್ಲ. ಹೀಗೆ ಮಾಡುವುದರಿಂದ ಎಲ್ಲೋ ಒಂದು ಕಡೆ ಹೆಪ್ಪುಗಟ್ಟಿ ನಿಂತಿರತಕ್ಕಂಥ ಅಧಿಕಾರ ಚಾಲನೆಯಾಗುತ್ತದೆ. ಆಡಳಿತಕ್ಕೆ ಅನುಕೂಲ ಆಗಬೇಕಾದರೆ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಬೇಕು ಮತ್ತು ಹೆಚ್ಚಿನ ಇಲಾಖೆಗಳನ್ನು ಕೊಡಬೇಕು. ತಮ್ಮ ಮೂಲಕ ಕೇಳುತ್ತಿದ್ದೇನೆ, ಹಿಂದೆ ಇವರು ತಿಪ್ಪಗೊಂಡನಹಳ್ಳಿಯಲ್ಲಿ ಮಂತ್ರಿಗಳನ್ನೆಲ್ಲಾ ಕರೆಸಿ ಒಂದು ಸಭೆ ಮಾಡಿದರು. ನಾವು ಹೇಗೆ ಇರಬೇಕು, ಯಾವ ರೀತಿ ಆಡಳಿತ ಮಾಡಬೇಕು ಎಂದು. ಅದು ಅವತ್ತೇ ತಿಪ್ಪಗೊಂಡನಹಳ್ಳಿ ಕೆರೆಗೆ ಬಿದ್ದುಹೋಯಿತೇ ಅಥವಾ ಅದರ ಬಗ್ಗೆ ಏನಾದರೂ ವ್ಯವಸ್ಥೆ ಮಾಡಲಾಗಿದೆಯೇ? ಇದು ಬಹಳ ಪತ್ರಿಕೆಗಳಲ್ಲಿ ಬಂತು. ಯಾವ್ಯಾವ ರೀತಿ ಇರಬೇಕು, ಮೂರನೇ ಮಹಡಿಯಲ್ಲಿ ಮಂತ್ರಿಗಳು ಹೇಗೆ ಇರಬೇಕು, ಮಂತ್ರಿಗಳು ಯಾವ ರೀತಿ ಆಡಳಿತ ನಡೆಸಬೇಕು, ಹೀಗೆ ಪ್ರತಿಯೊಂದು ವಿಷಯವೂ ಸೇರಿದಂತೆ ತಿಪ್ಪಗೊಂಡನಹಳ್ಳಿ ಸಭೆಯಲ್ಲಿ 20 ಅಂಶಗಳ ಒಂದು ಕಾರ್ಯಕ್ರಮದ ಪಟ್ಟಿಯನ್ನು ಮಾಡಿ ಹಾಕಿದರು. ಆದರೆ ಈ ಕ್ಷಣದವರೆಗೆ ಒಂದು ಅಂಶದ ಕಾರ್ಯಕ್ರಮವೂ ಜಾರಿಯಾಗಿಲ್ಲ. ತಿಪ್ಪಗೊಂಡನಹಳ್ಳಿ ಕಾರ್ಯಕ್ರಮದ ನಿಮ್ಮ ಸೂತ್ರಗಳು ಏನಾದವು? ಇನ್ನೊಂದು 'ಕಡತ ಯಜ್ಞ' ಇದು ಏನಾಯಿತು? ಅದರ ಬಗ್ಗೆ ಏನೂ ಕಾಣಲಿಲ್ಲ. ಇವೆಲ್ಲವನ್ನೂ ಏಕೆ ಹೇಳುತ್ತಿದ್ದೇನೆ ಎಂದರೆ, ನೀವು ಮಾಡತಕ್ಕಂಥ ವ್ಯವಸ್ಥೆಯಲ್ಲಿ ಅತ್ಯಂತ ಪ್ರಾಮಾಣಿಕ ಆಡಳಿತವೇ ನೇರವಾಗಿ ಬರತಕ್ಕಂಥಾದ್ದು. ಈ ಆಡಳಿತವನ್ನು ತಾವು ಸರಿಪಡಿಸಲಿಲ್ಲ ಎಂದರೆ ಇದು ಒಳ್ಳೆಯ ರೀತಿಯಲ್ಲಿ ಹೋಗುವುದಿಲ್ಲ. ನನಗನ್ನಿಸುತ್ತದೆ, ನನಗೆ ಗೊತ್ತಿರುವ ಹಾಗೆ ನಿಮಗೆ ಈಗಂತೂ ಯಾವುದೇ ಭಯ ಇಲ್ಲ. ನಾನು ತಿಳಿದುಕೊಂಡಿರುವ ಹಾಗೆ ಈ ಸರ್ಕಾರಕ್ಕೆ ಭಯವಂತೂ ಇಲ್ಲ. ನಿಮ್ಮ ಸರ್ಕಾರ ಈಗ ಸುಭದ್ರವಾಗಿದೆ ಎಂದು ತಿಳಿದುಕೊಂಡಿದ್ದೇನೆ. ಮೊದಲು ನಿಮಗೆ ಸ್ವಲ್ಪ ಅನುಮಾನಗಳಿದ್ದವು. ಆ ಅನುಮಾನಗಳೇನೆಂದರೆ, ನಾವು ವಿಶ್ವಾಸಮತ ತೆಗೆದುಕೊಳ್ಳಬೇಕು ಎಂದು ಇದ್ದು, ಅದನ್ನು ತೆಗೆದುಕೊಂಡಿರಿ. ಮೊದಲನೆಯ ನಿಮ್ಮ ಗೆಲುವಾಗಿ 135 ಮತಗಳನ್ನು ತೆಗೆದು ಕೊಂಡಿರಿ. ಎರಡನೇ ಸಾರಿ ನಿಮಗೆ ಚುನಾವಣೆಗಳು ಆದನಂತರ ಏನಾಗುತ್ತದೋ ಏನೋ ಎನ್ನುವ ಅನುಮಾನ ನಿಮಗೆ ಬಂತು. ಚುನಾವಣೆ ಆದನಂತರ ಈ ರಾಜ್ಯದಲ್ಲಿ ಬಿ.ಜೆ.ಪಿ., ಲೋಕಶಕ್ತಿ, ಕಾಂಗ್ರೆಸ್ ಇವರೆಲ್ಲಾ ಸೇರಿದಾಗ ನಿಮಗೆ ಅಂತರ ಬಹಳ ಕಡಿಮೆಯಾಯಿತು. ಆಗಲೂ ಸಹ ನಾವು ಏನು ಹೇಳಿದೆವು ಎಂದರೆ ಈ ಚುನಾವಣೆಯ ಫಲಿತಾಂಶದ ಆಧಾರದ ಮೇಲೆ ನಮ್ಮ ಸರ್ಕಾರ ರಾಜೀನಾಮೆ ಕೊಡಬಾರದು ಎನ್ನತಕ್ಕಂಥ ಮಾತನ್ನು ನಾವು ನೇರವಾಗಿ ಹೇಳಿದೆವು. ಅಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಶಾಸನಸಭೆ ವಿಸರ್ಜನೆ ಆಗಬಾರದು ಎನ್ನುವಂಥ ಮಾತನ್ನು ನಾವು ಸ್ಪಷ್ಟವಾಗಿ ಹೇಳಿದೆವು. ಆದರೆ ಇತ್ತೀಚಿಗೆ ಅಂದರೆ ಮೂರು ದಿವಸದ ಹಿಂದೆ ಕೇಂದ್ರ ಸಚಿವರಾದ ರಾಮಕೃಷ್ಣ ಹೆಗಡೆಯವರು ಏನು ಹೇಳಿದರು ಎಂದರೆ, ನನ್ನನ್ನು ಲೋಕಶಕ್ತಿ, ಬಿ.ಜೆ.ಪಿ. ಯವರು ಕರೆಯುವುದಾದರೆ ನಾನು ನೇರವಾಗಿ ಅಧಿಕಾರಕ್ಕೆ ಬರುತ್ತೇನೆ, ಮುಖ್ಯಮಂತ್ರಿಯಾಗುತ್ತೇನೆ ಎನ್ನುವ ಮಾತನ್ನು ಹೇಳಿದರು. ಇವತ್ತು ಹಾಗೂ ನಿನ್ನೆಯ ಪತ್ರಿಕೆಗಳಲ್ಲಿ ನಾನು ನೋಡಿದ ಪ್ರಕಾರ ಬಿ.ಜೆ.ಪಿ. ಯವರು ನಾವು ಸರ್ಕಾರ ಮಾಡಲು ತಯಾರಿಲ್ಲ ಎನ್ನುವುದನ್ನು

ಸ್ಪಷ್ಟವಾಗಿ ಹೇಳಿದ್ದಾರೆ. ಅಂದಾಗ ಸರ್ಕಾರ ಮಾಡತಕ್ಕಂಥ ಪ್ರಶ್ನೆ, ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿ ಆಗತಕ್ಕಂತಹ ಪ್ರಶ್ನೆ ಎಲ್ಲವೂ ಹೊರಟು ಹೋಯಿತು. ಈಗ ನಿಮ್ಮ ಸರ್ಕಾರ ಸುಭದ್ರವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸುಭದ್ರವಾಗಿರತಕ್ಕಂಥ ಈ ಸರ್ಕಾರ, ಇನ್ನೂ ಒಂದು ವರ್ಷ, ಎಂಟು ತಿಂಗಳ ಅಧಿಕಾರಾವಧಿಯು ಇರತಕ್ಕಂಥ ಸರ್ಕಾರ, ಈ ರಾಜ್ಯಕ್ಕೆ ಹೊಸ ಕಾಯಕಲ್ಪವನ್ನು ಕೊಟ್ಟು ಶಕ್ತಿಯುತವಾಗಿ ರಾಜ್ಯದ ಆಡಳಿತವನ್ನು ನಡೆಸತಕ್ಕಂಥ ವಿಚಾರಕ್ಕೆ ತಾವೂ ಹೋಗಬೇಕು. ಮೊದಲನೆಯದಾಗಿ, ನಾನು ಪಕ್ಷಾತೀತವಾಗಿ ಈ ರಾಜ್ಯದ ಎಲ್ಲಾ ಶಾಸಕರ ಪರವಾಗಿ ಮಾತನಾಡುತ್ತೇನೆ, ಲೋಕಸಭೆಯ ಸದಸ್ಯರಿಗೆ ಅವರ ಕ್ಷೇತ್ರದಲ್ಲಿ ಅವರ ಸ್ವಂತ ವಿವೇಚನೆಗೆ ಬಿಟ್ಟಂತೆ ಕೆಲಸಗಳನ್ನು ಮಾಡಲು ಅವರಿಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಕೊಟ್ಟಿದ್ದಾರೆ. ಅದೂ ಸಹ ಒಂದು ವರ್ಷಕ್ಕೆ. ನಾನು ಸಿದ್ಧರಾಮಯ್ಯನವರನ್ನು ಎರಡೂ ಕೈ ಜೋಡಿಸಿ ಎಲ್ಲಾ ಶಾಸಕರ ಪರವಾಗಿ ಕೇಳಿಕೊಳ್ಳುತ್ತೇನೆ. ಇನ್ನು ಒಂದೂವರೆ ವರ್ಷದಲ್ಲಿ ಚುನಾವಣೆ ಬರುತ್ತಿದೆ. ಆ ಚುನಾವಣೆ ತಾಲ್ಲೂಕು ಪಂಚಾಯಿತಿ ಒಂದು ಕಡೆ, ಜಿಲ್ಲಾ ಪಂಚಾಯಿತಿ ಒಂದು ಕಡೆ, ಆಡಳಿತ ವಿಕೇಂದ್ರೀಕರಣದಲ್ಲಿ ಶಾಸಕರ ಕೈ ಮತ್ತು ಬಾಯಿ ಎರಡೂ ಕಟ್ಟಿದೆ. ಅವರು ಜನಗಳಿಗೆ ಉತ್ತರ ಕೊಡಬೇಕಾದರೆ, ಒಂದು ಕೊಳವೆ ಬಾವಿ ಹಾಕಿಸಲು, ಒಂದು ರಸ್ತೆ ಮಾಡಿಸಲು, ಯಾವುದೇ ಒಂದು ಕಟ್ಟಡ ಕಟ್ಟಿಸಲು ಅಥವಾ ಜನಗಳ ಪರವಾಗಿ ಕೆಲಸ ಮಾಡುವುದಕ್ಕಾಗಿ ಕನಿಷ್ಠ ಒಂದು ಕೋಟಿ ರೂಪಾಯಿಯನ್ನಾದರೂ ಕೊಡಬೇಕು. ವಿಧಾನ ಸಭೆ, ವಿಧಾನ ಪರಿಷತ್ತು, ಎಲ್ಲವನ್ನೂ ಸೇರಿಸಿದರೆ 300 ಕೋಟಿ ಆಗುವುದಿಲ್ಲ. ಮುಖ್ಯ ಮಂತ್ರಿಗಳಾದ ಜೆ. ಹೆಚ್. ಪಟೇಲರನ್ನು ಮತ್ತು ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರನ್ನು ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಈ ಕೆಲಸವನ್ನು ಮಾಡಿದರೆ ನೀವು ಇತಿಹಾಸದಲ್ಲಿರುತ್ತೀರಿ. ಮುಂದೆ ಬರತಕ್ಕಂಥ ಶಾಸನಸಭೆಗಳಲ್ಲಿ ಹಾಗೂ ಇತಿಹಾಸ ಇರುವವರೆಗೂ ನೆನಪಿನಲ್ಲಿರುತ್ತೀರಿ. ಶಾಸಕರುಗಳ ವಿವೇಚನೆಗೆ ಬಿಟ್ಟಂತೆ ಒಂದು ಕೋಟಿ ರೂಪಾಯಿಗಳನ್ನು ಅವರ ಕ್ಷೇತ್ರದಲ್ಲಿ ಅವರು ಕೇಳಿದ ಕೆಲಸವನ್ನು ಮಾಡುವುದಕ್ಕೆ ಬಜೆಟ್‌ನಲ್ಲಿ ಒದಗಿಸಿದ್ದಾರೆ ಎನ್ನತಕ್ಕಂಥ ಕೀರ್ತಿ ಶತಶತಮಾನಗಳ ಕಾಲ ಉಳಿಯುತ್ತದೆ. ದಯಮಾಡಿ ನೀವು ಆ ಕೆಲಸವನ್ನು ಮಾಡಿ. ಚುನಾವಣೆಗೆ ಹೋಗತಕ್ಕಂಥ ಶಾಸಕರಿಗೆ ಅದೊಂದು ಊರುಗೋಲಾಗಿರುತ್ತದೆ ಎಂದು ನನಗನ್ನಿಸುತ್ತದೆ. ಆ ಕೆಲಸವನ್ನು ತಾವು ಮಾಡಬೇಕು ಎಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಎರಡನೆಯದಾಗಿ, ಜಿಲ್ಲೆಗಳ ವಿಂಗಡನೆ ಬಗ್ಗೆ ಹೇಳುವುದಾದರೆ, ಹೊಸ ಜಿಲ್ಲೆಗಳನ್ನು ಮಾಡಿದ್ದನ್ನು ನಾನು ಒಂದಲ್ಲ ನೂರು ಬಾರಿ ಮುಕ್ತಕಂಠದಿಂದ ಹೊಗಳುತ್ತೇನೆ. ಜೆ. ಹೆಚ್. ಪಟೇಲರು ಇಲ್ಲದಿದ್ದರೆ ಶತಮಾನಗಳಾದರೂ ಆ ಜಿಲ್ಲೆಗಳು ಆಗುತ್ತಿರಲಿಲ್ಲ. ಇನ್ನು ಉಳಿದಿರತಕ್ಕಂಥ ಜಿಲ್ಲೆಗಳನ್ನು ಮಾಡುವ ವಿಚಾರ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಮಾತೆತ್ತಿದರೆ ಸಾಕು, ನಮ್ಮ ವಿರೋಧ ಪಕ್ಷದ ನಾಯಕರು ನಿಮ್ಮ ಕ್ಷೇತ್ರವನ್ನು ಜಿಲ್ಲೆಯನ್ನಾಗಿ ಮಾಡಿಸಿಕೊಂಡಿರಿ ಎಂದು ನನ್ನನ್ನು ಹಗಲೂ ರಾತ್ರಿ ಕಾಡುತ್ತಾರೆ, ಬೇಡುತ್ತಾರೆ. ಅವರಿಗೆ ಗೊತ್ತಿದೆ, ಯಾದಗಿರಿ ಏಕೆ ಜಿಲ್ಲೆಯಾಗಬೇಕು ಎಂದರೆ, ಎಲ್ಲ ಸಮಿತಿಗಳು ಹಾಗೆ ವರದಿಕೊಟ್ಟಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದರಲ್ಲಿ ಕಾಡುವ ಬೇಡುವ ಪ್ರಶ್ನೆ ಇಲ್ಲ. ಸಮಿತಿಗಳ ವರದಿ ಪ್ರಕಾರ ನಮಗೆ ಹಕ್ಕು ಇದೆ. ಅವರಿಗೆ ಧೈರ್ಯ ಇದೆ ಎಂದು ನೀವು ಹೇಳಿದಿರಿ. ಧೈರ್ಯ ಇದ್ದುದರಿಂದಲೇ 7-8 ಜಿಲ್ಲೆಗಳನ್ನು ಮಾಡಿದರು. ಆದರೆ ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಏಕೆ ಧೈರ್ಯವಿಲ್ಲ? ಯಾವುದಾದರೂ ಒಂದು ವರದಿ ಸರ್ಕಾರ ವಿರುದ್ಧವಾಗಿದ್ದರೆ ಅಥವಾ ಯಾವುದಾದರೂ

ಒಂದು ಕಮೀಷನ್ ಸರ್ಕಾರದ ವಿರುದ್ಧವಾಗಿದ್ದರೆ ಬೇಡ. ಮೊನ್ನೆ ಅಫಿಷಿಯಲ್ ರಿಪೋರ್ಟನ್ನೂ ಕೂಡ ತರಿಸಿಕೊಂಡಿದ್ದಾರೆ. ಅಫಿಷಿಯಲ್ ರಿಪೋರ್ಟ್ ಅನ್ನು ಇಟ್ಟುಕೊಂಡು, ಅದು ಗದ್ದೀಗೌಡರದು ಇರಬಹುದು, ವಾಸುದೇವ್ ಸಮಿತಿ ಇರಬಹುದು ಅಥವಾ ಉಂಡೇಕಾರ್ ಸಮಿತಿ ಇರಬಹುದು, ಯಾವ ಸಮಿತಿಯ ವರದಿ ತೆಗೆದುಕೊಂಡರೂ ಅದು ಯಾದಗಿರಿ ಪರವಾಗಿಯೇ ಇದೆ. ಆದರೆ ಮುಖ್ಯ ಮಂತ್ರಿಗಳಿಗೆ ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಧೈರ್ಯ ಬಂತು. ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಏಕೆ ಧೈರ್ಯ ಬರಲಿಲ್ಲ ಎಂದು ನಾನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಅದನ್ನು ಜಿಲ್ಲೆಯನ್ನಾಗಿ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಆದರ ಬಗ್ಗೆ ರಾಜಕಾರಣ ಬೇಡ. ಸಮಿತಿಯ ವರದಿಗಳು ಏನಿವೆ, ಮೂರು ಸಮಿತಿಯ ವರದಿಗಳು ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡಬೇಕು ಎನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನನಗೊಂದು ಸಂಶಯ ಬರುತ್ತಿದೆ, ನೀವು ಸರ್ಕಾರವನ್ನು ಭದ್ರವಾಗಿ ಹಿಡಿದುಕೊಂಡಿದ್ದರಿಂದ ಚಾಮರಾಜನಗರವನ್ನು ಜಿಲ್ಲೆಯಾನ್ನಾಗಿ ಬೇಗನೆ ಮಾಡಿದರು. ನಾವು ವಿರೋಧ ಪಕ್ಷದಲ್ಲಿರುವುದರಿಂದ ಬಹುಶಃ ನಮ್ಮನ್ನು ಕಡೆಗಾಣಿಸಿರಬೇಕು ಎಂದು ನನಗೆ ಸಂಶಯ ಬರುತ್ತಿದೆ.

ಶ್ರೀ ವಾಟಾಳ್ ನಾಗರಾಜ್ :- ಕೇಳಿ, ಹಗಲೂ ರಾತ್ರಿ ಸರ್ಕಾರವನ್ನು ಹಿಡಿದುಕೊಂಡು ಅವರ ಸರ್ಕಾರವನ್ನು ಉಳಿಸಿದವರು ಇವರೇ. ನನ್ನೊಬ್ಬನಿಂದ ಈ ಸರ್ಕಾರ ಉಳಿದಿಲ್ಲ. ಕಾಂಗ್ರೆಸ್‌ನಿಂದ ನಿರಂತರವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಳಿದಿದ್ದವು. ಆದರೆ ಸುಮ್ಮನೆ ನನ್ನನ್ನು ಹಿಡಿದುಕೊಂಡು, ಹೋಗಿ ಬಂದು ಯಾರೋ ಏನೋ ಮಾಡಿದರಂತೆ ಎನ್ನುವ ಹಾಗೆ ಹೇಳುತ್ತಿದ್ದಾರೆ. ಇದು ಅರ್ಥವಿಲ್ಲದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಪದೇ ಪದೇ ಹೇಳುತ್ತಿದ್ದೀರಿ, ನಾನು ಸರ್ಕಾರವನ್ನು ಬೀಳಿಸಲು ಬಿಡುವುದಿಲ್ಲ, ಭದ್ರವಾಗಿ ಹಿಡಿದುಕೊಂಡಿದ್ದೇನೆ ಎಂದು. ನೀವೇ ಹೇಳುತ್ತಿದ್ದೀರಿ ಅದನ್ನು, ನಾವು ಹೇಳಿದೆವೇ?

ಶ್ರೀ ವಾಟಾಳ್ ನಾಗರಾಜ್ :- ಮಾರಿ ಕಣ್ಣು ಹೋತನ ಮೇಲೆ ಎನ್ನುವ ಹಾಗೆ ಯಾವಾಗಲೂ ಇವರ ಕಣ್ಣು ನನ್ನ ಮೇಲೇ. ನಾನು ಇವರಿಗೆ ಎಷ್ಟು ಬೆಂಬಲ ಕೊಟ್ಟರೂ ವಿರೋಧ ಪಕ್ಷದ ನಾಯಕರಿಗೆ ನನ್ನ ಮೇಲೆ ಇನ್ನೂ ಅನುಮಾನಗಳಿವೆ. ಇದು ಒಳ್ಳೆಯ ನೀತಿಯಲ್ಲ ಎನ್ನತಕ್ಕಂಥ ಮಾತನ್ನು ತಮಗೆ ಹೇಳುತ್ತೇನೆ. ಜಿಲ್ಲೆಗಳ ಪುನರ್ ವಿಂಗಡನೆ ಏನು ಮಾಡಿದರು, ಅದೇ ದೃಷ್ಟಿಯಲ್ಲಿ ಇವತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಮತ್ತು ಕೊಡಗಿನ ಪ್ರದೇಶದಲ್ಲಿ ಒಂದು ರೀತಿಯ ಅಸಮಾಧಾನ ತಾಂಡವವಾಡುತ್ತಿದೆ. ಉತ್ತರ ಕರ್ನಾಟಕ ಪ್ರದೇಶದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಕೇಂದ್ರ ಸರ್ಕಾರದಿಂದ ಆಗಬೇಕಾದಂತಹ ರೈಲ್ವೆ ಬೇಡಿಕೆಯೂ ಈಡೇರಿಲ್ಲ, ಅನೇಕ ಪ್ರಮುಖವಾದಂತಹ ಕೆಲಸ ಕಾರ್ಯಗಳು ಆಗಿಲ್ಲದೇ ಇರತಕ್ಕಂತಹ ಮಾತಿನ ಕೂಗು ಎಲ್ಲಿಗೆ ಹೋಗುತ್ತಿದೆ ಎಂದರೆ ಕರ್ನಾಟಕ ಏಕೀಕರಣಕ್ಕೆ ವಿರದ್ದುವಾದಂತಹ ಕೂಗು ಏಳುತ್ತದೆಂದು ನಾನು ತಮಗೆ ಹೇಳುತ್ತಿದ್ದೇನೆ. ಅದಕ್ಕಾಗಿ ಉತ್ತರ ಕರ್ನಾಟಕದ ಸಮರ್ಪಕ ಅಭಿವೃದ್ಧಿಯ ಪರಿಶೀಲನೆಗಾಗಿ ಒಂದು

ಏಕ ಸದಸ್ಯ ಆಯೋಗವನ್ನು ರಚನೆ ಮಾಡಿ ಏನೇನು ಕುಂಠಿತವಾಗಿದೆ ಏನೇನು ಮಾಡಬೇಕಾಗಿದೆ ಎನ್ನುವುದನ್ನು ವರದಿ ತರಿಸಿಕೊಂಡು, ಆ ವರಿದಿಯ ಆಧಾರದ ಮೇಲೆ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನು ಕೊಡಗು ಜಿಲ್ಲೆಯ ಬಗ್ಗೆಯೂ ತಮಗೆ ಏನು ಹೇಳುತ್ತಿದ್ದೇನೆಂದರೆ ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಹೇಳತಕ್ಕಂಥದ್ದು ಏನಿದೆ ಅದಕ್ಕೆ ನಮ್ಮ ಬೆಂಬಲ ಇಲ್ಲ. ಆದರೆ ಅವರ ಕೂಗು ಏನಿದೆ, ಆ ಕೂಗಿನ ನೋವಿನ ಹಿಂದೆ ಏನಿದೆ ಎಂದು ಹೇಳಿದರೆ ಪ್ರಮಾಣಿಕವಾಗಿ ಆ ನೋವಿನ ಹಿಂದೆ ಬಹಳ ನೋವು ಇದೆ. ಆದ್ದರಿಂದ, ಕೊಡಗು ಜಿಲ್ಲೆಯ ಸಮರ್ಪಕ ಅಭಿವೃದ್ಧಿಗೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಪಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3. ಪ್ರಕಟಣೆ

ಉಪಾಧ್ಯಕ್ಷರು :- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 25ನೇ ಮಾರ್ಚ್ 1998 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 1997.

2. ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 1997.

ಈ ಸಭೆಯನ್ನು ಮುಂದೂಡಿ ಮತ್ತೆ 2. 30ಕ್ಕೆ ಸಮಾವೇಶಗೊಳ್ಳುವುದು.

(ಸಭೆಯು ಮಧ್ಯಾಹ್ನ 1. 32 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 2. 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಮತ್ತೆ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಬಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ:- ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶ ಕೊಡಿ,

ಅಧ್ಯಕ್ಷರು:- ದಯಮಾಡಿ ಸಹಕರಿಸಬೇಕು. ಉತ್ತರವನ್ನು ಪ್ರಾರಂಭ ಮಾಡಿಸುತ್ತೇನೆ. ಇದಕ್ಕಾಗಿಯೇ ಪ್ರಶ್ನೋತ್ತರವನ್ನೂ ಮುಂದಕ್ಕೆ ಹಾಕಿದ್ದೇನೆ. ನಿನ್ನೆ, ಮೊನ್ನೆ ಯಾರೂ ಮಾತನಾಡಲಿಲ್ಲ. ಕ್ಲಾರಿಫಿಕೇಷನ್ ಕೇಳುವಾಗ ಮಾತನಾಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ:- ನನಗೆ 10 ನಿಮಿಷಗಳ ಕಾಲ ಅವಕಾಶ ಕೊಡಿ....

ಅಧ್ಯಕ್ಷರು :- ಆಯಿತು. 10 ನಿಮಿಷದಲ್ಲಿ ಮಾತನಾಡಿ ಮುಗಿಸಿ. 3 ಗಂಟೆಗೆ ಉತ್ತರವನ್ನು ಪ್ರಾರಂಭ ಮಾಡಿಸೋಣ.